بِسۡمِ اللہِ الرَّحۡمٰنِ الرَّحِیۡمِ　نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ　وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ವರ್ಷ: 02

ಕನ್ನಡ
# ಬದರ್
ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 01

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

07 ಜನವರಿ 2021, 07 ಸುಲಹ್ 1400 ಹಿಜರಿ ಶಮ್ಸಿ,
22 ಜಮಾದಿಉಲ್ ಅವ್ವಲ್ 1442 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِکْ لَنَا فِیْ عُمُرِہٖ وَاَمْرِہٖ۔

## ಅಲ್ಲಾಹನ ಉಪದೇಶ

مَنۡ کَانَ یُرِیۡدُ ثَوَابَ الدُّنۡیَا
فَعِنۡدَ اللّٰہِ ثَوَابُ الدُّنۡیَا وَالۡاٰخِرَۃِ ؕ
وَکَانَ اللّٰہُ سَمِیۡعًۢا بَصِیۡرًا ۝

*(ಅನ್ನಿಸಾಅ್:135)*

ಅಂದರೆ: ಯಾವನು ಇಹಲೋಕದ ಪ್ರತಿಫಲವನ್ನು ಬಯಸುತ್ತಾನೋ (ಅವನು ತಿಳಿದುಕೊಳ್ಳಲಿ) ಅಲ್ಲಾಹನ ಬಳಿ ಇಹಲೋಕದ ಮತ್ತು ಪರಲೋಕದ (ಎರಡು ವಿಧ) ಪ್ರತಿಫಲಗಳಿವೆ. ಅಲ್ಲಾಹನು ಎಲ್ಲವನ್ನು ಕೇಳುವವನೂ ಕಾಣುವವನೂ ಆಗಿದ್ದಾನೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಹಝ್ರತ್ ರಸೂಲುಲಾಹ್(ಸ) ರವರ ಪ್ರಾರ್ಥನೆಯ ಪವಾಡ

ಹಝ್ರತ್ ಅನಸ್ ಬಿನ್ ಮಾಲಿಕ್(ರ) ಯಿಂದ ವರದಿಯಾಗಿದೆ ನಬಿ(ಸ) ರವರ ಕಾಲದಲ್ಲಿ ಜನರ ಮೇಲೆ ಬರ ಬಂದಿತ್ತು. ಅದೇ ವೇಲೆ ನಬಿ(ಸ) ಜಮುಅ ದಿವಸ ಖುತುಬ ನೀಡುತ್ತಿದ್ದರು. ಒಬ್ಬ ಹಳ್ಳಿಗನು ಎದ್ದು ನಿಂತು ಹೇಳಿದನು. ಓ ನಬಿವರ್ಯರೇ! ದನಗಳು ಸತ್ತು ಹೋಗಿವೆ ಮತ್ತು ಮಕ್ಕಳು ಹಸಿವಿನಿಂದಿದ್ದಾರೆ. ತಾವು ನಮಗಾಗಿ ಪ್ರಾರ್ಥಿಸಿರಿ. ಆಗ ಅವರು ಎರಡೂ ಕೈಗಳನ್ನು ಮೇಲಕ್ಕೆತ್ತಿದರು. ಆಗ ಸ್ಥಿತಿ ಹೇಗಿತ್ತೆಂದರೆ ಆಕಾಶದಲ್ಲಿ ಮೋಡಗಳ ಕುರುಹುಗಳೇ ಇರಲಿಲ್ಲ. ಆ ದೇವವಾಣಿ ಅವನ ಕೈಯಲ್ಲಿ ನಮ್ಮ ಜೀವವಿದೆ. ಮೋಡಗಳು ಪರ್ವತಗಳ ರೀತಿಯಲ್ಲಿ ಮೇಲೆದ್ದು ಬಂದವು. ಮತ್ತು ಮಳೆಯ ಹನಿಗಳು ಅವರ ಗಡ್ಡ ತೇವಗೊಂಡು ಇಳಿಯುವವರೆಗೆ ಮೆಟ್ಟಿಲುಗಳಿಂದ ಇಳಿದು ಬರಲಿಲ್ಲ. ಅಂತೂ ದಿನವಿಡೀ ನಮ್ಮ ಮೇಲೆ ಮಳೆ ಆಗತೊಡಗಿತ್ತು. ಹಾಗೆಯೇ ಮರುದಿನವು ಸಹ ಮತ್ತು ಅದರ ಮರು ದಿನ ಸಹ ಹೀಗೆ ಆಯಿತು ಮುಂದಿನ ಜಮುಅ ತನಕ ಆಯಿತು. ವರದಿಗಾರರು ಹೇಳುತ್ತಾರೆ. ಮತ್ತೆ ಅದೇ ಹಳ್ಳಿಯವನು ಅಥವಾ ಇನ್ನಾವುದೇ ವ್ಯಕ್ತಿ ಎದ್ದು ನಿಂತು ಹೇಳಿದನು. ಓ ನಬಿವರ್ಯರೇ! ಮನೆಗಳು ಬಿದ್ದು ಹೋದವು. ದನಗಳು ಮುಳುಗಿ ಹೋದವು. ನೀವು ನಮಗಾಗಿ ದುಆ ಮಾಡಿರಿ. ಅಗ ಅವರು ಕೈ ಮೇಲಕ್ಕೆತ್ತಿದರು. ಮತ್ತು ನುಡಿದರು. ಓ ಅಲ್ಲಾಹನೆ ಮಳೆಯೂ ನಮ್ಮ ಅಕ್ಕಪಕ್ಕದಲ್ಲಾಗಲೀ ನಮ್ಮ ಮೇಲೆ ಬೇಡ. ಅವರು ಮೋಡದ ಯಾವ ದಿಕ್ಕಿನೆಡೆ ಕೈಸನ್ನೇ ಮಾಡುತ್ತಿದ್ದರೋ ಅಲ್ಲಿಂದ ಮೊಡ ಹರಿದು ಹೋಗುತ್ತಿತ್ತು. ಮದೀನವು ಕೆರೆಯಂತೆ ಆಗಿಬಿಟ್ಟಿತು. ಖನಾತ್ ಎಂಬ ಕಾಲುವೆಯೂ ತಿಂಗಳಿಡಿ ಹರಿಯುತಿತ್ತು. ಪ್ರತಿ ದಿಕ್ಕಿನಿಂದ ಬರುವವರೆಗೂ ಮಳೆಯ ಕುರಿತೇ ಮಾತನಾಡುತ್ತಿದ್ದರು. (ಬುಖಾರಿ ಸಂಪುಟ 2, ಕಿತಾಬುಲ್ ಜುಮಾ ಮುದ್ರಣ ಖಾದಿಯಾನ್ 2006)

**ಇಂದಿನ ಸಂಶೋಧನೆಗಳಿಂದ ತಿಳಿದು ಬಂದ ವಿಷಯ ಪ್ಲೇಗ್ ರೋಗಕ್ಕೆ ಮೂಲ, ಕ್ರಿಮಿ ಕೀಟಗಳಾಗಿವೆ ಅಥವಾ ಸಣ್ಣ ಕಿಟಾಣುಗಳು ಎಂದು. ನಾನು ಈ ಸಂಶೋಧನೆಗಳನ್ನು ಮೆಚ್ಚುತ್ತೇನೆ. ಏಕೆಂದರೆ ಅದರಿಂದ ರಸೂಲುಲ್ಲಾಹ್(ಸ) ರವರ ಮಹಾನತೆ ಮತ್ತು ಇಸ್ಲಾಮಿನ ಸತ್ಯತೆ ಸಾಬೀತಾಗುತ್ತದೆ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಆಧುನಿಕ ಸಂಶೋಧನೆಗಳು ಇಸ್ಲಾಮಿನ ಸತ್ಯತೆಗೆ ಪುಷ್ಟಿ ನೀಡುತ್ತಿವೆ. ಇಂದಿನ ಸಂಶೋಧನೆಗಳಿಂದ ತಿಳಿದು ಬಂದ ವಿಷಯ ಪ್ಲೇಗ್ ರೋಗಕ್ಕೆ ಮೂಲ ಕ್ರಿಮಿ ಕೀಟಗಳು ಅಥವಾ ಸಣ್ಣ ಕಿಟಾಣುಗಳು ಎಂದು. ನಾನು ಈ ಸಂಶೋಧನೆಗಳನ್ನು ಮೆಚ್ಚುತ್ತೇನೆ. ಏಕೆಂದರೆ ಅದರಿಂದ ರಸೂಲುಲ್ಲಾಹ್(ಸ) ರವರ ಘನತೆ ಮತ್ತು ಇಸ್ಲಾಮಿನ ಸತ್ಯತೆ ಸಾಬೀತಾಗುತ್ತದೆ. ಹದೀಸುಗಳ ವಿವರಗಳಲ್ಲಿ 'ನಗಫ್" ಎಂಬ ಪದ ಬಂದಿದೆ. ನಗಫ್ ಎಂಬುದು ಒಂದು ಹುಳುವಿನ ಹೆಸರಾಗಿದೆ. ಅದು ಮೇಕೆ ಮತ್ತು ಒಂಟೆಯ ಮೂಗಿನಿಂದ ಹೊರಡುತ್ತದೆ. ಅದನ್ನು ಪ್ಲೇಗ್ ಎನ್ನಲಾಗಿದೆ. ಇಂದಿನ ಸಂಶೋಧನೆಗಳ ಬಗ್ಗೆ ಬಹಳ ಗರ್ವಪಡುತ್ತಾರೆ. ಆದರೆ ಪವಿತ್ರ ಧರ್ಮ ಇಸ್ಲಾಮಿನ ಸ್ಥಾಪಕರ ಗ್ರಂಥ ಓದಿದವರು ಎಷ್ಟೊಂದು ಆನಂದ ಪಡೆಯುತ್ತಿರಬಹುದು. ಹದಿಮೂರು ನೂರು ವರ್ಷಗಳ ಹಿಂದೆ ಆ ಪವಿತ್ರ ಪದಗಳು ಬಳಕೆ ಆಗಿದ್ದರ ಬಗ್ಗೆ ಸಾಕ್ಷ್ಯವಹಿಸುತ್ತಾರೆ. ಪವಿತ್ರ ಖುರ್‌ಆನ್ ಸಹ ಅದನ್ನು ಹುಳು ಎಂದೇ ವಾದಿಸುತ್ತದೆ. ಇಗ ಹೊಸ ಸಂಶೋಧನೆಗಳ ಬಗ್ಗೆ ಗರ್ವಪಡುವವರೇ ದೇವರ ಸಲುವಾಗಿಯಾದರೂ ಸ್ವಲ್ಪ ನ್ಯಾಯ ದೃಷ್ಟಿಯಿಂದ ಹೇಳಿ ಇಂತಹ ಸಾಕ್ಷ್ಯ ಹೊಂದಿದ ಧರ್ಮ ಒಂದು ಮಿಥ್ಯವಾಗಬಹುದೇ, ಅದು ಹದಿಮೂರು ನೂರು ವರ್ಷಗಳ ಹಿಂದಿನ ಮಾತುಗಳನ್ನು ಸಾಬೀತುಪಡಿಸುತ್ತಿವೆ. ಇದು ಪವಿತ್ರ ಖುರ್‌ಆನ್ ಮತ್ತು ನಮ್ಮ ನಬಿ(ಸ) ರವರ ಒಪ್ಪತಕ್ಕದಾದ ಪವಾಡಗಳಾಗಿವೆ. ನೋಡಿರಿ **"ಖಲ್ಬ್"** ಎಂದರೆ ಹೃದಯ ಚಲನೆಯನ್ನು ಸಹ ಖಲ್ಬ್ ಎನ್ನುತ್ತಾರೆ.

ಹೃದಯವು ರಕ್ತ ಚಲನೆಯ ಮೇಲೆ ಆಧಾರಿತವಾಗಿದೆ. ಇಂದಿನ ಸಂಶೋಧನೆಗಳು ಒಂದು ದೀರ್ಘ ಅವಧಿಯ ಸತತ ಪ್ರಯತ್ನ ಶ್ರಮ, ಬುದ್ಧಿವಂತಿಕೆ ಉಪಯೋಗಿಸಿ ರಕ್ತ ಚಲನೆಯ ಸಮಸ್ಯೆಯನ್ನು ಕಂಡುಹಿಡಿದಿದ್ದಾರೆ. ಆದರೆ ಇಸ್ಲಾಮ್ ಧರ್ಮವು ಮೊದಲೆ ಹೃದಯದ ಹೆಸರನ್ನು "ಖಲ್ಬ್" ಎಂದು ಹೆಸರಿಸಿ ಅದೇ ಸತ್ಯವನ್ನು ಕೇಂದ್ರೀಕೃತಗೊಳಿಸಿ ಸುರಕ್ಷಿತಗೊಳಿಸಿದೆ.

**(ಮಲ್ಫೂಝಾತ್, ಸಂಪುಟ 1, ಪುಟ–236–237, ಮುದ್ರಣ ಖಾದಿಯನ್ 2018)**

**ಯಾವ ದೇವನು ನಿಮಗೆ ನಿರ್ಜೀವದಿಂದ ಸಜೀವಗೊಳಿಸಿದ್ದಾನೆ. ಸಜೀವಗೊಳಿಸಿದ ನಂತರ ಮರಣ ನೀಡುವನು. ಇದರನ್ವಯ ಮರಣದ ನಂತರ ಇನ್ನೊಂದು ಜೀವನವಿಲ್ಲವೆಂದು ಭಾವಿಸುವುದು ಅವಿವೇಕವಲ್ಲವೆ.**

ಸೂರ: ಅಲ್ ಬಖರ ವಚನ 29 **"ಕೈಫ ತಕ್‌ಫುರೂನ ಬಿಲ್ಲಾಹಿ ವ ಕುನ್‌ತುಮ್ ಅಮ್ವಾತ ಫಅಹ್ಯಾಕುಮ್. ಸುಮ್ಮ ಯುಮೀತುಕುಮ್ ಸುಮ್ಮ ಯುಹ್ಯೀಕುಮ್ ಸುಮ್ಮ ಇಲೈಹಿ ತುರ್‌ಜೂನ್**" ನ ವ್ಯಾಖ್ಯಾನ ಮಾಡುತ್ತ ಸಯ್ಯದ್‌ನ ಹಜ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ.

ನೀವು ಅಲ್ಲಾಹನ ಅಸ್ತಿತ್ವವನ್ನು ಹೇಗೆ ಅಲ್ಲಗಳೆಯಬಲ್ಲಿರಿ? ನೀವು ನಿರ್ಜೀವರಾಗಿದ್ದಾಗ ಅವನು ಜೀವನ ನೀಡಿದನು. ಮುಂದೆ ಅವನು ನಿಮ್ಮನ್ನು ಮೃತಪಡಿಸುವನು ಮತ್ತು ಪುನಃ ಜೀವಂತಗೊಳಿಸುವನು. ಹೀಗಿರುವಾಗ ಮೃತಪಡಿಸಿದ ನಂತರ ಪುನರ್‌ಜೀವಂತಗೊಳಿಸುವುದಿಲ್ಲ ಎಂದು ಭಾವಿಸುವುದು ವಿವೇಕಕ್ಕೆ ವಿರುದ್ಧವಾದ ಮಾತಾಗಿದೆ. ಪುನಃ ಜೀವಂತವಾಗುವುದಾದರೆ ಖಂಡಿತವಾಗಿಯೂ ಮಾರ್ಗದರ್ಶನ ಅವಶ್ಯಕತೆ ಇರುತ್ತದೆ. ಅ ಮೂಲಕ ಮನುಷ್ಯನು ಆ ಪುನಃ ಜೀವಂತ ಕಾಲಕ್ಕಾಗಿ ಸಿದ್ಧತೆ ಮಾಡಿಕೊಳ್ಳಬೇಕಾಗಿದೆ.

ಎಷ್ಟು ಸರಳವಾದ ಮತ್ತು ಸೂಕ್ಷ್ಮವಾದ ತರ್ಕವಾಗಿದೆ. ಒಂದು ವಿಶೇಷವಾದ ಗುರಿ ಇರುತ್ತಿದ್ದರೆ ಅಲ್ಲಾಹನಿಗೆ ಒಬ್ಬ ನಿರ್ಜೀವವನ್ನು ಜೀವ ನೀಡುವ ಅವಶ್ಯಕತೆ ಏನಿತ್ತು. ಏನು ಗುರಿಯಿಲ್ಲ ಎಂದಾಗಿದ್ದರೆ ಒಬ್ಬ ಜಾಣ್ಮೆ ಜ್ಞಾನ ಹೊಂದಿದವನನ್ನು ಸೃಷ್ಟಿಸಿ ಏಕೆ ಮರಣ ನೀಡಿದನು. ಮರಣದ ನಂತರ ಒಂದು ಉನ್ನತಮಯ ಆಧ್ಯಾತ್ಮಿಕ ಜೀವನ ಸೃಷ್ಟಿಯಲ್ಲದೆ, ಮನುಷ್ಯನಿಗೆ ಇಹಲೋಕದ ಸಂತೋಷ ಸುಖಗಳೇ ಸಾಕಾಗುವಂತಿದ್ದರೆ ಇಷ್ಟೊಂದು ದೀರ್ಘ ಅವದಿಯವರೆಗಿನ ಕರ್ಮಗಳ ನಂತರ ನಿರ್ಜೀವದಿಂದ ಜೀವನ ನೀಡಿ ಏಕೆ ಮರಣ ನೀಡುತ್ತಿದ್ದನು.

ಈ ವಚನದಲ್ಲಿ ಮರಣದ ನಂತರ ಗೋರಿಯಲ್ಲಿ ಯಾವ ಶಿಕ್ಷೆಯೂ ಇಲ್ಲ. ಕೇವಲ ಸ್ವರ್ಗ ನರಕಗಳ ಸಂಬಂಧವಾಗಿರುವುದು ಎಂದು ಭಾವಿಸುವವರ ಭಾವನೆಗಳನ್ನು ರದ್ದು ಮಾಡಲಾಗಿದೆ. ಏಕೆಂದರೆ ಇದರಲ್ಲಿ ಐದು ಕಾಲಮಾನಗಳ ವಿವರವಿದೆ. ಒಂದು ನಿರ್ಜೀವ ಕಾಲಮಾನ ಎರಡನೆಯದು ಐಹಿಕ ಜೀವಿತದ ಕಾಲ. ಮೂರನೆಯದು ದೈಹಿಕ ಮರಣದ ಕಾಲ, ನಾಲ್ಕನೆಯದು ಒಂದು ಹೊಸ ಜೀವನದ ಕಾಲ ಮತ್ತು ಅನಂತರದ ಕಾಲದಲ್ಲಿ ಮನುಷ್ಯನು ಅಲ್ಲಾಹನ ಮುಂದೆ ಹಾಜರಾಗುವನು. ಅಂದರೆ ಅಂತ್ಯ ತೀರ್ಮಾನದ ದಿನ, ಮರಣದ ನಂತರ ಜೀವನ ಮತ್ತು ಜೀವನ ನಂತರ **"ಸುಮ್ಮ'** ಎಂಬ ಪದ ಬಳಕೆ ಮಾಡಿ **ಇಲೈಹಿ ತುರ್‌ಜಊನ್** ಹೇಳಿರುವುದು ಸೂಚಿಸುವುದೇನೆಂದರೆ–ಮರಣದ ನಂತರ ಒಂದು ರೀತಿಯ ಜೀವನವಂತೂ ಲಭಿಸುತ್ತದೆ. ಆದರೆ ಅಂತ್ಯ ತೀರ್ಮಾನದ

***(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)***

# ಖುತ್‌ಬ ಜುಮುಅ

**ಹಝ್ರ್‌ರತ್ ಪೈಗಂಬರ್(ಸ) ಹಝ್ರ್‌ರತ್ ಅಬೂ ಅಯ್ಯೂಬ್ ಅನ್ಸಾರಿಗಾಗಿ(ರ) ಹೀಗೆ ದುಆ ಮಾಡಿದರು: ಅಲ್ಲಾಹುಮ್ಮ ಇಹ್‌ಫಝ್ರ್ ಅಬಾ ಅಯ್ಯೂಬ ಕಮಾ ಬಾತ ಯಹ್‌ಫಝುನೀ. ಎಂದರೆ, ಹೇ ಅಲ್ಲಾಹ್, ಯಾವ ರೀತಿಯಲ್ಲಿ ಅಬೂ ಅನ್ಸಾರಿ ನನಗೆ ಕಾವಲು ನಿಲ್ಲುತ್ತಾ ರಾತ್ರಿ ಪೂರ್ತಿ ಕಳೆದರೋ ಅದೇ ರೀತಿಯಲ್ಲಿ ಅವರನ್ನು ಸಹ ನೀನು ಸಂರಕ್ಷಿಸು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಹಝ್ರ್‌ರತ್ ಔಫ್ ಬಿನ್ ಹಾರಿಸ್ ಬಿನ್ ರಿಫಾಅ ಅನ್ಸಾರಿ(ರ) ಹಾಗೂ ಹಝ್ರ್‌ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಪೈಗಂಬರರು(ಸ) ಹೀಗೆ ಹೇಳಿದ್ದರು: ಮಗ್‌ರಿಬ್ ನಮಾಝ್ ಅನುಷ್ಠಿಸುವುದರಲ್ಲಿ ತಡಮಾಡದ ತನಕ ನನ್ನ ಉಮ್ಮತ್ ಉತ್ತಮ ಸ್ಥಿತಿಯಲ್ಲಿ ಅಥವಾ ಸಹಜ ಸ್ಥಿತಿಯಲ್ಲಿ ಇರುವುದು. ಎಂದರೆ, ಮಗ್‌ರಿಬ್ ನಮಾಝ್ ತಡಮಾಡದೇ ನಿರ್ವಹಿಸಬೇಕು.**

---

**ನಾಲ್ಕು ದಿವಂಗತರಾದ ಭಾರತದಲ್ಲಿ ಜಮಾಅತಿನ ಮುಅಲ್ಲಿಮ್‌ರಾಗಿದ್ದ ಸನ್ಮಾನ್ಯ ಅಬ್ದುಲ್ ಹಯ್ಯ್ ಮಂಡಲ್ ಸಾಹಿಬ್, ಬಂಗಾಳದ, ಮುರ್ಶಿದಾಬಾದ್ ಜಿಲ್ಲೆಯ ಮುಅಲ್ಲಿಮ್‌ರಾಗಿದ್ದ ಸನ್ಮಾನ್ಯ ಸಿರಾಜುಲ್ ಇಸ್ಲಾಂ ಸಾಹಿಬ ಮತ್ತು ಸನ್ಮಾನ್ಯ ಶಾಹಿದ್ ಅಹ್ಮದ್ ಖಾನ್ ಪಾಶಾ ಸಾಹಿಬ್ ಹಾಗೂ ಯು.ಕೆ. ಯ ಶೀಫಲ್ಡಿನ ಸನ್ಮಾನ್ಯ ಸಯ್ಯದ್ ಮಸ್‌ಊದ್ ಅಹ್ಮದ್ ಶಾಹ್ ಸಾಹಿಬ್ ಅವರೆಲ್ಲರ ಜನಾಝ ನಮಾಝ್ ನಿರ್ವಹಣೆ ಹಾಗೂ ಅವರ ಸದ್ಗುಣಗಳ ಪ್ರಸ್ತಾವನೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **20–11–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيمِ- بِسْمِ اللهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ. اَلرَّحْمٰنِ الرَّحِيمِ. مٰلِكِ يَوْمِ الدِّينِ.

اِيَّاكَ نَعْبُدُ وَاِيَّاكَ نَسْتَعِينُ. اِهْدِنَا الصِّرَاطَ الْمُسْتَقِيمَ.

صِرَاطَ الَّذِينَ اَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّآلِّينَ.

ಇಂದು ನಾನು ಮೊದಲು ಪ್ರಸ್ತಾಪಿಸುವ ಸಹಾಬಿಯ ಹೆಸರು ಹಝ್ರ್‌ರತ್ ಔಫ್ ಬಿನ್ ಹಾರಿಸ್ ಬಿನ್ ರಿಫಾಅ ಅನ್ಸಾರಿ ಎಂದಾಗಿದೆ. ವರದಿಗಳಲ್ಲಿ ಅವರ ಹೆಸರು ಔಫ್ ಬಿನ್ ಅಫ್‌ರಾ, ಔಫ್ ಬಿನ್ ಹಾರಿಸ್ ಮತ್ತು ಔಝ್ ಬಿನ್ ಅಫ್‌ರಾ ಎಂದೂ ಬಂದಿವೆ. ಅಫ್‌ರ ಎಂಬುದು ಅವರ ತಾಯಿಯ ಹೆಸರಾಗಿತ್ತು. ಅವರ ಸಂಬಂಧ ಅನ್ಸಾರಿನ ಗೋತ್ರವಾದ ಬನೂ ನಜ್ಜಾರ್‌ನೊಂದಿಗೆ ಆಗಿತ್ತು. ಹಝ್ರ್‌ರತ್ ಮುಆಧ್ ಮತ್ತು ಹಝ್ರ್‌ರತ್ ಮುಅವ್ವಿದ್ ಅವರ ಸಹೋದರರಾಗಿದ್ದರು. ಮಕ್ಕಕ್ಕೆ ಮೊಟ್ಟ ಮೊದಲು ಬಂದು ಬೈಅತ್ ಮಾಡಿದ್ದ ಆರು ಅನ್ಸಾರರಲ್ಲಿ ಹಝ್ರ್‌ರತ್ ಔಫ್(ರ) ಸೇರಿದ್ದರು. ಅವರು ಅಖಬದಲ್ಲಿ ನಡೆದ ಬೈಅತಿನಲ್ಲೂ ಇದ್ದರು. ಅವರು ಇಸ್ಲಾಂ ಸ್ವೀಕರಿಸಿದ ನಂತರ, ಹಝ್ರ್‌ರತ್ ಅಸದ್ ಬಿನ್ ಝುರಾರ ಮತ್ತು ಹಝ್ರ್‌ರತ್ ಅಮ್ಮಾರ ಬಿನ್ ಹಝ್ಮ್‌ರೊಂದಿಗೆ ಸೇರಿಕೊಂಡು ಬನೂ ಮಾಲಿಕ್ ಬಿನ್ ನಜ್ಜಾರಿನ ವಿಗ್ರಹವನ್ನು ಒಡೆದಿದ್ದರು. ಬದ್ರ್ ಯುದ್ಧದ ದಿನದಂದು, ಯುದ್ಧ ಜಾರಿಯಲ್ಲಿದ್ದಾಗ, ಹಝ್ರ್‌ರತ್ ಔಫ್ ಬಿನ್ ಅಫ್‌ರಾ(ರ) ಹಝ್ರ್‌ರತ್ ಪೈಗಂಬರರೊಂದಿಗೆ(ಸ) ಕೇಳಿದರು: ಯಾ ರಸೂಲಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಂ, ಅಲ್ಲಾಹನು ತನ್ನ ದಾಸನ ಯಾವ ಕೆಲಸದಿಂದ ಹೆಚ್ಚು ಸಂತೋಷಗೊಳ್ಳುತ್ತಾನೆ? ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: ದಾಸನ ಕೈ ಯುದ್ಧದಲ್ಲಿ ನಿರತವಾಗಿದ್ದುಕೊಂಡು ರಕ್ಷಾಕವಚವಿಲ್ಲದೆ ನಿರ್ಭಯನಾಗಿ ಹೋರಾಟ ನಡೆಸುವುದನ್ನು ಅಲ್ಲಾಹನು ಹೆಚ್ಚು ಇಷ್ಟಪಡುತ್ತಾನೆ. ಎಂದರೆ, ಯುದ್ಧದ ಮೈದಾನದಲ್ಲಿ ಇರುವಾಗ, ನಿರ್ಭಯದಿಂದ ಹೋರಾಡಬೇಕು. ಆಗ ಹಝ್ರ್‌ರತ್ ಔಫ್ ಬಿನ್ ಅಫ್‌ರಾ(ರ) ತನ್ನ ರಕ್ಷಾಕವಚವನ್ನು ಕಳಚಿದರು ಮತ್ತು ಮುಂದಕ್ಕೆ ಧಾವಿಸಿ ಹೋರಾಡುತ್ತಾ ಶಹೀದ್ ಆದರು. ಬದ್ರ್ ಯುದ್ಧದಲ್ಲಿ, ಔಫ್ ಬಿನ್ ಹಾರಿಸ್ ಮತ್ತು ಅವರ ಸಹೋದರರಾದ ಹಝ್ರ್‌ರತ್ ಮುಅವ್ವಿಧ್‌ರನ್ನು ಅಬೂಜಹಲ್ ಶಹೀದ್ ಮಾಡಿದ್ದನು. ಹದೀಸ್ ಮತ್ತು ಜೀವನಚರಿತ್ರೆಯ ಗ್ರಂಥಗಳಲ್ಲಿ, ಬದ್ರ್ ಯುದ್ಧದಲ್ಲಿ ಅಬೂಜಹಲ್‌ನ ಮೇಲೆ ಹಲ್ಲೆ ನಡೆಸಿದ್ದ ಸಹಾಬರ ಹೆಸರುಗಳು ಇವೆ. ಅವರಲ್ಲಿ ಔಫ್ ಬಿನ್ ಅಫ್‌ರರ ಹೆಸರು ಸಹ ಬರುತ್ತದೆ. ಇದನ್ನು ಹಿಂದೆ ಸಹ ಒಂದು ಸಲ ಪ್ರಸ್ತಾಪಿಸಿದ್ದೆ. ಅವರ ಹೆಸರು ಔಫ್ ಬಿನ್ ಹಾರಿಸ್ ಎಂದಾಗಿತ್ತು ಎಂದು ಸುನನ್ ಅಬೀ ದಾವೂದ್‌ನಲ್ಲಿ ಬಂದಿದೆ. (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–373–375, 370 ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990) (ಅಲ್‌ಅಸಾಬ, ಸಂಪುಟ–4, ಪುಟ–614–615, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1995) (ಅಲ್‌ಇಸ್ತಿಆಬ್, ಸಂಪುಟ–3, ಪುಟ–1225–1226, ದಾರುಲ್ ಜೀಲ್ ಬೈರೂತ್ 1995) (ಸಹೀಹ್ ಬುಖಾರಿ, ಕಿತಾಬ್ ಫರ್‌ಝುಲ್ ಖುಮ್ಸ್, ಹದೀಸ್–3141) (ಸಹೀಹ್ ಬುಖಾರಿ, ಕಿತಾಬುಲ್ ಮಗಾಝಿ, ಹದೀಸ್–3963) (ಸನನ್ ಅಬಿ ದಾವೂದ್, ಕಿತಾಬುಲ್ ಜಿಹಾದ್, ಹದೀಸ್–2680)

ಈ ಎರಡೂ ಹೆಸರುಗಳು ಅವರಿಗೆ ಸಂಬಂಧಿಸಿ ಸಾಮಾನ್ಯವಾಗಿ ಹೇಳಲಾಗುತ್ತದೆ. ಹೇಗಿದ್ದರೂ ಅಬೂಜಹಲನ್ನು ಕೊಲ್ಲುವುದರಲ್ಲಿ ಅವರು ಸೇರಿದ್ದರು ಮತ್ತು ಇವರು ಬದ್ರ್ ಯುದ್ಧದಲ್ಲಿ ಶಹೀದ್ ಆಗಿದ್ದರು.

ಇನ್ನು ಪ್ರಸ್ತಾಪಿಸಲಾಗುವ ಸಹಾಬಿಯ ಹೆಸರು ಹಝ್ರ್‌ರತ್ ಅಬೂ ಅಯ್ಯೂಬ್ ಅನ್ಸಾರಿ ಎಂದಾಗಿದೆ. ಹಝ್ರ್‌ರತ್ ಅಬೂ ಅಯ್ಯೂಬ್ ಅನ್ಸಾರಿಯ ಸರಿಯಾದ ಹೆಸರು ಹಝ್ರ್‌ರತ್ ಖಾಲಿದ್ ಮತ್ತು ಅವರ ತಂದೆಯ ಹೆಸರು ಝೈದ್ ಬಿನ್ ಕುಲೈಬ್ ಎಂದಾಗಿತ್ತು. (ಅಸದುಲ್‌ಗಾಬ, ಸಂಪುಟ–6, ಪುಟ–22, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಇವರು ತಮ್ಮ ಹೆಸರಿನಿಂದಲೂ ಮತ್ತು ಉಪನಾಮದಿಂದಲೂ ಪ್ರಸಿದ್ಧರಾಗಿದ್ದರು. ಹಝ್ರ್‌ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಸಂಬಂಧ ಅನ್ಸಾರಿನ ಗೋತ್ರವಾದ ಖಝ್ರಜಿನ ಶಾಖೆ ಬನೂ ನಜ್ಜಾರ್‌ನೊಂದಿಗೆ ಆಗಿತ್ತು. ಹಝ್ರ್‌ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಅಖಬ ಸಾನಯ ಸಂದರ್ಭದಲ್ಲಿ ಎಪ್ಪತ್ತು ಅನ್ಸಾರ್‌ರೊಡನೆ ಬೈಅತ್ ಮಾಡಲು ಸೌಭಾಗ್ಯವನ್ನು ಪಡೆದಿದ್ದರು. ಹಝ್ರ್‌ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ತಾಯಿಯ ಹೆಸರು ಹಿಂದ್ ಬಿನ್ತ್ ಸಈದ್ ಎಂದಾಗಿತ್ತು. ಇನ್ನೊಂದು ಹೇಳಿಕೆಯ ಪ್ರಕಾರ ಅವರ ಹೆಸರು ಝುಹರ್ ಬಿನ್ತ್ ಸಅದ್ ಎಂದಾಗಿತ್ತು. ಹಝ್ರ್‌ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಪತ್ನಿಯ ಹೆಸರು ಹಝ್ರ್‌ರತ್ ಉಮ್ಮೇ ಹಸನ್ ಬಿನ್ತ್ ಝೈದ್ ಎಂದಾಗಿತ್ತು. ಅವರಿಗೆ ಅಬ್ದುರ್ರಹ್ಮಾನ್ ಎಂಬ ಮಗನಿದ್ದನು. ಹಝ್ರ್‌ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಮತ್ತು ಹಝ್ರ್‌ರತ್ ಮುಸ್‌ಅಬ್ ಬಿನ್ ಉಮೈರರ(ರ) ನಡುವೆ ಹಝ್ರ್‌ರತ್ ಪೈಗಂಬರ್(ಸ) ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದ್ದರು. (ಅಲ್‌ಅಸಾಬ, ಸಂಪುಟ–2, ಪುಟ–200, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1995) (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–368–369, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರ್‌ರತ್ ಪೈಗಂಬರ್(ಸ) ಹಿಜ್ರತ್ ಮಾಡಿ ಮದೀನಕ್ಕೆ ಹೋದಾಗ, ಮಸ್ಜಿದ್ ನಬವೀ ಮತ್ತು ತನ್ನ ಮನೆಯ ನಿರ್ಮಾಣದ ವರೆಗೆ ಹಝ್ರ್‌ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಮನೆಯಲ್ಲಿ ನೆಲೆಸಿದ್ದರು. (ಅಸದುಲ್ ಗಾಬ, ಸಂಪುಟ–6, ಪುಟ–23, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003)

ಹಝ್ರ್‌ರತ್ ಪೈಗಂಬರರ(ಸ) ತಂಗುವಿಕೆಯ ಈ ಘಟನೆಯನ್ನು ಹಝ್ರ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು(ರ) ಸೀರತ್ ಖಾತಮುನ್ನಬಿಯ್ಯೀನಿನಲ್ಲಿ ಹೀಗೆ ವಿವರಿಸಿದ್ದಾರೆ: "ಬನೂ ನಜ್ಜಾರಿಗೆ ತಲುಪಿದ ನಂತರ ಹಝ್ರ್‌ರತ್ ಪೈಗಂಬರ್(ಸ) ಯಾರ ಬಳಿ ಅತಿಥಿಯಾಗಿ ಇರುವರು ಎಂಬ ಸವಾಲು ಎದ್ದಿತ್ತು. ಈ ಸೌಭಾಗ್ಯವನ್ನು ಪಡೆಯಲು ಗೋತ್ರದ ಪ್ರತಿಯೊಬ್ಬರು ಬಯಸುತ್ತಿದ್ದರು. ಎಷ್ಟರ ವರೆಗೆ ಎಂದರೆ, ಕೆಲವರು ತಮ್ಮ ಪ್ರೀತಿಯ ಆವೇಶದಿಂದ ಹಝ್ರ್‌ರತ್ ಪೈಗಂಬರರ(ಸ) ಒಂಟೆಯನ್ನು ನಿಲ್ಲಿಸಲು ಅದರ ಲಗಾಮನ್ನು ಹಿಡಿದಿಡುತ್ತಿದ್ದರು. ಈ ಸ್ಥಿತಿಯನ್ನು ಕಂಡು ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: ನನ್ನ ಒಂಟೆಯನ್ನು ಬಿಟ್ಟುಬಿಡಿರಿ. ಇದೀಗ ಅಲ್ಲಾಹನ ಇಚ್ಛೆ ಪ್ರಕಾರ ನಡೆಯುತ್ತಿದೆ. ಎಂದರೆ, ಅಲ್ಲಾಹನು ಇಚ್ಛಿಸುವಲ್ಲಿ ಇದು ಸ್ವತಃ ಕುಳಿತುಕೊಳ್ಳುವುದು. ಹೀಗೆ ಹೇಳುತ್ತಾ ಹಝ್ರ್‌ರತ್ ಪೈಗಂಬರ್(ಸ) ಸಹ ಅದರ ಲಗಾಮನ್ನು ಸಡಿಲಾಗಿ ಬಿಟ್ಟರು. ಒಂಟೆ ಮುಂದೆ ಸಾಗಿತ್ತು ಮತ್ತು ಸ್ವಲ್ಪ ದೂರ ಮೆಲ್ಲಮೆಲ್ಲನೆ ನಡೆಯುತ್ತಾ ಒಂದು ಸ್ಥಳದಲ್ಲಿ ಕುಳಿತುಕೊಂಡಿತು. ಆದರೆ ಬೇಗನೇ ಅಲ್ಲಿಂದ ಎದ್ದುಕೊಂಡು ಮುಂದಕ್ಕೆ ನಡೆಯಿತು. ಮತ್ತೆ ಕೆಲವು ಹೆಜ್ಜೆಗಳನ್ನು ಹಾಕಿದ ನಂತರ ಪುನಃ ವಾಪಾಸ್ಸು ಬಂದು ಹಿಂದೆ ಕುಳಿತ್ತಿದ್ದ ಅದೇ ಜಾಗದಲ್ಲಿ ಪುನಃ ಕುಳಿತುಕೊಂಡಿತು. ನಂತರ ಕಾಲದಲ್ಲಿ ಮಸ್ಜಿದ್ ನಬವೀ ಮತ್ತು ಹಝ್ರ್‌ರತ್ ಪೈಗಂಬರರ(ಸ) ಕೊಠಡಿಗಳು ಅಲ್ಲೇ ನಿರ್ಮಾಣವಾಗಿತ್ತು. ಅದು ಮದೀನದ ಎರಡು ಹುಡುಗರ ಬಂಜರು ಭೂಮಿಯಾಗಿತ್ತು. ಹೀಗೆ ಒಂಟೆ ಕುಳಿತುಕೊಂಡಾಗ, ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: **ಹಾಧ ಇನ್‌ಶಾ ಅಲ್ಲಾಹುಲ್ ಮಂಝಿಲ್** ಎಂದರೆ, ಅಲ್ಲಾಹನ ಇಚ್ಛೆಯಲ್ಲಿ ಇದೇ ನಮ್ಮ ತಂಗುದಾಣವೆಂದು ತೋರುತ್ತದೆ. ಅನಂತರ ದುಆ ಮಾಡುತ್ತಾ ಒಂಟೆಯಿಂದ ಕೆಳಗೆ ಇಳಿದರು. ಅಲ್ಲಿಯ ಮುಸ್ಲಿಮರಲ್ಲಿ ಆ ಪ್ರದೇಶದಿಂದ ಹೆಚ್ಚು ಸಮೀಪವಿರುವ ಮನೆ ಯಾರದ್ದು ಎಂದು ಹಝ್ರ್‌ರತ್ ಪೈಗಂಬರ್(ಸ) ಕೇಳಿದರು. ಹಝ್ರ್‌ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಬೇಗನೇ ಮುಂದಕ್ಕೆ ಬಂದು ಹೀಗೆ ಹೇಳಿದರು: ನನ್ನ ಮನೆಯಿದೆ ಮತ್ತು ಇದು ಅದರ ಬಾಗಿಲಾಗಿದೆ, ಬನ್ನಿರಿ. ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: ಸರಿ, ಹೋಗಿ ನಮಗಾಗಿ ಇರಲು ಜಾಗವನ್ನು ತಯಾರುಮಾಡು. ಹಝ್ರ್‌ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಬೇಗನೇ ತನ್ನ ಮನೆಯನ್ನು ಸರಿಪಡಿಸಿ ಬಂದರು ಮತ್ತು ಹಝ್ರ್‌ರತ್ ಪೈಗಂಬರರೊಂದಿಗೆ(ಸ) ಮನೆಯೊಳಗೆ ಹೋದರು. ಈ ಮನೆ ಎರಡು ಅಂತಸ್ತಿನ ಕಟ್ಟಡವಾಗಿತ್ತು. ಹಝ್ರ್‌ರತ್ ಪೈಗಂಬರ್(ಸ) ಮೇಲಿನ ಮಹಡಿಯಲ್ಲಿ ತಂಗಬೇಕೆಂದಾಗಿತ್ತು ಹಝ್ರ್‌ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಇಚ್ಛೆ. ಆದರೆ ಭೇಟಿಯಾಗಲು ಬರುವ ಜನರ ಸೌಲಭ್ಯಕ್ಕಾಗಿ ಹಝ್ರ್‌ರತ್ ಪೈಗಂಬರ್(ಸ) ಕೆಳಗಿನ ಮಹಡಿಯಲ್ಲಿ ಇರಲು ಇಷ್ಟಪಟ್ಟರು. ಅಲ್ಲೇ ತಂಗಿದರು. ರಾತ್ರಿಯಾದಾಗ, ಹಝ್ರ್‌ರತ್ ಪೈಗಂಬರ್(ಸ) ಕೆಳಗಿನ ಮಹಡಿಯಲ್ಲಿ ಇದ್ದಾರೆ ಮತ್ತು ನಾವು ಅವರ ಮೇಲಿದ್ದೇವೆ ಎಂಬ ಚಿಂತೆಯಿಂದ ಹಝ್ರ್‌ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಮತ್ತು ಅವರ ಪತ್ನಿಗೆ ರಾತ್ರಿ ಪೂರ್ತಿ ನಿದ್ದೆ ಬರಲಿಲ್ಲ. ಅದಲ್ಲದೆ, ರಾತ್ರಿಯ ವೇಳೆ, ಮೇಲಿನ ಅಂತಸ್ತಿನಲ್ಲಿ ನೀರಿನ ಒಂದು

ಪಾತ್ರೆ ಒಡೆದುಹೋಯಿತು. ನೀರಿನ ಹನಿಗಳು ಕೆಳಗೆ ಸೋರದಿರಲು ಬೇಗನೇ ತನ್ನ ಹೊದಿಕೆಯನ್ನು ನೀರಿನ ಮೇಲೆ ಹಾಕಿ ನೀರನ್ನು ಒಣಗಿಸಿದರು. ಬೆಳಿಗ್ಗೆಯಾದಾಗ, ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾಗಿ ಬಹಳ ಉತ್ತಮ ರೀತಿಯಲ್ಲಿ ಒತ್ತಾಯದಿಂದ ಮೇಲಿನ ಮಹಡಿಯಲ್ಲಿ ತಂಗಲು ವಿನಂತಿಸಿದರು. ಹಝ್ರತ್ ಪೈಗಂಬರ್(ಸ) ಮೊದಲು ಹೋಗುವುದರಿಂದ ಹಿಂಜರಿದರು. ಆದರೆ ಕೊನೆಗೆ ಅಬೂಅಯ್ಯೂಬ್‌ರ ಒತ್ತಾಯವನ್ನು ನೋಡಿ ಒಪ್ಪಿಗೆ ಸೂಚಿಸಿದರು. ಆ ಮನೆಯಲ್ಲಿ ಹಝ್ರತ್ ಪೈಗಂಬರ್(ಸ) ಏಳು ತಿಂಗಳಷ್ಟು ಅಥವಾ ಇಬ್ನು ಇಸ್‌ಹಾಖರ ವರದಿ ಪ್ರಕಾರ ಹಿಜರೀ 2ರ, ಸಫರ್ ತಿಂಗಳ ತನಕ ಅಲ್ಲಿ ನೆಲೆಸಿದ್ದರು. ಒಟ್ಟಿನಲ್ಲಿ, ಮಸ್ಜಿದ್ ನಬವೀ ಮತ್ತು ಅದರೊಂದಿಗೆ ಸೇರಿಕೊಂಡಿದ್ದ ಕೊಠಡಿಗಳು ನಿರ್ಮಾಣವಾಗುವ ವರೆಗೆ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಮನೆಯಲ್ಲೇ ತಂಗಿದ್ದರು. ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹಝ್ರತ್ ಪೈಗಂಬರರಿಗೆ(ಸ) ಊಟ ಕಳುಹಿಸುತ್ತಿದ್ದರು. ಅನಂತರ ಬಾಕಿಯಾಗಿ ಬರುವ ಊಟವನ್ನು ಸ್ವತಃ ತಿನ್ನುತ್ತಿದ್ದರು ಮತ್ತು ಪ್ರೀತಿ ಮತ್ತು ನಿಷ್ಠೆಯ ಕಾರಣದಿಂದ ಹಝ್ರತ್ ಪೈಗಂಬರ್(ಸ) ತಿಂದ ಭಾಗದಲ್ಲೇ ಬೆರಳುಗಳನ್ನು ಹಾಕುತ್ತಿದ್ದರು. ಇತರ ಸಹಾಬಿಯರು ಸಹ ಹಝ್ರತ್ ಪೈಗಂಬರರಿಗೆ(ಸ) ಊಟ ಕಳುಹಿಸುತ್ತಿದ್ದರು. (ಸೀರತ್ ಖಾತಮನ್ನಬೀಈನ್(ಸ), ಪುಟ–267–268)

ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಸಹ ವಿವರಿಸಿದ್ದಾರೆ. ಇದರಲ್ಲಿ ಕೆಲವು ವಾಕ್ಯಗಳು, ಕೆಲವು ಸಂಗತಿಗಳು ಬೇರೆಯೂ ಇರುತ್ತದೆ. ಆದ್ದರಿಂದ ಇದನ್ನು ಸಹ ನಾನು ಪೂರ್ತಿಯಾಗಿ ಓದಿಹೇಳುತ್ತೇನೆ. ಅದೇ ಘಟನೆಯಾಗಿದ್ದರೂ ಹಝ್ರತ್ ಮುಸ್ಲಿಹ್ ಮೌಊದರದ್ದು(ರ) ತನ್ನದೇ ಆದ ಒಂದು ಶೈಲಿಯ ವಿವರಣೆಯಾಗಿದೆ. ಅವರು ಹೇಳುತ್ತಾರೆ: ಮದೀನದಲ್ಲಿ ಪ್ರವೇಶಿಸಿದಾಗ, ಹಝ್ರತ್ ಪೈಗಂಬರ್(ಸ) ತಮ್ಮ ಮನೆಯಲ್ಲಿ ತಂಗಬೇಕೆಂದಾಗಿತ್ತು ಪ್ರತಿಯೊಬ್ಬರ ಅಭಿಲಾಷೆ. ಹಝ್ರತ್ ಪೈಗಂಬರರ(ಸ) ಒಂಟೆ ಯಾವ ಯಾವ ಗಲ್ಲಿಗಳಿಂದ ದಾಟಿ ಹೋಗುತ್ತಿತ್ತೋ ಆ ಗಲ್ಲಿಯ ಕುಟುಂಬದವರು ತಮ್ಮ ಮನೆಗಳ ಮುಂದೆ ನಿಂತುಕೊಂಡು ಹಝ್ರತ್ ಪೈಗಂಬರರನ್ನು(ಸ) ಸ್ವಾಗತಿಸುತ್ತಿದ್ದರು ಮತ್ತು ಹೀಗೆ ಹೇಳುತ್ತಿದ್ದರು: ಯಾ ರಸೂಲಲ್ಲಾಹ್, ಇದು ನಮ್ಮ ಮನೆಯಾಗಿದೆ. ಇವು ನಮ್ಮ ಸಂಪತ್ತಾಗಿವೆ. ಇವು ನಮ್ಮ ಜೀವಗಳಾಗಿವೆ. ಇವೆಲ್ಲವೂ ನಿಮ್ಮ ಸೇವೆಗಾಗಿ ಹಾಜರಾಗಿವೆ. ಯಾ ರಸೂಲಲ್ಲಾಹ್, ನಾವು ನಿಮ್ಮನ್ನು ಸಂರಕ್ಷಿಸಲು ಯೋಗ್ಯರೂ ಸಮರ್ಥರೂ ಆಗಿದ್ದೇವೆ. ನೀವು ನಮ್ಮ ಬಳಿಯೇ ತಂಗಿರಿ. ಕೆಲವರು ಆವೇಶದಿಂದ ಮುಂದಕ್ಕೆ ಬರುತ್ತಿದ್ದರು ಮತ್ತು ಹಝ್ರತ್ ಪೈಗಂಬರರನ್ನು(ಸ) ತಮ್ಮ ಮನೆಗಳಿಗೆ ಕರೆಸಲು ಹಝ್ರತ್ ಪೈಗಂಬರರ(ಸ) ಒಂಟೆಯ ಲಗಾಮನ್ನು ಹಿಡಿದಿಡುತ್ತಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ಪ್ರತಿಯೊಬ್ಬರೊಡನೆ ಹೀಗೆ ಹೇಳುತ್ತಿದ್ದರು: ನನ್ನ ಒಂಟೆಯನ್ನು ಬಿಟ್ಟುಬಿಡಿರಿ. ಇಂದು ಇದು ಅಲ್ಲಾಹನ ಆದೇಶದ ಪ್ರಕಾರ ನಡೆಯುತ್ತಿದೆ. ಅಲ್ಲಾಹನು ಇಚ್ಛಿಸುವಲ್ಲೇ ಇದು ನಿಲ್ಲುವುದು. ಕೊನೆಗೆ ಅದು ಮದೀನದ ಒಂದು ಬದಿಯಲ್ಲಿ ಬನೂನಜ್ಜಾರಿನ ಅನಾಥರ ಒಂದು ಭೂಮಿಯ ಸಮೀಪಕ್ಕೆ ಹೋಗಿ ಅಲ್ಲಿ ನಿಂತಿತ್ತು. ಹಝ್ರತ್ ಪೈಗಂಬರ್(ಸ) ಹೇಳಿದರು: ನಾವು ಇಲ್ಲಿ ತಂಗಬೇಕು ಎಂಬುವುದಾಗಿದೆ ಅಲ್ಲಾಹನ ಇಚ್ಛೆಯೆಂದು ತೋರುತ್ತದೆ. ಇದು ಯಾರ ಪ್ರದೇಶವಾಗಿದೆ? ಎಂದು ಕೇಳಿದರು. ಆ ಪ್ರದೇಶ ಕೆಲವು ಅನಾಥರದ್ದಾಗಿತ್ತು. ಅವರ ಪೋಷಕರು ಮುಂದೆ ಬಂದು ಹೇಳಿದರು: ಯಾ ರಸೂಲಲ್ಲಾಹ್, ಇದು ಕೆಲವು ಅನಾಥರ ಭೂಮಿಯಾಗಿದೆ. ಇದನ್ನು ನಿಮ್ಮ ಸೇವೆಗಾಗಿ ಸಮರ್ಪಿಸುತ್ತೇವೆ. ಹಝ್ರತ್ ಪೈಗಂಬರ್(ಸ) ಹೇಳಿದರು: ನಾವು ಯಾರ ಸಂಪತ್ತನ್ನು ಉಚಿತವಾಗಿ ಪಡೆಯಲಾರೆವು. ಕೊನೆಗೆ ಅದಕ್ಕೆ ಒಂದು ಮೌಲ್ಯವನ್ನು ನಿಶ್ಚಯಿಸಲಾಯಿತು. ಹಝ್ರತ್ ಪೈಗಂಬರ್(ಸ) ಆ ಜಾಗದಲ್ಲಿ ಮಸೀದಿ ಮತ್ತು ತನ್ನ ಮನೆಯನ್ನು ಕಟ್ಟಲು ತೀರ್ಮಾನಿಸಿದರು. ಆ ಪ್ರದೇಶಕ್ಕೆ ಅತಿ ಹತ್ತಿರವಿರುವ ಮನೆ ಯಾರದ್ದು ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಮುಂದೆ ಬಂದು ಹೇಳಿದರು: ಯಾ ರಸೂಲಲ್ಲಾಹ್, ನನ್ನ ಮನೆ ಎಲ್ಲರಿಗಿಂತ ಹತ್ತಿರವಿದೆ ಮತು ಅದನ್ನು ನಿಮ್ಮ ಸೇವೆಗಾಗಿ ಹಾಜರುಪಡಿಸುತ್ತೇನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಮನೆಗೆ ಹೋಗಿರಿ ಮತ್ತು ನನಗಾಗಿ ಕೊಠಡಿಯನ್ನು ಸರಿಪಡಿಸಿಡಿರಿ. ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಮನೆ ಎರಡು ಅಂತಸ್ತಿನದ್ದಾಗಿತ್ತು. ಅವರು ಹಝ್ರತ್ ಪೈಗಂಬರರಿಗೆ(ಸ) ಮೇಲಿನ ಮಹಡಿಯಲ್ಲಿ ತಂಗಲು ವಿನಂತಿಸಿದರು. ಆದರೆ, ಭೇಟಿಯಾಗಲು ಬರುವವರಿಗೆ ತೊಂದರೆಯಾದೀತು ಎಂಬ ಯೋಚನೆಯಿಂದ ಕೆಳಗಿನ ಮಹಡಿಯನ್ನು ಇಷ್ಟಪಟ್ಟರು. ಅನ್ಸಾರರಿಗೆ ಹಝ್ರತ್ ಪೈಗಂಬರರೊಂದಿಗೆ ಇದ್ದ ಅತಿಯಾದ ಪ್ರೀತಿಯ ಪ್ರಕಟಣೆ ಈ ಸಂದರ್ಭದಲ್ಲೂ ಕಾಣಬಹುದಾಗಿತ್ತು. ಹಝ್ರತ್ ಪೈಗಂಬರರ(ಸ) ಒತ್ತಾಯದ ಕಾರಣದಿಂದ ಅವರನ್ನು ಕೆಳಗಿನ ಮಹಡಿಯಲ್ಲಿ ಇರಿಸಲು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ತಯಾರಾಗಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ಕೆಳಗಿನ ಮಹಡಿಯಲ್ಲಿ ಮಲಗುತ್ತಿರುವಾಗ, ಮೇಲಿನ ಮಹಡಿಯಲ್ಲಿ ಮಲಗುವುದು ಅಪಮರ್ಯಾದೆಯಾಗಿದೆ ಎಂಬ ಚಿಂತೆಯಿಂದ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಮತ್ತು ಅವರ ಪತ್ನಿ ರಾತ್ರಿಪೂರ್ತಿ ಮಲಗದೇ ಎಚ್ಚೆತ್ತಿದ್ದರು. ಇದಾಗಿತ್ತು ಅವರಿಗೆ ಹಝ್ರತ್ ಪೈಗಂಬರರೊಂದಿಗೆ(ಸ) ಇದ್ದ ಪ್ರೀತಿ. ಅದೇ ರಾತ್ರಿ ನೀರಿನ ಒಂದು ಪಾತ್ರೆ ಮಗುಚಿ ಬಿತ್ತು. ಕೆಳಗಿನ ಮಹಡಿಗೆ ನೀರು ಸೋರಿ ಹೋಗದಿರಲು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಓಡಿಹೋಗಿ ತನ್ನ ಹಾಸಿಗೆಯನ್ನು ಆ ನೀರಿನ ಮೇಲೆ ಹಾಕಿಕೊಂಡು ಅದರ ತೇವವನ್ನು ಒಣಗಿಸಿದರು. ಬೆಳಿಗ್ಗೆಯಾದಾಗ, ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾದರು ಮತ್ತು ಪೂರ್ತಿ ಸ್ಥಿತಿಗತಿಗಳನ್ನು ವಿವರಿಸಿದರು. ಇದನ್ನು ಕೇಳಿದಾಗ, ಹಝ್ರತ್ ಪೈಗಂಬರ್(ಸ) ಮೇಲೆ ಹೋಗಲು ಒಪ್ಪಿದರು. ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ದಿನಾಲೂ ಊಟ ತಯಾರುಮಾಡಿ ಹಝ್ರತ್ ಪೈಗಂಬರರಿಗೆ(ಸ) ಕಳುಹಿಸುತ್ತಿದ್ದರು. ಬಾಕಿಯಾಗಿ ವಾಪಾಸ್ಸು ಬರುತ್ತಿದ್ದ ಊಟವನ್ನು ಮನೆಯವರೆಲ್ಲರೂ ತಿನ್ನುತ್ತಿದ್ದರು. ಕೆಲವು ದಿನಗಳ ನಂತರ ಇತರ ಅನ್ಸಾರರು ಸಹ ಅತಿಥಿ ಸತ್ಕಾರದ ಮಾಡುವ ಸೌಭಾಗ್ಯಕ್ಕಾಗಿ ಒತ್ತಾಯದಿಂದ ವಿನಂತಿಸಿದರು. ಹೀಗೆ ಹಝ್ರತ್ ಪೈಗಂಬರರಿಗೆ(ಸ) ಸ್ವಂತ ಮನೆಯ ವ್ಯವಸ್ಥೆಯಾಗುವ ವರೆಗೆ ಮದೀನದ ಮುಸ್ಲಿಮರು ಒಬ್ಬೊಬ್ಬರಾಗಿ ಊಟ ತಲುಪಿಸುತ್ತಿದ್ದರು.” (ದೀಬಾಚ ತಫ್‌ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–228–229)

ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಅವರ ಮನೆಯಲ್ಲಿ ತಂಗಲು ಬಂದರು. ಹಝ್ರತ್ ಪೈಗಂಬರ್(ಸ) ಕೆಳಗಿನ ಮಹಡಿಯಲ್ಲಿ ಮತ್ತು ನಾವು ಮೇಲಿನ ಮಹಡಿಯಲ್ಲಿ ಇದ್ದೆವು. ರಾತ್ರಿ ಸಮಯದಲ್ಲಿ ನಾವು ಎಚ್ಚೆತ್ತೆವು. ಹಝ್ರತ್ ಪೈಗಂಬರರ(ಸ) ತಲೆಯ ಮೇಲಿಂದ ನಡೆಯುತ್ತಿದ್ದೇವೆ ಎಂಬ ಚಿಂತೆಯಿಂದ ಒಂದು ಬದಿಗೆ ಹೋಗಿಕೊಂಡು, ಒಂದು ಮೂಲೆಯಲ್ಲಿ ರಾತ್ರಿಯನ್ನು ಕಳೆದೆವು. ಅನಂತರ ನಾನು ಇದರ ಬಗ್ಗೆ ಹಝ್ರತ್ ಪೈಗಂಬರರಿಗೆ(ಸ) ತಿಳಿಸಿದೆ. ಕೆಳಗಿನ ಮಹಡಿ ಹೆಚ್ಚು ಅನುಕೂಲಕರವೆಂದು ಹಝ್ರತ್ ಪೈಗಂಬರ್(ಸ) ನನ್ನೊಡನೆ ಹೇಳಿದರು. ಹಝ್ರತ್ ಪೈಗಂಬರ್(ಸ) ಇರುವ ಮಹಡಿಯ ಮೇಲೆ ಇರಲು ನನಗೆ ಸಾಧ್ಯವಿಲ್ಲವೆಂದು ನಾನು ಹೇಳಿದೆ. ಹೀಗೆ ಹಝ್ರತ್ ಪೈಗಂಬರ್(ಸ) ಮೇಲಕ್ಕೆ ಸ್ಥಳಾಂತರಗೊಂಡರು ಮತ್ತು ನಾನು ಕೆಳಗೆ ಬಂದೆ. ನಾನು ಹಝ್ರತ್ ಪೈಗಂಬರರಿಗೆ(ಸ) ಊಟ ತಯಾರುಮಾಡುತ್ತಿದ್ದೆ. ಹಝ್ರತ್ ಪೈಗಂಬರರ(ಸ) ಬಳಿಯಿಂದ ಊಟ ವಾಪಾಸ್ಸು ಬರುವಾಗ, ಅವರ ಬೆರಳುಗಳು ಎಲ್ಲಿಯೆಲ್ಲ ಮುಟ್ಟಿದ್ದವು ಎಂದು ಊಟ ವಾಪಾಸ್ಸು ತರುವ ವ್ಯಕ್ತಿಯೊಡನೆ ನಾನು ಕೇಳುತ್ತಿದ್ದೆ. ಅನಂತರ ನಾನು ಹಝ್ರತ್ ಪೈಗಂಬರ್(ಸ) ಬೆರಳುಗಳನ್ನು ಹಾಕಿದ್ದ ಅದೇ ಜಾಗದಿಂದ ಊಟ ಮಾಡುತ್ತಿದ್ದೆ. ನಾವು ಒಂದು ಸಲ ತಯಾರುಮಾಡಿದ ಊಟದಲ್ಲಿ ಬೆಳ್ಳುಳ್ಳಿ ಹಾಕಲಾಗಿತ್ತು. ಊಟ ವಾಪಾಸ್ಸು ಬಂದಾಗ, ಊಟದ ಬಗ್ಗೆ ಸೇವಕನೊಡನೆ ಕೇಳಿದೆ. ಇಂದು ಹಝ್ರತ್ ಪೈಗಂಬರ್(ಸ) ಊಟ ಮಾಡಿಲ್ಲವೆಂದು ಹೇಳಲಾಯಿತು. ನಾನು ಚಿಂತಿತನಾಗಿ, ಹಝ್ರತ್ ಪೈಗಂಬರರ(ಸ) ಬಳಿಗೆ ಹೋಗಿ ಬೆಳ್ಳುಳ್ಳಿ ತಿನ್ನುವುದು ನಿಷಿದ್ಧವೇ ಎಂದು ಕೇಳಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲ, ಆದರೆ ನನಗೆ ಅದು ಇಷ್ಟವಲ್ಲ. ನಾನು ಹೇಳಿದೆ: ನೀವು ಇಷ್ಟಪಡದನ್ನು ನಾನೂ ಇಷ್ಟಪಡುವುದಿಲ್ಲ. ಈ ವರದಿ ಸಹೀಹ್ ಮುಸ್ಲಿಮಿನಿಂದಾಗಿದೆ. ವರದಿಗಾರ ಹೇಳುತ್ತಾರೆ: ಹಝ್ರತ್ ಪೈಗಂಬರರ(ಸ) ಬಳಿ ದೇವದೂತರು ಬರುತ್ತಿದ್ದರು. ದಿವ್ಯವಾಣಿಗಳು ಅವತೀರ್ಣವಾಗುತ್ತಿದ್ದುವು. ಆದ್ದರಿಂದ ಹಝ್ರತ್ ಪೈಗಂಬರ್(ಸ) ತೀಕ್ಷ್ಣವಾದ ಗಂಧವಿರುವ ಆಹಾರವನ್ನು ತಿನ್ನುತ್ತಿರಲಿಲ್ಲ. ಆದರೆ ಇದು ಹರಾಂ ಅಲ್ಲ.

ಸಹೀಹ್ ಮುಸ್ಲಿಮಿನಲ್ಲಿ ಈ ವರದಿ ಹೀಗೆಯೂ ವರದಿಯಾಗಿದೆ: ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ ಹೇಳುತ್ತಾರೆ: ಹಝ್ರತ್ ಪೈಗಂಬರರಿಗೆ(ಸ) ಊಟ ನೀಡಲ್ಪಡುವಾಗ, ಅವರು ಅದನ್ನು ತಿನ್ನುತ್ತಿದ್ದರು. ಅವರು ಉಳಿದ ಊಟವನ್ನು ನನಗೆ ವಾಪಾಸ್ಸು ಕಳುಹಿಸುತ್ತಿದ್ದರು. ಒಂದು ದಿನ ಊಟ ವಾಪಾಸ್ಸು ಬಂದಾಗ, ಹಝ್ರತ್ ಪೈಗಂಬರ್(ಸ) ಅದರಿಂದ ತಿಂದಿರಲಿಲ್ಲವೆಂದು ತಿಳಿದುಬಂತು. ಏಕೆಂದರೆ, ಅದರಲ್ಲಿ ಬೆಳ್ಳುಳ್ಳಿಯಿತ್ತು. ಇದು ನಿಷಿದ್ಧವೇ ಎಂದು ನಾನು ಹಝ್ರತ್ ಪೈಗಂಬರರ(ಸ) ಬಳಿಗೆ ಹೋಗಿ ಕೇಳಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲ, ಆದರೆ ನನಗೆ ಅದರ ಗಂಧದ ಕಾರಣದಿಂದ ಇಷ್ಟವಲ್ಲ. ಆಗ ನಾನು ಹೇಳಿದೆ: ನಿಮಗೆ ಇಷ್ಟವಿಲ್ಲದ್ದನ್ನು ನಾನು ಇಷ್ಟಪಡುವುದಿಲ್ಲ. (ಸಹೀಹ್ ಮುಸ್ಲಿಮ್, ಕಿತಾಬುಲ್ ಅಶ್ರಬ, ಹದೀಸ್–5356–5358)

ಈ ಘಟನೆಯನ್ನು ಮುಸ್ನದ್ ಅಹ್ಮದ್ ಬಿನ್ ಹಂಬಲಿನ ಒಂದು ವರದಿಯಲ್ಲಿ ಹೀಗೆ ವಿವರಿಸಲಾಗಿದೆ: ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ನಮ್ಮ ಮನೆಯ ಕೆಳಗಿನ ಮಹಡಿಯಲ್ಲಿ ತಂಗಿದರು. ನಾನು ಮೇಲಿನ ಅಂತಸ್ತಿನಲ್ಲಿದ್ದೆ. ಒಂದು ಸಲ ಮೇಲಿನ ಮಹಡಿಯಲ್ಲಿ ನೀರು ಬಿದ್ದುಹೋಯಿತು. ನೀರು ಕೆಳಗಿನ ಮಹಡಿಗೆ ಸೋರಿಹೋಗದಿರಲು ನಾನು ಮತ್ತು ನನ್ನ ಪತ್ನಿ ಒಂದು ಹೊದಿಕೆ ತೆಗೆದುಕೊಂಡು ನೀರನ್ನು ಒಣಗಿಸಿದೆವು. ಅನಂತರ ಭಯದಿಂದ ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾಗಿ ಹೀಗೆ ಹೇಳಿದೆನು: ಯಾ ರಸೂಲಲ್ಲಾಹ್, ನಿಮ್ಮ ಮೇಲೆ ಇರುವುದು ಸರಿಯೆಂದು ನಮಗೆ ತೋರುವುದಿಲ್ಲ. ನೀವು ಮೇಲಿನ ಮಹಡಿಗೆ ಹೋಗಿರಿ. ಹೀಗೆ ಹಝ್ರತ್ ಪೈಗಂಬರರ(ಸ) ನಿರ್ದೇಶನದಂತೆ ಅವರ ಸಾಮಾನುಗಳನ್ನು ಮೇಲಿನ ಮಹಡಿಗೆ ಕೊಂಡುಹೋಗಲಾಯಿತು. ಹಝ್ರತ್ ಪೈಗಂಬರರ(ಸ) ಬಳಿ ಕೆಲವೇ ಕೆಲವು ಸಾಮಾನುಗಳಿದ್ದುವು. ಅನಂತರ ನಾನು ಹಝ್ರತ್ ಪೈಗಂಬರರೊಡನೆ(ಸ) ಹೇಳಿದೆ: ಯಾ ರಸೂಲಲ್ಲಾಹ್, ನಾನು ನಿಮಗೆ ಊಟ ಕಳುಹಿಸಿದ ನಂತರ, ಅದು ವಾಪಾಸ್ಸು ಬರುವಾಗ, ಅದನ್ನು ನೋಡುತ್ತೇನೆ. ನಿಮ್ಮ ಬೆರಳುಗಳ ಗುರುತುಗಳನ್ನು ನೋಡಿ ಅಲ್ಲಿಂದಲೇ ನಾನು ಊಟ ಮಾಡುತ್ತೇನೆ. ಆದರೆ ಇಂದು ನೀವು ವಾಪಾಸ್ಸು ಕಳುಹಿಸಿದ ಊಟದಲ್ಲಿ ನಿಮ್ಮ ಬೆರಳುಗಳ ಗುರುತುಗಳನ್ನು ಕಂಡಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ಈ ಸಂಗತಿ ಸರಿಯೇ ಆಗಿದೆ. ಸತ್ಯದಲ್ಲಿ ಅದರಲ್ಲಿ ಈರುಳ್ಳಿಯಿತ್ತು. ನನ್ನ ಬಳಿ ಬರುತ್ತಿರುವ ದೇವದೂತನ ಕಾರಣದಿಂದ ನಾನು ಅದನ್ನು ತಿನ್ನುವುದನ್ನು ಇಷ್ಟಪಡಲಿಲ್ಲ. ಆದರೆ ನೀವು ಅದನ್ನು ತಿನ್ನಿರಿ. ಇಲ್ಲಿ ಬೆಳ್ಳುಳ್ಳಿಯ ಬದಲಿಗೆ ಈರುಳ್ಳಿಯೆಂದು ಹೇಳಲಾಗಿದೆ. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–7, ಪುಟ–781, ಹದೀಸ್–23966, ಮಸ್ನದ್ ಅಬೂ ಅಯ್ಯೂಬ್ ಅನ್ಸಾರಿ, ಆಲಿಮುಲ್ ಕುತುಬ್ ಬೈರೂತ್ ಲೆಬನಾನ್ 1998)

ಹಝ್ರತ್ ಪೈಗಂಬರರೊಂದಿಗೆ(ಸ) ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಗೆ(ರ) ಬದ್ರ್ ಯುದ್ಧ, ಉಹದ್ ಯುದ್ಧ, ಖಂದಕ್ ಯುದ್ಧ ಸಮೇತ ಎಲ್ಲ ಯುದ್ಧಗಳಲ್ಲಿ ಭಾಗವಹಿಸಲು ಸೌಭಾಗ್ಯ ಲಭಿಸಿತ್ತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–369, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ವರದಿ ಮಾಡುತ್ತಾರೆ: ನಾವು ಬದ್ರ್ ಯುದ್ಧದ ದಿನದಂದು ಪಂಕ್ತಿಬದ್ಧರಾಗಿ ನಿಂತೆವು. ನಮ್ಮಲ್ಲಿ ಕೆಲವರು ಪಂಕ್ತಿಯಿಂದ ಮುಂದಕ್ಕೆ ಹೋಗಿ ನಿಂತಿದ್ದರು. ಹಝ್ರತ್ ಪೈಗಂಬರ್(ಸ) ಅವರನ್ನು ನೋಡಿ ಸಂಬೋಧಿಸುತ್ತಾ ಹೇಳಿದರು: ನನ್ನೊಂದಿಗೆ ನನ್ನೊಂದಿಗೆ, (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–7, ಪುಟ–780, ಹದೀಸ್–23963, ಆಲಿಮುಲ್ ಕುತುಬ್ ಬೈರೂತ್ 1998) ಎಂದರೆ, ನನ್ನ ಹಿಂದೆ ನಿಲ್ಲಿರಿ, ನನಗಿಂತ ಮುಂದೆ ಹೋಗಬೇಡಿರಿ.

ಇವರ ಬಗ್ಗೆಗಿನ ಒಂದು ಪ್ರಸ್ತಾಪವನ್ನು ಹ್ರಸ್ವವಾಗಿ ಇಲ್ಲಿ ಪ್ರಸ್ತಾಪಿಸುತ್ತೇನೆ. ಹಿಂದೆಯೂ ಪ್ರಸ್ತಾಪಿಸಲಾಗಿತ್ತು. ಹಝ್ರತ್ ಸಫಿಯಾ(ರ) ವಿವಾಹವಾಗಿ ಬಂದ ರಾತ್ರಿಯಂದು ಹಝ್ರತ್ ಪೈಗಂಬರರ(ಸ) ಡೇರೆಯ ಹೊರಗೆ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ತೆರೆದ ಖಡ್ಗವನ್ನು ಕೈಯಲ್ಲಿ ಹಿಡಿದುಕೊಂಡು ರಾತ್ರಿ ಪೂರ್ತಿ ಕಾವಲು ನಿಂತಿದ್ದರು ಮತ್ತು ಡೇರೆಯ ನಾಲ್ಕೂ ಕಡೆ ಸುತ್ತುತ್ತಿದ್ದರು. ಬೆಳಿಗ್ಗೆಯಾದಾಗ, ಅವರನ್ನು ಹಝ್ರತ್ ಪೈಗಂಬರ್(ಸ) ಡೇರೆಯ ಹೊರಗೆ ನೋಡಿದಾಗ ಹೀಗೆ ಕೇಳಿದರು: ಹೇ ಅಬೂ ಅಯ್ಯೂಬ್ ಏನಾಯಿತು? ಅವರು ಹೇಳಿದರು: ಯಾ ರಸೂಲಲ್ಲಾಹ್, ಆ ಸ್ತ್ರೀಯ ಕಾರಣದಿಂದ ನಿಮ್ಮ ಬಗ್ಗೆ ಆಲೋಚಿಸಿ ಚಿಂತಿತನಾಗಿದ್ದೆ. ಏಕೆಂದರೆ, ಇವರ ತಂದೆ, ಗಂಡ ಮತ್ತು ಅವರ ಸಮುದಾಯದ ಜನರು

ಕೊಲ್ಲಲ್ಪಟ್ಟಿದ್ದಾರೆ ಮತ್ತು ನಿಮ್ಮ ಈ ಪತ್ನಿಯಾದರೋ ಸತ್ಯನಿಷೇಧದಿಂದ ಈಗಷ್ಟೆ ಹೊರಗೆ ಬಂದು ಮುಸ್ಲಿಮರಾಗಿದ್ದಾರೆ. ಆದ್ದರಿಂದ ನಾನು ರಾತ್ರಿ ಪೂರ್ತಿ ನಿಮ್ಮ ಸಂರಕ್ಷಣೆಯ ಬಗ್ಗೆ ಆಲೋಚಿಸಿ ಕಾವಲು ನಿಂತಿದ್ದೆ. ಆಗ, ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಗಾಗಿ(ರ) ಹೀಗೆ ದುಆ ಮಾಡಿದರು: **ಅಲ್ಲಾಹುಮ್ಮ ಇಹ್‌ಫಝ್ ಅಬಾ ಅಯ್ಯೂಬ ಕಮಾ ಬಾತ ಯಹ್‌ಫಝ್ನೀ**. ಎಂದರೆ, ಹೇ ಅಲ್ಲಾಹ್, ಯಾವ ರೀತಿಯಲ್ಲಿ ಅಬೂ ಅನ್ಸಾರಿ ನನಗೆ ಕಾವಲು ನಿಲ್ಲುತ್ತಾ ರಾತ್ರಿ ಪೂರ್ತಿ ಕಳೆದರೋ ಅದೇ ರೀತಿಯಲ್ಲಿ ಅವರನ್ನು ಸಹ ನೀನು ಸಂರಕ್ಷಿಸು. ಇಮಾಂ ಸುಹೈಲಿ ಹೇಳುತ್ತಾರೆ. ಹೀಗೆ ಅಲ್ಲಾಹನು ಹಝ್ರತ್ ಪೈಗಂಬರರ(ಸ) ಈ ದುಆದ ಪ್ರಕಾರ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯನ್ನು(ರ) ಸಂರಕ್ಷಿಸಿದನು. ಎಲ್ಲಿಯ ವರೆಗೆ ಎಂದರೆ, ರೋಮನ್ನರು ಅವರ ಖಬರನ್ನು ಸಹ ಸಂರಕ್ಷಿಸುತ್ತಿದ್ದರು. ಅವರ ಮುಖಾಂತರ ನೀರಿಗಾಗಿ ಬೇಡಿದರೆ, ಮಳೆ ಬರುತ್ತಿತ್ತು.
(ಅಸ್ಸೀರತುಲ್ ಹಲಬೀಯ, ಸಂಪುಟ–3, ಪುಟ–65, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್)

ಬದ್ರ್ ಯುದ್ಧದಲ್ಲಿ ಹಝ್ರತ್ ಪೈಗಂಬರರೊಂದಿಗೆ(ಸ) ಇದ್ದ ಹಝ್ರತ್ ಉತ್‌ಬಾನ್ ಬಿನ್ ಮಾಲಿಕ್ ಅನ್ಸಾರಿಯಿಂದ(ರ) ಕೇಳಿದ್ದಾಗಿ ಹಝ್ರತ್ ಮಹ್ಮೂದ್ ಹೇಳುತ್ತಾರೆ: ನಾನು ನಮ್ಮ ಜನತೆಯಾದ ಬನೂ ಸಾಲಿಮಿಗಾಗಿ ನಮಾಝಿನ ಇಮಾಮತ್ ವಹಿಸುತ್ತಿದ್ದೆ. ನಾನಿದ್ದ ಸ್ಥಳ ಮತ್ತು ಅವರು ನೆಲೆಸಿದ್ದ ಪ್ರದೇಶದ ನಡುವೆ ಒಂದು ಹಳ್ಳವಿತ್ತು. ಮಳೆ ಬಂದರೆ, ನಾನಿದ್ದ ಸ್ಥಳದಿಂದ ಅವರ ಮಸೀದಿಯ ಕಡೆಗೆ ಹೋಗಲಿಕ್ಕಾಗಿ ಆ ಹಳ್ಳವನ್ನು ದಾಟುವುದು ನನಗೆ ಕಷ್ಟದ ಸಂಗತಿಯಾಗಿತ್ತು. ಆದ್ದರಿಂದ ನಾನು ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾಗಿ ಹೀಗೆ ಹೇಳಿದೆ: ನನ್ನ ಕಣ್ಣಿನ ದೃಷ್ಟಿ ದುರ್ಬಲಗೊಂಡಿದೆ. ಮಳೆ ಬರುವಾಗ, ನನ್ನ ಸಮುದಾಯ ಮತ್ತು ನನ್ನ ನಡುವೆ ಇರುವ ಹಳ್ಳ ತುಂಬಿಹೋಗುತ್ತದೆ. ಆಗ ಆ ಹಳ್ಳವನ್ನು ದಾಟುವುದು ನನಗೆ ಕಷ್ಟವಾಗುತ್ತದೆ. ಆದ್ದರಿಂದ ನೀವು ನನ್ನ ಮನೆಗೆ ಬಂದು ಮನೆಯ ಒಂದು ಭಾಗದಲ್ಲಿ ನಮಾಝ್ ಮಾಡಿರಿ. ಅದನ್ನು ನಾನು ನಮಾಝಿನ ಜಾಗವನ್ನಾಗಿ ಮಾಡುವೆನು. ನಾನು ಬರುತ್ತೇನೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಬೆಳಿಗ್ಗೆಯಾದಾಗ, ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕ್ಕರ್(ರ) ನನ್ನ ಬಳಿಗೆ ಬಂದರು. ಒಳಗೆ ಬರಲು ಅನುಮತಿ ಕೇಳಿದಾಗ, ನಾನು ಅನುಮತಿ ಕೊಟ್ಟೆನು. ಅವರು ಕುಳಿತುಕೊಳ್ಳಲಿಲ್ಲ. ಮನೆಯ ಯಾವ ಭಾಗದಲ್ಲಿ ನಾನು ನಮಾಝ್ ಮಾಡಬೇಕೆಂದು ನೀವು ಇಚ್ಛಿಸುತ್ತೀರಿ ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಹಝ್ರತ್ ಪೈಗಂಬರ್(ಸ) ನಮಾಝ್ ನಿರ್ವಹಿಸಬೇಕೆಂದು ನಾನು ಇಚ್ಛಿಸುತ್ತಿದ್ದ ಭಾಗಕ್ಕೆ ಬೊಟ್ಟುಮಾಡಿ ತೋರಿಸಿದೆ. ಹಝ್ರತ್ ಪೈಗಂಬರ್(ಸ) ನಿಂತುಕೊಂಡು ಅಲ್ಲಾಹು ಅಕ್ಬರ್ ಎಂದು ಹೇಳಿದರು. ನಾವು ಅವರ ಹಿಂದೆ ಸಾಲಾಗಿ ನಿಂತೆವು. ಹಝ್ರತ್ ಪೈಗಂಬರ್(ಸ) ಎರಡು ರಕಅತ್ ನಮಾಝ್ ನಿರ್ವಹಿಸಿ ಸಲಾಂ ಹೇಳಿ, ನಮಾಝ್ ಮುಗಿಸಿದರು. ಹಝ್ರತ್ ಪೈಗಂಬರ್(ಸ) ಸಲಾಂ ಹೇಳಿದಾಗ, ನಾವು ಸಹ ಸಲಾಂ ಹೇಳಿ ನಮಾಝ್ ಮುಗಿಸಿದೆವು. ಹಝ್ರತ್ ಪೈಗಂಬರರಿಗಾಗಿ(ಸ) ಖಝೀರ ತಯಾರಿಸಲಾಗಿತ್ತು. ಇದು ಮಾಂಸ ಮತ್ತು ಗೋದಿಯಿಂದ ಪಾಕಮಾಡಲಾಗಿದ್ದ ಒಂದು ಆಹಾರವಾಗಿತ್ತು. ನನ್ನ ಮನೆಯಲ್ಲಿ ಹಝ್ರತ್ ಪೈಗಂಬರ್(ಸ) ಇರುವರು ಎಂದು ಆಸುಪಾಸಿನ ಜನರಿಗೆ ಗೊತ್ತಾದಾಗ, ಅವರಲ್ಲಿ ಕೆಲವರು ಓಡಿ ಬಂದರು. ಹೀಗೆ ಮನೆಯಲ್ಲಿ ತುಂಬ ಜನರು ಒಟ್ಟುಸೇರಿದರು. 'ಮಾಲಿಕ್ ಎಲ್ಲಿದ್ದಾರೆ, ನಾನು ಅವರನ್ನು ಕಾಣುತ್ತಿಲ್ಲ' ಎಂದು ಬಂದವರಲ್ಲಿ ಒಬ್ಬರು ಕೇಳಿದರು. ಮಾಲಿಕ್ ಕಪಟವಿಶ್ವಾಸಿಯಾಗಿರುವನು ಎಂದು ಯಾರೋ ಹೇಳಿದರು. ಬೇರೊಬ್ಬ ಸಹಾಬಿಯ ಬಗ್ಗೆಯೂ ಕೇಳಲಾಯಿತು. ಅವರು ಸಹ ಮುನಾಫಿಕ್ ಆಗಿರುವರು. ಅಲ್ಲಾಹ್ ಮತ್ತು ಅವನ ಪ್ರವಾದಿಯ ಮೇಲೆ ಅವರಿಗೆ ಪ್ರೀತಿಯಿಲ್ಲ, ಆದ್ದರಿಂದ ಬಂದಿಲ್ಲವೆಂದು ಹೇಳಲಾಯಿತು. ಇದನ್ನು ಕೇಳಿದಾಗ, ಹಝ್ರತ್ ಪೈಗಂಬರ್(ಸ) ಹೇಳಿದರು: ಹಾಗೆ ಹೇಳಬೇಡಿರಿ. ಅವರು ಲಾ ಇಲಾಹ ಇಲ್ಲಲ್ಲಾಹ್ ಎಂದು ಹೇಳಿದ್ದನ್ನು ನೀವು ಕೇಳಿರಲಿಲ್ಲವೇ? ಅವರು ಈ ಸಮ್ಮತಿಯೊಂದಿಗೆ ಅಲ್ಲಾಹನ ಸಂಪ್ರೀತಿಯನ್ನು ಬಯಸುತ್ತಾರೆ. ಅವರು ಹೇಳಿದರು: ಅಲ್ಲಾಹ್ ಮತ್ತು ರಸೂಲ್(ಸ)ರೇ ಬಲ್ಲರು. ಅಲ್ಲಾಹನಾಣೆ, ನಾವಂತು ಅವರ ಗೆಳೆತನ ಮತ್ತು ಮಾತುಗಾರಿಕೆ ಕಪಟವಿಶ್ವಾಸಿಗಳೊಡನೆ ಮಾತ್ರ ನೋಡುತ್ತಿದ್ದೇವೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಯಾರು ಲಾ ಇಲಾಹ ಇಲ್ಲಲ್ಲಾಹ್ ಎಂದು ಹೇಳಿ ಏಕದೇವವಿಶ್ವಾಸವನ್ನು ಒಪ್ಪಿಕೊಂಡು, ಅಲ್ಲಾಹನ ಸಂಪ್ರೀತಿಯನ್ನು ಬಯಸುತ್ತಾನೋ ಅವನ ಮೇಲೆ ಅಲ್ಲಾಹನು ಬೆಂಕಿಯನ್ನು ನಿಷಿದ್ಧಗೊಳಿಸಿದ್ದಾನೆ. ಎಂದರೆ, ಅವರು ನರಕದಲ್ಲಿ ಹಾಕಲ್ಪಡಲಾರನು. ಹಝ್ರತ್ ಮಹ್ಮೂದ್ ಬಿನ್ ರಬೀಅ್ ಹೇಳುತ್ತಾರೆ: ನಾನು ಈ ಸಂಗತಿಯನ್ನು ಬೇರೆ ಕೆಲವು ಜನರೊಡನೆ ಸಹ ಹೇಳಿದ್ದೆ. ಅವರಲ್ಲಿ ಹಝ್ರತ್ ಅಬೂ ಅಯ್ಯೂಬ್(ರ) ಸಹ ಇದ್ದರು. ಅವರು ಯಝೀದ್ ಬಿನ್ ಮುಆವಿಯ ಸೇನಾಧಿಪತಿಯಾಗಿದ್ದ ಒಂದು ಯುದ್ಧದಲ್ಲಿ ಸಹ ಇದ್ದರು. ಆಗಲೇ ಅವರು ರೋಮ್ ದೇಶದಲ್ಲಿ ನಿಧನರಾಗಿದ್ದರು. ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ನನ್ನ ಮಾತನ್ನು ನಿರಾಕರಿಸಿ ಹೀಗೆ ಹೇಳಿದರು: ಅಲ್ಲಾಹನಾಣೆ, ಹಝ್ರತ್ ಪೈಗಂಬರ್(ಸ) ಎಂದಾದರೂ ಹೀಗೆ ಹೇಳಿದ್ದರು ಎಂದು ನನಗೆ ಅನಿಸುತ್ತಿಲ್ಲ. ಎಂದರೆ, ಕೇವಲ ಲಾ ಇಲಾಹ ಇಲ್ಲಲ್ಲಾಹ್ ಎಂದು ಹೇಳಿದವನ ಮೇಲೆ ಬೆಂಕಿ ನಿಷಿದ್ಧಗೊಳಿಸಲಾಗುವುದು ಎಂದು ಹೇಳಿದ್ದನ್ನು. ಹೇಗಿದ್ದರೂ, ಮಹ್ಮೂದ್ ಹೇಳುತ್ತಾರೆ: ಈ ಸಂಗತಿ ನನ್ನನ್ನು ವ್ಯಾಕುಲಪಡಿಸಿತು. ನಾನು ತುಂಬ ಚಿಂತಿತನಾದೆ. ಅಲ್ಲಾಹನು ನನ್ನನ್ನು ಸುರಕ್ಷಿತನಾಗಿ ಇರಿಸಿಕೊಂಡು ಈ ಯುದ್ಧದಿಂದ ವಾಪಾಸ್ಸು ಕೊಂಡುಹೋದರೆ ಮತ್ತು ಹಝ್ರತ್ ಉತ್‌ಬಾನ್ ಬಿನ್ ಮಾಲಿಕ್(ರ) ಜೀವಂತವಾಗಿ ಅವರ ಸಮುದಾಯದ ಮಸೀದಿಯಲ್ಲಿ ಇರುವರಾದರೆ, ಈ ಸಂಗತಿಯ ಬಗ್ಗೆ ಹಝ್ರತ್ ಉತ್‌ಬಾನ್ ಬಿನ್ ಮಾಲಿಕ್‌ರೊಡನೆ(ರ)ಕೇಳುವೆನು ಎಂದು ನಿರ್ಧರಿಸಿದೆ. ಹೀಗೆ ನಾನು ಯುದ್ಧದಿಂದ ಮರಳಿದೆ. ಹಜ್ಜ್ ಅಥವಾ ಉಮ್ರ ಮಾಡಿದ ನಂತರ, ಮದೀನಕ್ಕೆ ಹೋದೆನು ಮತ್ತು ಬನೂ ಸಾಲಿಮಿನ ಮೊಹಲ್ಲಗೆ ಹೋದೆನು. ಅಲ್ಲಿ ಹಝ್ರತ್ ಉತ್‌ಬಾನ್ ವೃದ್ಧನಾಗಿ ಇರುವುದನ್ನು ಮತ್ತು ಅವರ ದೃಷ್ಟಿ ದುರ್ಬಲವಾಗಿರುವುದನ್ನು ನಾನು ಕಂಡೆನು. ಅವರು ಅವರ ಜನತೆಗಾಗಿ ನಮಾಝಿನ ಇಮಾಮತ್ ವಹಿಸುತ್ತಿದ್ದರು. ಅವರು ಸಲಾಂ ಹೇಳಿ ನಮಾಝ್ ಮುಗಿಸಿದಾಗ, ನಾನು ಅವರಿಗೆ ಸಲಾಂ ಹೇಳಿದೆ. ನಾನು ಯಾರೆಂದು ಅವರಿಗೆ ತಿಳಿಸಿದೆ. ಅನಂತರ ನಾನು ಅವರೊಡನೆ ಈ ಸಂಗತಿಯ ಬಗ್ಗೆ, ಎಂದರೆ ಆ ಹದೀಸಿನ ಬಗ್ಗೆ ಕೇಳಿದೆ. ಆಗ ಅವರು ಆ ಸಂಗತಿಯನ್ನು ಮೊದಲನೇ ಬಾರಿ ವಿವರಿಸಿದ್ದ ಹಾಗೆಯೇ ವಿವರಿಸಿದರು.

(ಸಹೀಹ್ ಬುಖಾರಿ ಕಿತಾಬ್ ತಹಜ್ಜುದ್, ವರದಿಯ ಸಂಖ್ಯೆ 1186)
(ಲುಗಾತುಲ್ ಹದೀಸ್, ಸಂಪುಟ–1, ಪುಟ–580)

ಅವರು ಹೇಳಿದರು: ಹೌದು, ಇದು ಸರಿಯೇ ಆಗಿದೆ. ಲಾ ಇಲಾಹ ಇಲ್ಲಲ್ಲಾಹ್ ಎಂದು ಹೇಳುವವನ ಮೇಲೆ ಬೆಂಕಿಯನ್ನು ನಿಷಿದ್ಧಗೊಳಿಸಲಾಗಿದೆ ಎಂಬ ಮಾತನ್ನು ನಾನು ಹಝ್ರತ್ ಪೈಗಂಬರರಿಂದ(ಸ) ಸ್ವತಃ ಆಲಿಸಿದ್ದೇನೆ. ಹೇಗಿದ್ದರೂ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಇದನ್ನು ಅಂಗೀಕರಿಸುತ್ತಿರಲಿಲ್ಲ. ಇದರ ಬಗ್ಗೆ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರು ಸಹ ತನ್ನ ಅಭಿಪ್ರಾಯವನ್ನು ಹೀಗೆ ಬರೆದಿರುವರು: **ಮನ್‌ಖಾಲ ಲಾ ಇಲಾಹ ಇಲ್ಲಲ್ಲಾಹ್ ಯಬ್‌ತಗೀ ಬಿಧಾಲಿಕ ವಜ್‌ಹಲ್ಲಾಹ್**. ಎಂದೇ ಹದೀಸಿನಲ್ಲಿ ಬಂದಿದೆ.

ಉತ್‌ಬಾನ್ ಬಿನ್ ಮಾಲಿಕ್‌ರಿಂದ(ರ) ಹೀಗೆ ಕೇಳಿದ್ದಾಗಿ ಮಹ್ಮೂದ್ ಬಿನ್ ರಬೀಅ್ ವರದಿ ಮಾಡುತ್ತಾರೆ: ಯಾರು ಸದುದ್ದೇಶದೊಂದಿಗೆ ಅಲ್ಲಾಹನ ಸಂಪ್ರೀತಿಗಾಗಿ ಲಾ ಇಲಾಹ ಇಲ್ಲಲ್ಲಾಹ್ ಎಂದರೆ, ಅಲ್ಲಾಹನಲ್ಲದೆ ಬೇರೆ ಆರಾಧ್ಯನಿಲ್ಲವೆಂದು ಸಮ್ಮತಿಸುತ್ತಾರೋ ಅವರ ಮೇಲೆ ಬೆಂಕಿಯನ್ನು ನಿಷಿದ್ಧಗೊಳಿಸಲಾಗುವುದು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಆದರೆ ಈ ವರದಿಯನ್ನು ನಾನು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಇದ್ದ ಒಂದು ಸಭೆಯಲ್ಲಿ ಹೇಳಿದಾಗ, ಅವರು ಈ ವರದಿಯನ್ನು ನಿರಾಕರಿಸಿ ಹೀಗೆ ಹೇಳಿದರು: ಅಲ್ಲಾಹನಾಣೆ, ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ನನಗೆ ಖಂಡಿತವಾಗಿಯೂ ಅನಿಸುತ್ತಿಲ್ಲ. ರಿವಾಯತಿನ ನಿಯಮಗಳ ಪ್ರಕಾರ ಸರಿಯೂ ಪ್ರಬಲವೂ ಆಗಿದ್ದ ಒಂದು ಹದೀಸನ್ನು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ತನ್ನದಾದ ವಿವೇಚನೆ, ಯುಕ್ತಿ ಮತ್ತು ಅರಿವಿನ ಆಧಾರದಲ್ಲಿ ರದ್ದುಮಾಡಿದ್ದರು. ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ತಾರ್ಕಿಕವಾಗಿ ಆಲೋಚಿಸಿ ಹದೀಸಿನ ಬಗ್ಗೆ ನೀಡಿದ ತೀರ್ಪು ತಪ್ಪಾಗಿರಲೂ ಬಹುದು. ಆದರೆ ಈ ಘಟನೆಯಿಂದ ಸಾಬೀತಾಗುವ ಒಂದು ಸಂಗತಿಯೇನೆಂದರೆ, ಸಹಾಬರು ಹದೀಸೆಂದು ಹೇಳಲ್ಪಡುವ ಪ್ರತಿಯೊಂದು ಮಾತನ್ನು ಹಾಗೆಯೇ ಅಂಧರಾಗಿ ನಂಬುತ್ತಿರಲಿಲ್ಲ. ಬದಲಿಗೆ, ಅವುಗಳ ಬಗ್ಗೆ ಆಲೋಚಿಸುತ್ತಿದ್ದರು. ರಿವಾಯತಿನ ನಿಯಮಗಳು ಮತ್ತು ವಿವೇಕದ ಆಧಾರದಲ್ಲಿ ಅವು ಹಝ್ರತ್ ಪೈಗಂಬರರ(ಸ) ಮಾತುಗಳೇ ಎಂಬುದರ ಬಗ್ಗೆ ಶೋಧನೆ ನಡೆಸುತ್ತಿದ್ದರು. ಅನಂತರ ಅವುಗಳನ್ನು ಅಂಗೀಕರಿಸುತ್ತಿದ್ದರು. (ಸೀರತ್ ಖಾತಮನ್ನಬೀಈನ್, ಪುಟ–16)
ಬುಖಾರಿಯ ಈ ಹದೀಸಿನ ವ್ಯಾಖ್ಯಾನದಲ್ಲಿ ಹಝ್ರತ್ ಸಯ್ಯದ್ ವಲಿಯುಲ್ಲಾಹ್ ಶಾಹ್ ಸಾಹಿಬರು ಬರೆಯುತ್ತಾರೆ: ಹಝ್ರತ್ ಮಹ್ಮೂದ್ ಬಿನ್ ರಬೀಅ್‌ರಿಂದ ಈ ಹದೀಸನ್ನು ಕೇಳಿದಾಗ, ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಅದನ್ನು ನಿರಾಕರಿಸಿದರು. ಸತ್ಕರ್ಮಗಳನ್ನು ಮಾಡಿಕೊಂಡಲ್ಲದೆ, ಕೇವಲ **ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳುವುದು ಬೆಂಕಿಯಿಂದ ಸುರಕ್ಷಿತಗೊಳಿಸದು ಎಂಬ ಕಾರಣದಿಂದ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಈ ಹದೀಸನ್ನು ರದ್ದುಗೊಳಿಸಿದ್ದರು ಎಂಬುವುದಾಗಿದೆ ಕೆಲವರ ಅನಿಸಿಕೆ. ಆದರೆ **ಯಬ್‌ತಗೀ ವಜ್‌ಹಲ್ಲಾಹ್** ಎಂಬ ವಾಕ್ಯದಿಂದ ಯಾವ ರೀತಿಯ ಏಕದೇವವಿಶ್ವಾಸದ ಬಗ್ಗೆ ಹೀಗೆ ಹೇಳಲಾಗಿದೆ ತಿಳಿದುಬರುತ್ತದೆ. ಯಾರು ಅಂತರಾಳದಿಂದ ಮತ್ತು ಅಲ್ಲಾಹನ ಸಂಪ್ರೀತಿಯನ್ನು ಪಡೆಯಲಿಕ್ಕಾಗಿ ಕಲಿಮ ಉಚ್ಚರಿಸುತ್ತಾನೋ, **ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳುತ್ತಾನೋ ಅವನ ಮೇಲೆ ಬೆಂಕಿ ನಿಷಿದ್ಧಗೊಳಿಸಲಾಗುವುದು ಎಂದು ಬಂದಿದೆ. ಬಹುಶಃ ಹದೀಸಿನ ಕೆಲವು ಪದಗಳು ಬಿಟ್ಟುಹೋಗಿರಬಹುದು ಎಂಬ ಯೋಚನೆಯಿಂದ ಹಝ್ರತ್ ಮಹ್ಮೂದ್ ಪುನಃ ಅದರ ಬಗ್ಗೆ ಶೋಧನೆ ನಡೆಸಲು ಹೋದರು. ಆಗಲೂ ಹದೀಸಿನ ವಾಕ್ಯಗಳು ಸರಿಯೇ ಆಗಿದೆ ಎಂದು ಸಾಬೀತಾಯಿತು. ಸತ್ಯದಲ್ಲಿ, ಒಬ್ಬರ ವಿಶ್ವಾಸ ಅಥವಾ ಕಾಪಟ್ಯದ ಬಗ್ಗೆ ಜನರ ಮುಂದೆ ತಮ್ಮ ಅಭಿಪ್ರಾಯವನ್ನು ಹೇಳುವುದು ಸರಿಯಲ್ಲ. ಏಕೆಂದರೆ, ಈ ಸಂದರ್ಭದಲ್ಲಿ ಇಬ್ನು ದಹ್‌ಶಮಿನ ಬಗ್ಗೆ ಜನರ ಮುಂದೆ ನ್ಯೂನತೆಗಳನ್ನು ಹೇಳುವುದನ್ನು ಹಝ್ರತ್ ಪೈಗಂಬರ್(ಸ) ಇಷ್ಟಪಟ್ಟಿರಲಿಲ್ಲ. ಈ ರೀತಿಯಾಗಿ ಇತರರ ನ್ಯೂನತೆಗಳನ್ನು ಬಹಿರಂಗವಾಗಿ ಹೇಳುವುದರಿಂದ ಸುಧಾರಣೆಯ ಬದಲಿಗೆ ಫಿತ್ನ ಮತ್ತು ಕಲಹಗಳು ಉಂಟಾಗುವುದು. (ಸಹೀಹ್ ಬುಖಾರಿ, ಕಿತಾಬುಲ್ ತಹಜ್ಜುದ್, ಹದೀಸ್–1186, ಸಂಪುಟ–2, ಪುಟ–565, ನಝಾರತ್ ಇಶಾಅತ್ ರಬ್ವಾಹ್)

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್ ಮತ್ತು ಹಝ್ರತ್ ಮುಸವ್ವಿರ್ ಬಿನ್ ಮುಖ್‌ರಮ ನಡುವೆ ಅಬವಾಹ್ ಎಂಬ ಸ್ಥಳದಲ್ಲಿ ಇಹ್ರಾಮಿನ ಸ್ನಾನದ ಬಗ್ಗೆ ಭಿನ್ನಾಭಿಪ್ರಾಯ ಉಂಟಾಯಿತು. ಹಜ್ಜಿಗಾಗಿ ಇಹ್ರಾಂ ಧರಿಸಿದವರು ಸ್ನಾನ ಮಾಡುವಾಗ, ತಲೆಯನ್ನು ತೊಳೆಯಬಹುದು ಎಂದು ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್ ಹೇಳುತ್ತಿದ್ದರು. ಇಹ್ರಾಂ ಕಟ್ಟಿದವರು ತಲೆಯನ್ನು ತೊಳೆಯಬಾರದು ಎಂಬುವುದಾಗಿತ್ತು ಹಝ್ರತ್ ಮುಸವ್ವರಿನ ಅಭಿಪ್ರಾಯ. ವರದಿಗಾರ ಹೇಳುತ್ತಾರೆ: ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್ ನನ್ನನ್ನು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಬಳಿಗೆ ಕಳುಹಿಸಿದರು. ಅವರು ಎರಡು ಮರದ ಹಲಗೆಯ ನಡುವೆ ಸ್ನಾನ ಮಾಡುತ್ತಿದ್ದರು. ಬಟ್ಟೆಯಿಂದ ಮರೆಮಾಡಿದ್ದರು. ನಾನು ಅವರೊಡನೆ ಅಸ್ಸಲಾಮು ಅಲೈಕುಂ ಎಂದು ಹೇಳಿದೆ. ಯಾರೆಂದು ಅವರು ಕೇಳಿದರು. ನಾನು ಹೇಳಿದೆ: ನಾನು ಅಬ್ದುಲ್ಲಾಹ್ ಬಿನ್ ಹುನೈನ್ ಆಗಿರುವೆನು. ನನ್ನನ್ನು ಅಬ್ದುಲ್ಲಾಹ್ ಬಿನ್ ಅಬ್ಬಾಸ್ ನಿಮ್ಮ ಬಳಿಗೆ ಕಳುಹಿಸಿದ್ದಾರೆ. ಹಝ್ರತ್ ಪೈಗಂಬರ್(ಸ) ಇಹ್ರಾಮಿನ ಸ್ಥಿತಿಯಲ್ಲಿ ತಮ್ಮ ತಲೆಯನ್ನು ಹೇಗೆ ತೊಳೆಯುತ್ತಿದ್ದರು ಎಂಬುದರ ಬಗ್ಗೆ ಗೊತ್ತುಮಾಡಲಿಕ್ಕೆ ಬಂದಿದ್ದೇನೆ. ಏಕೆಂದರೆ, ಇಹ್ರಾಮಿನಲ್ಲಿರುವಾಗ ತಲೆಯನ್ನು ಒಗೆಯಬಾರದು ಎಂದೂ ಕೆಲವರು ಹೇಳುತ್ತಾರೆ. ಇದನ್ನು ಕೇಳಿದಾಗ, ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಮರೆಯಾಗಿ ಇಟ್ಟಿದ್ದ ಬಟ್ಟೆಯ ಮೇಲೆ ಕೈಯಿಟ್ಟುಕೊಂಡು ಅದನ್ನು ಸ್ವಲ್ಪ ಕೆಳಗೆ ಸರಿಸಿದರು. ಹೀಗೆ ಅವರ ತಲೆ ನನಗೆ ಕಾಣಬಹುದಾಗಿತ್ತು. ಅವರು ಒಬ್ಬ ವ್ಯಕ್ತಿಯೊಡನೆ ನೀರು ಸುರಿಸಲು ಹೇಳಿದರು. ಆ ವ್ಯಕ್ತಿ ಅವರ ತಲೆಯ ಮೇಲೆ ನೀರು ಸುರಿಸಿದರು. ಅವರು ತಮ್ಮ ಎರಡೂ ಕೈಗಳಿಂದ ತನ್ನ ತಲೆಯನ್ನು ಸವರಿದರು. ಕೈಗಳನ್ನು ಮುಂದಕ್ಕೆ ತಂದು ಹಿಂದಕ್ಕೆ ಕೊಂಡುಹೋದರು. ಹಝ್ರತ್ ಪೈಗಂಬರ್(ಸ) ಹೀಗೆ ಮಾಡುವುದನ್ನು ನಾನು ಕಂಡಿದ್ದೇನೆ ಎಂದು ಹೇಳಿದರು. ತಲೆಯನ್ನು ತೊಳೆಯುತ್ತಾ ಕೈಗಳನ್ನು ಒಂದು ಸಲ ಮುಂದಕ್ಕೆ ಮತ್ತು ಹಿಂದಕ್ಕೆ ಸವರುತ್ತಿದ್ದರು. (ಸಹೀಹ್ ಬುಖಾರಿ, ಕಿತಾಬ್ ಜಝಾಉಸ್ಸೈದ್, ಹದೀಸ್–1840)

ಹಝ್ರತ್ ಸಈದ್ ಬಿನ್ ಮುಸಯ್ಯಬ್ ವರದಿ ಮಾಡುತ್ತಾರೆ: ಒಂದು ಸಲ ಹಝ್ರತ್ ಪೈಗಂಬರರ(ಸ) ಕೂದಲಲ್ಲಿ ಹುಲ್ಲಿನ ಕಡ್ಡಿಯಂತಹ ಯಾವುದೋ ವಸ್ತುವನ್ನು

ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ನೋಡಿದರು. ಅದನ್ನು ಕೂದಲಿಂದ ಬೇರ್ಪಡಿಸಿ ಅದನ್ನು ಹಝ್ರತ್ ಪೈಗಂಬರರಿಗೆ(ಸ) ತೋರಿಸಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬೂ ಅಯ್ಯೂಬ್ ಅನ್ಸಾರಿ, ಅಲ್ಲಾಹನು ಇಷ್ಟಪಡದ ಸಂಗತಿಯನ್ನು ಅವನು ನಿಮ್ಮಿಂದಲೂ ದೂರಮಾಡಲಿ. ಮತ್ತೊಂದು ವರದಿಯಲ್ಲಿ ಹೀಗೆ ಹೇಳಿದ್ದಾಗಿ ವರದಿಯಾಗಿದೆ: ಹೇ ಅಬೂ ಅಯ್ಯೂಬ್ ನಿನಗೆ ಯಾವುದೇ ಕಷ್ಟತೆ ಬರದಿರಲಿ.
(ಕನ್‌ಝುಲ್ ಅಮಾಲ್, ಸಂಪುಟ–13, ಪುಟ–614, ಹದೀಸ್–37568,37569 ಮೊಅಸ್ಸಸುರ್ರಿಸಾಲ 1985)

ಜಮಲ್ ಯುದ್ಧ, ಸಿಫ್ಫೀನ್ ಯುದ್ಧ ಮತ್ತು ನೆಹರೂನ್ ಯುದ್ಧದಲ್ಲಿ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹಝ್ರತ್ ಅಲಿಯ(ರ) ಸೈನ್ಯದಲ್ಲಿ ಮುಂದಿನ ಭಾಗದಲ್ಲಿ ನಿಂತುಕೊಂಡು ಭಾಗವಹಿಸಿದರು. (ಅಸದುಲ್‌ಗಾಬ, ಸಂಪುಟ–6, ಪುಟ–22, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003)

ಹಝ್ರತ್ ಅಲಿ(ರ) ಕೂಫವನ್ನು ಖಿಲಾಫತಿನ ಕೇಂದ್ರವನ್ನಾಗಿ ಮಾಡಿಕೊಂಡು ಅಲ್ಲಿಗೆ ಹೋದಾಗ, ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯನ್ನು(ರ)ಮದೀನದ ಗವರ್ನರನ್ನಾಗಿ ಮಾಡಿದ್ದರು. ಇದರಿಂದ ಹಝ್ರತ್ ಅಲಿಗೆ(ರ) ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಮೇಲೆಯಿದ್ದ ವಿಶ್ವಾಸದ ಅರಿವಾಗುತ್ತದೆ. ಅವರು ಅಲ್ಲಿ ಹಿಜರೀ 40ರ ತನಕ ಮದೀನದ ಗವರ್ನರ್ ಆಗಿದ್ದರು. ಎಲ್ಲಿಯ ವರೆಗೆ ಎಂದರೆ, ಯಸರ್ ಬಿನ್ ಅಬ್‌ವಾರ್‌ತಾಅ್‌ರ ನೇತೃತ್ವದಲ್ಲಿ ಅಮೀರ್ ಮುಆವಿಯಾರ ಸಿರಿಯಾದ ಸೈನ್ಯ ಮದೀನದ ಮೇಲೆ ಆಕ್ರಮಣ ನಡೆಸಿದಾಗ, ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಮದೀನವನ್ನು ಬಿಟ್ಟು ಕೂಫದಲ್ಲಿದ್ದ ಹಝ್ರತ್ ಅಲಿಯರ(ರ) ಬಳಿಗೆ ಹೋದರು. ಹಝ್ರತ್ ಪೈಗಂಬರರ(ಸ) ನಿಧನದ ನಂತರ ಸಹಾಬಿಯರಿಗೆ ಖಿಲಾಫತಿನ ವತಿಯಿಂದ ಮಾಸಿಕ ವೇತನ ಲಭಿಸುತ್ತಿತ್ತು. ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಸ್ಟೈಪೆಂಡ್ ಮೊದಲು ನಾಲ್ಕು ಸಾವಿರವಾಗಿತ್ತು. ಹಝ್ರತ್ ಅಲಿ(ರ) ತನ್ನ ಖಿಲಾಫತ್ ಕಾಲದಲ್ಲಿ ಅದನ್ನು ಇಪ್ಪತ್ತು ಸಾವಿರ ಮಾಡಿದರು. ಮೊದಲು ಎಂಟು ಸೇವಕರು ಅವರ ಕೃಷಿಭೂಮಿಯಲ್ಲಿ ಕೆಲಸಮಾಡುತ್ತಿದ್ದರು. ಹಝ್ರತ್ ಅಲಿ(ರ) ಅವರಿಗಾಗಿ ನಲ್ವತ್ತು ಸೇವಕರನ್ನು ನಿಶ್ಚಯಿಸಿದರು. (ತಾರೀಖ್ ಅತ್ತಿಬರಿ, ಸಂಪುಟ–3, ಪುಟ–153, ದಆರುಲ್ ಕುತುಬ್ ಇಲ್‌ಮಿಯ ಬೈರೂತ್ 1987) (ಸೈರುಸ್ಸಹಾಬ, ಸಂಪುಟ–3, ಪುಟ–112, ದಾರುಲ್ ಇಶಾಅತ್ ಕರಾಚಿ 2004)

ಹಝ್ರತ್ ಹಬೀಬ್ ಬಿನ್ ಅಬೂ ಸಾಬಿತ್ ವರದಿ ಮಾಡುತ್ತಾರೆ: ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಅಮೀರ್ ಮುಆವಿಯರ ಬಳಿಗೆ ಹೋದರು. ಅವರೊಂದಿಗೆ ತನ್ನ ಮೇಲಿನ ಸಾಲದ ಬಗ್ಗೆ ದೂರಕೊಟ್ಟರು. ಅಮೀರ್ ಮುಆವಿಯ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಪರವಾಗಿ ಮಾತನಾಡಲಿಲ್ಲ. ಆಗ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹೇಳಿದರು: ನಾನು ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದನ್ನು ಕೇಳಿದ್ದೇನೆ: ನೀವು ನಂತರದ ಕಾಲದಲ್ಲಿ, ಕೆಲವರ ಮೇಲೆ ಕೆಲವರಿಗೆ ಆದ್ಯತೆಯನ್ನು ನೀಡುವುದನ್ನು ಕಾಣುವಿರಿ. ಅಮೀರ್ ಮುಆವಿಯಾ ಕೇಳಿದರು: ಆಗ ಏನು ಮಾಡಬೇಕೆಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು? ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹೇಳಿದರು: ಸಹನೆ ಕೈಗೊಳ್ಳಲು ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಎಂದರೆ, ನಿಮ್ಮ ಮಾತನ್ನು ಅಂಗೀಕರಿಸದಿದ್ದರೆ, ಕೇಳದಿದ್ದರೆ ಸಹನೆ ಕೈಗೊಳ್ಳಲು ನಿರ್ದೇಶಿಸಿದ್ದರು. ಆಗ ಅಮೀರ್ ಮುಆವಿಯ ಹೇಳಿದರು: ಹಾಗಾದರೆ, ನೀವು ಸಹನೆ ಕೈಗೊಳ್ಳಿರಿ. ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹೇಳಿದರು: ಅಲ್ಲಾಹನಾಣೆ, ನಾನು ನಿನ್ನಿಂದ ನನ್ನ ಯಾವುದೇ ಆವಶ್ಯಕತೆಯನ್ನು ಪೂರೈಸಲು ಇನ್ನು ಮುಂದೆ ಹೇಳುವುದಿಲ್ಲ. ಅನಂತರ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಬಸ್ರಗೆ ಹೋದರು ಮತ್ತು ಹಝ್ರತ್ ಇಬ್ನು ಅಬ್ಬಾಸ್‌ರ ಬಳಿ ತಂಗಿದರು. ಹಝ್ರತ್ ಇಬ್ನು ಅಬ್ಬಾಸ್(ರ) ಅವರಿಗಾಗಿ ತನ್ನ ಮನೆಯನ್ನು ಖಾಲಿ ಮಾಡಿದರು. ಹಝ್ರತ್ ಇಬ್ನು ಅಬ್ಬಾಸ್ ಹೇಳಿದರು: ನೀವು ಹಝ್ರತ್ ಪೈಗಂಬರರ(ಸ) ಅತಿಥಿ ಸತ್ಕಾರ ಮಾಡಿದ ರೀತಿಯಲ್ಲೇ ಖಂಡಿತವಾಗಿಯೂ ನಾನು ನಿಮ್ಮ ಅತಿಥಿ ಸತ್ಕಾರವನ್ನು ಮಾಡುವೆನು. ಹಝ್ರತ್ ಇಬ್ನು ಅಬ್ಬಾಸಿನ ನಿರ್ದೇಶನದಂತೆ ಮನೆಯವರು ಮನೆ ಖಾಲಿ ಮಾಡಿದರು. ಹಝ್ರತ್ ಇಬ್ನು ಅಬ್ಬಾಸ್ ಹೇಳಿದರು: ಮನೆಯಲ್ಲಿರುವುದೆಲ್ಲವೂ ನಿಮಗಾಗಿದೆ. ಅವರು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಗೆ(ರ) ನಲ್ವತ್ತು ಸಾವಿರ ದಿರ್ಹಮ್ ಮತ್ತು ಇಪ್ಪತ್ತು ಸೇವಕರನ್ನು ನೀಡಿದರು. ಹೀಗೆ ಅವರಿಗಾಗಿ ಮನೆಯನ್ನು ಖಾಲಿ ಮಾಡಿದರಲ್ಲದೆ, ನಲ್ವತ್ತು ಸಾವಿರ ದಿರ್ಹಮ್ ಮತ್ತು ಇಪ್ಪತ್ತು ಸೇವಕರನ್ನು ನೀಡಿದರು. (ಕನ್‌ಝುಲ್ ಅಮಾಲ್, ಸಂಪುಟ–13, ಪುಟ–614–615, ಹದೀಸ್–37570, ಮೊಅಸ್ಸಸುರ್ರಿಸಾಲ 1985)

**ವನ್‌ಫಿಖೂ ಫೀಸಬೀಲಿಲ್ಲಾಹಿ ವಲಾ ತುಲ್‌ಖೂ ಬಿಐದೀಕು ಇಲತ್ತಹ್‌ಲುಕತುನ್. ವಹ್‌ಸಿನೂ ಇನ್ನಲ್ಲಾಹ ಯುಹಿಬ್ಬುಲ್ ಮುಹ್ಸಿನೀನ್** ಎಂಬ ವಚನದ ವ್ಯಾಖ್ಯಾನದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಈ ವಚನದ ತಾತ್ಪರ್ಯವನ್ನು ಅರಿಯುವುದರಲ್ಲಿ ಜನರಿಗೆ ತುಂಬ ತಪ್ಪುಗಳು ಉಂಟಾಗಿವೆ.

**ವ ಅನ್‌ಫಿಕೂ ಫೀ ಸಬೀಲಿಲ್ಲಾಹಿ ವಲಾತುಲ್‌ಖೂ ಬಿ ಅಯ್‌ದೀಕುಮ್ ಇಲತ್ತಹ್‌ಲುಕತಿ ವ ಅಹ್‌ಸಿನೂ ಇನ್ನಲ್ಲಾಹ ಯುಹಿಬ್ಬುಲ್ ಮುಹ್‌ಸಿನೀನ್**–ಅಲ್ಲಾಹನ ಮಾರ್ಗದಲ್ಲಿ ಏನಾದರೂ ತೊಂದರೆ ಅನುಭವಿಸಬೇಕಾಗಿ ಬಂದರೆ, ಇದು ತಮ್ಮನ್ನು ತಾವೇ ನಾಶಕ್ಕೆ ಕೊಂಡುಹೋಗುವಂತಹ ಮಾತಾಗಿದೆ ಎಂದು ಭಾವಿಸುತ್ತಾರೆ. ಏಕೆಂದರೆ ಅಲ್ಲಾಹನ ಮಾರ್ಗದಲ್ಲಿ ಖರ್ಚುಮಾಡಿರಿ ಮತ್ತು ನಿಮ್ಮ ಕೈಗಳನ್ನು ಸ್ವತಃ ನಾಶಕ್ಕೆ ಗುರಿಪಡಿಸಬೇಡಿರಿ ಎಂದು ಅಲ್ಲಾಹನು ಹೇಳಿದ್ದಾನೆ. ಹೀಗಿರುವಾಗ ನಾವು ಇದರಲ್ಲಿ ಹೇಗೆ ಭಾಗಿಯಾಗುವುದು ಎಂದು ಕೇಳುತ್ತಾರೆ. ಸತ್ಯದಲ್ಲಿ, ಮರಣದ ಭಯವಿರುವಲ್ಲಿಂದ ಮುಸ್ಲಿಮರು ಓಡಿ ಪರಾರಿಯಾಗಬೇಕು ಮತ್ತು ಭೀರುತ್ವವನ್ನು ತೋರಿಸಬೇಕು ಎಂಬುದು ಖಂಡಿತ ಇದರ ಅರ್ಥವಲ್ಲ. ಬದಲಿಗೆ, ಶತ್ರುಗಳೊಂದಿಗೆ ಯುದ್ಧ ಮಾಡುವ ವೇಳೆ ತಮ್ಮ ಸಂಪತ್ತನ್ನು ಹೆಚ್ಚು ಹೆಚ್ಚಾಗಿ ಖರ್ಚುಮಾಡಬೇಕು. ನೀವು ನಿಮ್ಮ ಸಂಪತ್ತನ್ನು ಖರ್ಚುಮಾಡದೇ ಇದ್ದರೆ, ನೀವು ನಿಮ್ಮ ಕೈಯಿಂದಲೇ ತಮ್ಮ ಮರಣವನ್ನು ಬರಿಸುವಿರಿ ಎಂದಾಗಿದೆ ಇದರ ಅರ್ಥ. ನೋಡಿರಿ, ಹದೀಸುಗಳಲ್ಲಿ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯಿಂದ(ರ) ಹೀಗೆ ವರದಿಯಾಗಿವೆ: ಅವರು ಇಸ್ತಾಂಬುಲಿನ ಮೇಲೆ ವಿಜಯ ಸಾಧಿಸಲು ಹೋದಾಗ, ಈ ಆಯತ್ ಮದೀನದ ಅನ್ಸಾರ್‌ಗಳಾದ ನಮ್ಮ ಕುರಿತು ಅವತೀರ್ಣವಾಗಿತ್ತು. ಅವರು ಹೇಳುತ್ತಾರೆ: ಮೊದಲು ನಾವು ಅಲ್ಲಾಹನ ಮಾರ್ಗದಲ್ಲಿ ನಮ್ಮ ಸಂಪತ್ತುಗಳನ್ನು ಖರ್ಚುಮಾಡುತ್ತಿದ್ದೆವು. ಆದರೆ ಅಲ್ಲಾಹನು ತನ್ನ ಧರ್ಮವನ್ನು ಸುದೃಢಗೊಳಿಸಿ ಅದಕ್ಕೆ ಗೌರವವನ್ನು ನೀಡಿದಾಗ ಮತ್ತು ಮುಸ್ಲಿಮರಿಗೆ ವಿಜಯ ಲಭಿಸಿದಾಗ, ನಾವು ಹೀಗೆ ಹೇಳಿದೆವು: **ಖುಲ್ನ ಹಲ್ ನುಖೀಮು ಫೀ ಅಮ್‌ವಾಲಿನ ವನುಸ್‌ಲಿಹಿಹಾ.** ಎಂದರೆ, ಈಗ ನಾವು ನಮ್ಮ ಸಂಪತ್ತುಗಳನ್ನು ಸಂರಕ್ಷಿಸಿದರೆ ಮತ್ತು ಅವುಗಳನ್ನು ಒಟ್ಟುಗೂಡಿಸಿದರೆ, ಚೆನ್ನಾಗಿರುವುದು. ಆಗ ಈ ವಚನ ಅವತೀರ್ಣಗೊಂಡಿತ್ತು. ಎಂದರೆ, ಅಲ್ಲಾಹನ ಮಾರ್ಗದಲ್ಲಿ ತಮ್ಮ ಸಂಪತ್ತುಗಳನ್ನು ಖರ್ಚುಮಾಡುವುದರಿಂದ ಹಿಂದೆ ಸರಿಯಬೇಡಿರಿ. ಏಕೆಂದರೆ, ನೀವು ಹಾಗೆ ಮಾಡಿದರೆ, ನೀವು ನಿಮ್ಮ ಜೀವವನ್ನೇ ನಾಶಕ್ಕೆ ಗುರಿಪಡಿಸಿದಂತೆ ಆಗುವುದು. ಆದ್ದರಿಂದ ತಮ್ಮ ಸಂಪತ್ತುಗಳನ್ನು ಒಟ್ಟುಗೂಡಿಸಿಡಬೇಡಿರಿ. ಬದಲಿಗೆ ಅವುಗಳನ್ನು ಅಲ್ಲಾಹನ ಮಾರ್ಗದಲ್ಲಿ ಹೆಚ್ಚಾಗಿ ಖರ್ಚುಮಾಡಿರಿ. ಇಲ್ಲದಿದ್ದರೆ, ನಿಮ್ಮ ಜೀವಗಳು ವ್ಯರ್ಥವಾಗುವುವು. ಶತ್ರುಗಳು ನಿಮ್ಮ ಮೇಲೆ ಮೇಲುಗೈ ಸಾಧಿಸುವುದು. ಅದರ ಪರಿಣಾಮವಾಗಿ ನೀವು ನಾಶವಾಗುವಿರಿ. (ತಫ್‌ಸೀರೆ ಕಬೀರ್, ಸಂಪುಟ–2, ಪುಟ–429)

ಹಝ್ರತ್ ಅಲಿಯರ(ರ) ನಂತರ ಅಮೀರ್ ಮುಆವಿಯಾರ ಆಡಳಿತದ ಕಾಲ ಬಂದಾಗ, ಉಖ್‌ಬ ಬಿನ್ ಆಮಿರ್ ಜಹನ್ನ ಈಜಿಪ್ಟಿನ ಗವರ್ನರ್ ಆಗಿದ್ದರು. ಹಝ್ರತ್ ಉಖಬರ ಅಧಿಕಾರದ ಕಾಲದಲ್ಲಿ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಗೆ(ರ) ಎರಡು ಸಲ ಈಜಿಪ್ಟಿಗೆ ಹೋಗುವ ಸನ್ನಿವೇಶಗಳು ಉಂಟಾಯಿತು. ಮೊದಲಿನ ಯಾತ್ರೆ ಒಂದು ಹದೀಸಿನ ಬಗ್ಗೆ ತಿಳಿಯಲು ಆಗಿತ್ತು. ಹಝ್ರತ್ ಉಖ್‌ಬ ಒಂದು ಹದೀಸನ್ನು ವರದಿ ಮಾಡಿರುವುದಾಗಿ ಅವರ ಅರಿವಿಗೆ ಬಂದಿತ್ತು. ಕೇವಲ ಒಂದು ಹದೀಸಿಗಾಗಿ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ವೃದ್ಧಾಪ್ಯದಲ್ಲಿ ಯಾತ್ರೆಯ ಕಷ್ಟತೆಯನ್ನು ಹೊರಲು ತಯಾರಾದರು. ಎರಡನೇ ಬಾರಿ ರೋಮಿನಲ್ಲಿ ನಡೆದ ಯುದ್ಧದಲ್ಲಿ ಭಾಗಿಯಾಗುವ ಉದ್ದೇಶದಿಂದ ಈಜಿಪ್ಟಿಗೆ ಹೋಗಿದ್ದರು. (ಸೈರುಸ್ಸಹಾಬ, ಸಂಪುಟ–3. ಭಾಗ–1, ಪುಟ–113, ದಾರುಲ್ ಇಶಾಅತ್ ಲರಾಚಿ 2004)

ಮರ್‌ವಾನ್ ಮದೀನದ ಗವರ್ನರ್ ಆಗಿದ್ದಾಗ, ಅವರು ಒಂದು ದಿನ ಒಬ್ಬ ವ್ಯಕ್ತಿ ಹಝ್ರತ್ ಪೈಗಂಬರರ(ಸ) ಖಬರಿನ ಮೇಲೆ ತನ್ನ ಮುಖವನ್ನು ಸೇರಿಸಿ ಇರುವುದನ್ನು ಕಂಡರು. ಮರ್‌ವಾನ್ ಕೇಳಿದರು: ನೀವೇನು ಮಾಡುತ್ತಿದ್ದೀಯ ಎಂದು ನಿಮಗೆ ಗೊತ್ತೇ? ಇದು ಶಿರ್ಕ್ ಆಗಿದೆ. ಬಾಗುತ್ತಾ ಇದ್ದೀಯ. ಮರ್‌ವಾನ್ ಆ ವ್ಯಕ್ತಿಯ ಸಮೀಪಕ್ಕೆ ಬಂದಾಗ, ಅವರು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಆಗಿರುವರು ತಿಳಿದುಬಂತು. ಅವರು ಹೇಳಿದರು: ನಾನು ಹಝ್ರತ್ ಪೈಗಂಬರರ(ಸ) ಬಳಿಗೆ ಬಂದಿದ್ದೇನೆ. ಈ ಕಲ್ಲುಗಳ ಬಳಿಗೆ ಬಂದಿಲ್ಲ. (ಅಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–7, ಪುಟ–785, ಮಸ್ನದ್ ಅಬೂ ಅಯ್ಯೂಬ್ ಅನ್ಸಾರಿ, ಹದೀಸ್–23983, ಆಲಿಮುಲ್ ಕುತುಬ್ ಬೈರೂತ್ 1998) (ಸೈರುಸ್ಸಹಾಬ, ಸಂಪುಟ–3, ಪುಟ–116, ದಾರುಲ್ ಇಶಾಅತ್ ಕರಾಚಿ 2004)

ಎಂದರೆ, ನನಗೆ ಹಝ್ರತ್ ಪೈಗಂಬರರೊಂದಿಗೆ(ಸ) ಇರುವ ಪ್ರೀತಿ ಮತ್ತು ಪ್ರೇಮದ ಕಾರಣದಿಂದ ಬಾಗಿನಂತಿರುವೆನು. ಕಲ್ಲುಗಳಿಗೆ ಸಜ್‌ದ ಮಾಡುತ್ತಿಲ್ಲ. ನಾನು ಶಿರ್ಕ್ ಸಹ ಮಾಡುತ್ತಿಲ್ಲ. ಇದು ಕೇವಲ ನನ್ನ ಪ್ರೇಮದ ಪ್ರಕಟಣೆಯಾಗಿದೆ. ಈಗಲೂ ಅಲ್ಲಾಹನ ಮೇಲಿನ ಏಕದೇವವಿಶ್ವಾಸ ನನ್ನ ಹೃದಯದಲ್ಲಿ ಇದೆ. ಶಿರ್ಕ್ ಮಾಡುತ್ತಿಲ್ಲ.

ಅಬೂ ಅಬ್ದುರ್ರಹ್ಮಾನ್ ಹಬ್‌ಲಿಯಿಂದ ಹೀಗೆ ವರದಿಯಾಗಿದೆ: ನಾವು ಸಮುದ್ರದ ಬಳಿಯಲ್ಲಿ ಇದ್ದೆವು. ಅಬ್ದುಲ್ಲಾಹ್ ಬಿನ್ ಖೈಸ್ ಖಝ್ಝಾರಿ ನಮ್ಮ ಅಮೀರ್ ಆಗಿದ್ದರು. ನಮ್ಮೊಂದಿಗೆ ಅಬೂ ಅಯ್ಯೂಬ್ ಅನ್ಸಾರಿ(ರ) ಸಹ ಇದ್ದರು. ಅವರು ಯುದ್ಧದ ಸಂಪತ್ತು ವಿತರಣೆ ಮಾಡುವವರ ಬಳಿಯಿಂದ ದಾಟಿಹೋಗುತ್ತಿದ್ದರು. ಅವರು ಖೈದಿಗಳ ಮೇಲ್ನೋಟ ವಹಿಸುತ್ತಿದ್ದರು. ಆಗ ಒಬ್ಬಳು ಸ್ತ್ರೀ ಅಳುತ್ತಿರುವುದನ್ನು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ನೋಡಿದರು. ಏನಾಯಿತೆಂದು ಆ ಸ್ತ್ರೀಯೊಡನೆ ಕೇಳಿದರು. ಜನರು ಹೇಳಿದರು: ಈ ಸ್ತ್ರೀಯನ್ನು ಇವಳ ಮಗುವಿನಿಂದ ಬೇರ್ಪಡಿಸಿ ಇರಿಸಲಾಗಿದೆ. ಆಗ ಅವರು ಮಗುವಿನ ಕೈಯನ್ನು ಹಿಡಿದುಕೊಂಡು ತಾಯಿಗೆ ಒಪ್ಪಿಸಿದರು. ಅನಂತರ ಯುದ್ಧದ ಸಂಪತ್ತನ್ನು ವಿತರಣೆ ಮಾಡುತ್ತಿದ್ದ ವ್ಯಕ್ತಿ ಅಬ್ದುರ್ರಹ್ಮಾನ್ ಬಿನ್ ಖೈಸ್‌ರ ಬಳಿಗೆ ಹೋಗಿ ನಡೆದದ್ದೆನ್ನೆಲ್ಲ ಅವರಿಗೆ ಹೇಳಿಕೊಟ್ಟರು. ಅವರು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯನ್ನು(ರ) ತಮ್ಮ ಬಳಿಗೆ ಕರೆಸಿ ಹೀಗೆ ಏಕೆ ಮಾಡಿದ್ದೀರಿ ಎಂದು ಕೇಳಿದರು. ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ನಾನು ಕೇಳಿದ್ದೇನೆ: ಯಾರು ತಾಯಿ ಮತ್ತು ಮಗನ ನಡುವೆ ಅಗಲುವಿಕೆ ಉಂಟುಮಾಡುತ್ತಾನೋ, ಅಲ್ಲಾಹನು ಅವನ ಮತ್ತು ಅವನ ಆಪ್ತರ ನಡುವೆ ಖಿಯಾಮತ್ ದಿನದಂದು ಅಗಲುವಿಕೆಯನ್ನು ಉಂಟುಮಾಡುವನು. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–7, ಪುಟ–764, ಹದೀಸ್–23895, ಆಲಿಮುಲ್ ಕುತುಬ್ ಬೈರೂತ್ 1998)

ಕೆಲವರು ಮಕ್ಕಳನ್ನು ತಾಯಿಯಿಂದ ಕಸಿದುಕೊಳ್ಳುತ್ತಾರೆ. ಅವರಿಗೂ ಇದರಲ್ಲಿ ಪಾಠವಿದೆ. ಇಸ್ಲಾಮಿನ ಮೇಲೆ ಆಕ್ಷೇಪವೆತ್ತುವವರು ಸ್ವತಃ ಏನು ಮಾಡುತ್ತಾರೆಂದು ನೋಡಿರಿ. ಇಸ್ಲಾಂ ಇದರ ಬಗ್ಗೆ ಇಷ್ಟೆಲ್ಲ ಕಾಳಜಿವಹಿಸುತ್ತದೆ. ಕಳೆದ ಕೆಲವು ದಿನಗಳ ಹಿಂದೆಯೂ ಅಮೇರಿಕದಿಂದ ವಾರ್ತೆ ಬಂದಿತ್ತು. ಅಲ್ಲಿಗೆ ವಲಸೆ ಹೋದವರನ್ನು ಬೇರೆ ಬೇರೆಯಾಗಿ ಅವರು ಇರಿಸಿದ್ದಾರೆ. ತಾಯಂದಿರನ್ನು ಬೇರೆಯಾಗಿ, ಮಕ್ಕಳನ್ನು ಬೇರೆಯಾಗಿ ಇರಿಸಿದ್ದರು. ಕೆಲವು ಕಾಲದ ನಂತರ ಕೆಲವು ಮಕ್ಕಳಿಗೆ ತಾಯಂದಿರ ಗುರುತು ಕೂಡ ಸಿಗುತ್ತಿರಲಿಲ್ಲ. ಹೇಗಿದ್ದರೂ ತಾಯಂದಿರನ್ನು ಮಕ್ಕಳಿಂದ ಬೇರ್ಪಡಿಸಬಾರದೆಂದು ಇಸ್ಲಾಂ ಉಪದೇಶಿಸುತ್ತದೆ. ಈ ಕಾರಣದಿಂದ ಅವರನ್ನು ದುಃಖಿತರನ್ನಾಗಿ ಮಾಡಬಾರದೆಂದು ಹೇಳುತ್ತದೆ.

ಹಝ್ರತ್ ಮರ್ಸದ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಜಿಹಾದಿನ ಉದ್ದೇಶದಿಂದ ನಮ್ಮ ಬಳಿಗೆ ಬಂದಿದ್ದರು. ಆ ದಿನಗಳಲ್ಲಿ ಹಝ್ರತ್ ಅಖ್‌ಬ ಬಿನ್ ಆಮಿರ್ ಈಜಿಪ್ಟಿನ ಅಧಿಕಾರಿಯಾಗಿದ್ದರು. ಅವರು ಮಗ್‌ರಿಬ್ ನಮಾಝನ್ನು ತಡವಾಗಿ ನಿರ್ವಹಿಸಿದರು. ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಅವರ ಬಳಿಗೆ ಹೋಗಿ, ಇದು ಎಂತಹ ನಮಾಝ್ ಎಂದು ಕೇಳಿದರು. ನಾವು ಕೆಲಸಗಳಲ್ಲಿ ನಿರತರಾಗಿದ್ದೆವು ಎಂದು ಹಝ್ರತ್ ಉಖ್‌ಬ ಉತ್ತರಿಸಿದರು. ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹೇಳಿದರು: ಅಲ್ಲಾಹನಾಣೆ, ಹಝ್ರತ್ ಪೈಗಂಬರ್(ಸ) ಹೀಗೆ ಮಾಡುತ್ತಿದ್ದರು ಎಂದು ಜನರು ತಪ್ಪಾಗಿ ತಿಳಿಯದಿರಲು ನಾನು ಕೇಳಿದೆಯಷ್ಟೆ. ಹಝ್ರತ್ ಪೈಗಂಬರ್(ಸ) ಹೇಳಿದ್ದನ್ನು ನೀವು ಕೇಳಿರಲಿಲ್ಲವೇ? ಪೈಗಂಬರರು(ಸ) ಹೀಗೆ

ಹೇಳಿದ್ದರು: ಮಗ್‌ರಿಬ್ ನಮಾಝ಼್ ಅನುಷ್ಠಿಸುವುದರಲ್ಲಿ ತಡಮಾಡದ ತನಕ ನನ್ನ ಉಮ್ಮತ್ ಉತ್ತಮ ಸ್ಥಿತಿಯಲ್ಲಿ ಅಥವಾ ಸಹಜ ಸ್ಥಿತಿಯಲ್ಲಿ ಇರುವುದು. ಎಂದರೆ, ಮಗ್‌ರಿಬ್ ನಮಾಝ಼್ ತಡಮಾಡದೇ ನಿರ್ವಹಿಸಬೇಕು. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–7, ಪುಟ–773, ಹದೀಸ್–23931, ಆಲಿಮುಲ್ ಕುತುಬ್ ಬೈರೂತ್ 1998)

ಅಬೂ ವಾಸಿಲ್ ವರದಿ ಮಾಡುತ್ತಾರೆ: ನಾನು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯನ್ನು(ರ) ಭೇಟಿಯಾದೆನು. ಅವರು ನನಗೆ ಹಸ್ತಲಾಘವ ಮಾಡಿದರು. ನನ್ನ ಉಗುರುಗಳು ಉದ್ದವಾಗಿರುವುದನ್ನು ಅವರು ಕಂಡರು. ಆಗ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದನ್ನು ಅವರು ನನಗೆ ಹೇಳಿಕೊಟ್ಟರು: ಕೆಲವರಾದರೋ ಅಧ್ಯಾತ್ಮಿಕ ಸಂಗತಿಗಳ ಬಗ್ಗೆ ಪ್ರಶ್ನಿಸುತ್ತಿರುತ್ತಾರೆ, ಆದರೆ ಅವರು ಉಗುರುಗಳನ್ನು ಪಕ್ಷಿಗಳ ಹಾಗೆ ಉದ್ದವಾಗಿ ಬೆಳೆಸುತ್ತಾರೆ. ಅವುಗಳಲ್ಲಿ ಅಶುದ್ಧತೆ, ಮಾಲಿನ್ಯ ಮತ್ತು ಕೊಳೆಗಳು ಒಟ್ಟುಗೂಡಿರುತ್ತವೆ. ಆದ್ದರಿಂದ ಉಗುರುಗಳನ್ನು ಕತ್ತರಿಸಿರಿ. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–7, ಪುಟ–775, ಮಸ್ನದ್ ಅಬೂ ಅಯ್ಯೂಬ್ ಅನ್ಸಾರಿ, ಹದೀಸ್–23938, ಆಲಿಮುಲ್ ಕುತುಬ್ ಬೈರೂತ್ 1998)

ಎಂದರೆ, ನೀವು ದೊಡ್ಡ ದೊಡ್ಡ ವಿಷಯಗಳ ಬಗ್ಗೆ ಕೇಳುತ್ತಿರುತ್ತೀರಿ. ದಿವ್ಯಜ್ಞಾನದ ಬಗ್ಗೆ ಸವಾಲು ಮಾಡುತ್ತೀರಿ. ಆದರೆ, ನಿಮ್ಮ ಸ್ಥಿತಿಯೇನೆಂದರೆ, ಉಗುರುಗಳು ತುಂಬ ಉದ್ದವಾಗಿರುತ್ತವೆ. ಅದರಲ್ಲಿ ಮಾಲಿನ್ಯಗಳು ಒಟ್ಟುಗೂಡಿರುತ್ತವೆ. ಆದ್ದರಿಂದ ಉಗುರುಗಳನ್ನು ಕತ್ತರಿಸಿಡಬೇಕು. ಮುಸ್ನದ್ ಅಹ್ಮದ್ ಬಿನ್ ಹಂಬಲ್‌ರಿಂದ ಒಂದು ಹದೀಸ್ ಹೀಗೆ ವರದಿಯಾಗಿದೆ: ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಶ್ರೇಷ್ಠತೆ ಮತು ಉತ್ಕೃಷ್ಟತೆ ಒಪ್ಪಿಕೊಂಡ ಸಂಗತಿಯಾಗಿತ್ತು. ಸಹಾಬಿಯರು ಸಹ ಅವರಿಂದ ಸಮಸ್ಯೆಗಳ ಪರಿಹಾರಗಳನ್ನು ಕೇಳುತ್ತಿದ್ದರು. ಹಝ್ರತ್ ಪೈಗಂಬರರಿಂದ(ಸ) ತರಬೇತಿ ಪಡೆದಿದ್ದ ಸಹಾಬಿಯರಾದ ಹಝ್ರತ್ ಇಬ್ನು ಅಬ್ಬಾಸ್, ಇಬ್ನು ಉಮರ್, ಬರಾ ಬಿನ್ ಆಝ಼ಿಬ್, ಅನಸ್ ಬಿನ್ ಮಾಲಿಕ್, ಅಬೂ ಉಮಾಮ, ಝೈದ್ ಬಿನ್ ಖ಼ಾಲಿದ್ ಜಹನ್ನಿ, ಮಿಖ್‌ದಾಮ್ ಬಿನ್ ಮಹ್‌ದಿ ಕರ್‌ಬ್, ಜಾಬಿರ್ ಬಿನ್ ಸಮ್‌ರ, ಅಬ್ದುಲ್ಲಾಹ್ ಬಿನ್ ಯಝೀದ್ ಖತ್‌ಮಿಯಂಥವರು ಸಹ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ ಸಹವಾಸ ಮತ್ತು ಅರಿವಿನಂದ(ರ) ಪ್ರಯೋಜನ ಪಡೆಯುತ್ತಿದ್ದರು. ಅದೇ ರೀತಿಯಲ್ಲಿ ತಾಬಿಯರಲ್ಲಿ (ಹಝ್ರತ್ ಪೈಗಂಬರರನ್ನು ಕಾಣದವರು, ಆದರೆ ಪೈಗಂಬರರ(ಸ) ಸಹಾಬಿಯರನ್ನು ಕಂಡವರನ್ನು ತಾಬೀ ಎಂದು ಹೇಳಲಾಗುತ್ತದೆ) ತಾಬಿಯರಲ್ಲಿ, ಸಈದ್ ಬಿನ್ ಮುಸಯ್ಯಬ್, ಉರ್‌ವ ಬಿನ್ ಝುಬೇರ್, ಸಾಲಿಮ್ ಬಿನ್ ಅಬ್ದುಲ್ಲಾಹ್, ಅತಾ ಬಿನ್ ಯಸಾರ್, ಅತಾ ಬಿನ್ ಯಝೀದ್ ಲೇಸಿ, ಅಬೂ ಸಲ್ಮ, ಅಬ್ದುರ್ರಹ್ಮಾನ್ ಬಿನ್ ಉಬಯ್ಯ್ ಲೈಲಿರಂತಹ ಉನ್ನತ ಸ್ಥಾನವನ್ನು ಹೊಂದಿದ್ದ ವ್ಯಕ್ತಿಗಳು ಸಹ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯನ್ನು(ರ) ಬಹಳ ಗೌರವದ ದೃಷ್ಟಿಯಿಂದ ನೋಡುತ್ತಿದ್ದರು. (ಸೈರುಸ್ಸಹಾಬ, ಸಂಪುಟ–3, ಭಾಗ–3, ಪುಟ–115, ದಾರುಲ್ ಇಶಾಅತ್ ಕರಾಚಿ 2004)

ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ವರದಿ ಮಾಡುತ್ತಾರೆ: ಮುಆವಿಯಾದ ಕಾಲದಲ್ಲಿ ನಾನು ಜಿಹಾದ್ ಮಾಡಲು ಹೊರಟೆನು. ನಾನು ರೋಗಿಯಾದೆ. ನನ್ನ ರೋಗ ವರ್ಧಿಸಿತು. ನಾನು ನನ್ನ ಸಂಗಡಿಗರೊಡನೆ ಹೇಳಿದೆ: ನಾನು ಮೃತಪಟ್ಟರೆ, ನನ್ನನ್ನು ಎತ್ತಿರಿ. ನೀವು ಶತ್ರುಗಳ ವಿರುದ್ಧ ಹೋರಾಡಲು ಪಂಕ್ತಿಬದ್ಧರಾಗುವಾಗ, ನನ್ನನ್ನು ನಿಮ್ಮ ಹೆಜ್ಜೆಗಳ ಬಳಿಯಲ್ಲಿ ದಫನ್ ಮಾಡಿರಿ. ನಾನು ನಿಮ್ಮೊಡನೆ ಹಝ್ರತ್ ಪೈಗಂಬರರಿಂದ(ಸ) ಆಲಿಸಿದ್ದ ಒಂದು ಹದೀಸನ್ನು ಹೇಳುತ್ತೇನೆ. ನನ್ನ ಮರಣ ಸಮೀಪವಾಗಿರದಿದ್ದರೆ, ನಾನು ಅದನ್ನು ಹೇಳುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ನಾನು ಕೇಳಿದ್ದೇನೆ. ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡದೇ ಮರಣಗೊಳ್ಳುವವನು ಸ್ವರ್ಗಕ್ಕೆ ಪ್ರವೇಶಿಸುವನು. ಒಂದು ವರದಿಯಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಮರಣ ಸಮೀಪವಾದಾಗ, ಅವರು ಹೇಳಿದರು: ನಾನು ಹಝ್ರತ್ ಪೈಗಂಬರರಿಂದ(ಸ) ಕೇಳಿದ್ದ ಒಂದು ಮಾತನ್ನು ನಿಮ್ಮಿಂದ ರಹಸ್ಯವಾಗಿ ಇಟ್ಟಿದ್ದೆ. ಹಝ್ರತ್ ಪೈಗಂಬರ್(ಸ) ಹೇಳಿದ್ದರು: ನೀವು ಪಾಪಗಳನ್ನು ಮಾಡದಿರುತ್ತಿದ್ದರೆ, ಅತ್ಯುನ್ನತನಾದ ಅಲ್ಲಾಹನು ಪಾಪಗಳನ್ನು ಮಾಡುವ ಒಂದು ಜನತೆಯನ್ನು ಸೃಷ್ಟಿ ಮಾಡುತ್ತಿದ್ದನು. ಅನಂತರ ಅವರನ್ನು ಕ್ಷಮಿಸುತ್ತಿದ್ದನು. ಎಂದರೆ, ಅಲ್ಲಾಹನು ತನ್ನ ಕಾರುಣ್ಯದ ಮತ್ತು ಕ್ಷಮಿಸುವ ಗುಣಕ್ಕೆ ಅಷ್ಟಕ್ಕೂ ಬೆಲೆಕೊಡುತ್ತಾನೆ. ಮುಹಮ್ಮದ್ ವರದಿ ಮಾಡುತ್ತಾರೆ: ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಬದ್ರ್ ಯುದ್ಧದಲ್ಲಿ ಭಾಗವಹಿಸಿದ್ದರು. ಅವರು ಮುಸ್ಲಿಮರ ಯಾವುದೇ ಯುದ್ಧದಲ್ಲಿ ಹಿಂದೆ ಉಳಿದಿರಲಿಲ್ಲ. ಒಂದೇ ಸಮಯದಲ್ಲಿ ಎರಡು ಯುದ್ಧಗಳು ನಡೆಯುತ್ತಿದ್ದಾಗ, ಅವರು ಯಾವುದಾದರೂ ಒಂದರಲ್ಲಿ ಭಾಗಿಯಾಗಿರುತ್ತಿದ್ದರು. ಆದರೆ ಒಂದು ವರ್ಷ ಒಂದು ಯುದ್ಧದಲ್ಲಿ ಭಾಗವಹಿಸಿರಲಿಲ್ಲ. ಏಕೆಂದರೆ, ಒಬ್ಬ ಯುವಕ ಆ ಯುದ್ಧದ ಸೇನಾಧಿಪತಿಯಾಗಿದ್ದನು. ಆ ವರ್ಷ ಅವರು ಯುದ್ಧಕ್ಕೆ ಹೋಗದೆ ಕುಳಿತುಕೊಂಡರು. ಆದರೆ ಆ ವರ್ಷದ ನಂತರ ಅವರು ಆ ತೀರ್ಮಾನದ ಬಗ್ಗೆ ದುಃಖಿತರಾಗಿ ಹೀಗೆ ಹೇಳಿದರು: ನನ್ನ ಅಧಿಕಾರಿ ಯಾರೇ ಆಗಿದ್ದರೂ ನನಗೇನು? ಯಾರನ್ನು ನನ್ನ ಅಧಿಕಾರಿಯನ್ನಾಗಿ ಮಾಡಲಾಗಿದೆ ಎಂಬುದರ ಬಗ್ಗೆ ನಾನೇಕೆ ಚಿಂತಿಸಬೇಕು? ನನ್ನ ಮೇಲೆ ಯಾರನ್ನು ಬೇಕಾದರೂ ಅಧಿಕಾರಿಯನ್ನಾಗಿ ಮಾಡಲಿ, ಅದರಿಂದ ನನಗೇನು ನಷ್ಟ. ಹೀಗೆ ಅವರು ಮೂರು ಸಹ ಹೇಳಿದರು. ಈ ವರದಿಯಲ್ಲಿ ಪ್ರಸ್ತಾಪಿಸಲಾದ ಯುವ ಸೇನಾಧಿಪತಿಯ ಹೆಸರು ಅಬ್ದುಲ್ ಮಲಿಕ್ ಬಿನ್ ಮರ್‌ವಾನ್ ಎಂದಾಗಿತ್ತು ಎಂದು ಹೇಳಲಾಗುತ್ತದೆ. ಅನಂತರಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ರೋಗಿಯಾದರು. ಸೈನ್ಯದಲ್ಲಿ ಯಝೀದ್ ಬಿನ್ ಮುಆವಿಯ ಅಮೀರ್ ಆಗಿದ್ದರು. ಅವರು ಹಝ್ರತ್ ಅಬೂ ಅನ್ಸಾರಿಯ(ರ) ಬಳಿಗೆ ಯೋಗಕ್ಷೇಮ ವಿಚಾರಿಸಲು ಬಂದರು ಮತ್ತು ಹೀಗೆ ಕೇಳಿದರು: ನಿಮಗೆ ಏನಾದರೂ ಆವಶ್ಯಕತೆಯಿರುವುದಾದರೆ ಹೇಳಿರಿ. ಅವರು ಹೇಳಿದರು: ನನ್ನ ಆವಶ್ಯಕತೆಯೇನೆಂದರೆ, ನನ್ನ ಮರಣದ ನಂತರ, ನನ್ನನ್ನು ಸವಾರಿಯಲ್ಲಿರಿಸಿಕೊಂಡು ನಿಮಗೆ ಸಾಧ್ಯವಿರುವಷ್ಟು ದೂರಕ್ಕೆ ಶತ್ರುಗಳ ದೇಶದ ಕಡೆಗೆ ಕೊಂಡುಹೋಗಿರಿ. ಅಲ್ಲೇ ದಫನ್ ಮಾಡಿ ವಾಪಾಸ್ಸು ಬನ್ನಿರಿ. ಹಝ್ರತ್ ಅಬೂ ಅನ್ಸಾರಿ(ರ) ನಿಧನರಾದಾಗ, ಯಝೀದ್ ಬಿನ್ ಮುಆವಿಯ ಅವರನ್ನು ಸವಾರಿ ಮೇಲೇರಿಸಿ, ಸಾಧ್ಯವಾದಷ್ಟು ದೂರಕ್ಕೆ ಶತ್ರುಗಳ ದೇಶದೊಳಗೆ ಕೊಂಡುಹೋದರು. ಅಲ್ಲೇ ದಫನ್ ಮಾಡಿ ಮರಳಿ ಬಂದರು.

ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹೇಳಿದ್ದಾಗಿ ವರದಿಗಾರ ವರದಿ ಮಾಡುತ್ತಾರೆ: **ಇನ್‌ಫಿರೂ ಖ಼ಿಫಾಫನ್ ವ ಸಿಕಾಲ,** ಎಂದರೆ, ಹಗುರವಾಗಿಯೂ ಭಾರವಾಗಿಯೂ ಯುದ್ಧಕ್ಕಾಗಿ ಹೊರಡಿರಿ ಎಂದು ಅಲ್ಲಾಹನು ಹೇಳಿದ್ದಾನೆ. ನಾನು ನನ್ನನ್ನು ಹಗುರವಾಗಿಯೂ ಭಾರಿಯಾಗಿಯೂ ಕಾಣುತ್ತಿದ್ದೇನೆ. ಮಕ್ಕಾ ನಿವಾಸಿಗಳಲ್ಲಿ ಒಬ್ಬರಿಂದ ಹೀಗೆ ವರದಿಯಾಗಿದೆ: ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಬಳಿಗೆ ಯಝೀದ್ ಬಿನ್ ಮುಆವಿಯಾ ಬಂದಾಗ, ಅವರು ಹೇಳಿದರು: ಜನರಿಗೆ ನನ್ನ ಸಲಾಂ ಹೇಳಿರಿ. ಜನರು ನನ್ನನ್ನು ಎಷ್ಟು ದೂರಕ್ಕೆ ಕೊಂಡು ಹೋಗಬಲ್ಲರೋ ಅಷ್ಟು ದೂರಕ್ಕೆ ಕೊಂಡುಹೋಗಲಿ. ಹೀಗೆ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹೇಳಿದ್ದನ್ನು ಯಝೀದ್ ಬಿನ್ ಮುಆವಿಯಾ ಜನರಿಗೆ ತಿಳಿಸಿದರು. ಜನರು ಸಮ್ಮತಿಸಿದರು ಮತ್ತು ಅವರ ಜನಾಝವನ್ನು ಅವರಿಗೆ ಸಾಧ್ಯವಾದಷ್ಟು ದೂರಕ್ಕೆ ಕೊಂಡುಹೋದರು.

ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹಝ್ರತ್ ಪೈಗಂಬರರ(ಸ) ವಫಾತಿನ ನಂತರ, ತನ್ನ ಮರಣದ ವರೆಗೆ ಎಲ್ಲ ಯುದ್ಧಗಳಲ್ಲಿ ಭಾಗಿಯಾಗಿದ್ದರು. ಕೊನೆಗೆ ಅವರು ಇಸ್ತಾಂಬುಲಿನಲ್ಲಿ ನಿಧನರಾದರು. ಒಂದು ವರದಿಯ ಪ್ರಕಾರ, ಹಿಜರೀ 52ರಲ್ಲಿ, ಯಝೀದ್ ಬಿನ್ ಮುಆವಿಯ ತನ್ನ ತಂದೆಯಾದ ಅಮೀರ್ ಮುಆವಿಯಾದ ಖ಼ಿಲಾಫತ್ ಕಾಲದಲ್ಲಿ ಇಸ್ತಾಂಬುಲಿನ ಯುದ್ಧದಲ್ಲಿ ಹೋರಾಡಿದ್ದರು. ಅದೇ ವರ್ಷ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ನಿಧನರಾದರು ಎಂದಿದೆ. ಯಝೀದ್ ಬಿನ್ ಮುಆವಿಯ ಅವರ ಜನಾಝ ನಮಾಝ಼್ ನಿರ್ವಹಿಸಿದ್ದರು. ಹಝ್ರತ್ ಅಬೂ ಅನ್ಸಾರಿಯ(ರ) ಗೋರಿ ರೋಮಿನಲ್ಲಿ ಇಸ್ತಾಂಬುಲಿನ ಕೋಟೆಯೊಳಗೆ ಇದೆ. ವರದಿಗಾರ ಹೇಳುತ್ತಾರೆ: ರೋಮಿನ ನಿವಾಸಿಯರು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಗೋರಿಯನ್ನು ಸಂರಕ್ಷಿಸುತ್ತಾರೆ ಮತ್ತು ಅದರ ದುರಸ್ತಿ ಸಹ ಮಾಡುತ್ತಾರೆ ಎಂದು ನನಗೆ ಅಲ್ಲಿಂದ ತಿಳಿದುಬಂದಿದೆ. ಕ್ಷಾಮದ ಕಾಲದಲ್ಲಿ ಅವರ ಮುಖಾಂತರ ಅಲ್ಲಿಯ ನಿವಾಸಿಯರು ನೀರಿಗಾಗಿ ಬೇಡುತ್ತಿದ್ದರು.
(ಅತ್ತಬಖಾತುಲ್ ಕುಬ್ರ ಸಂಪುಟ–3, ಪುಟ–369–370, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990) (ಅಲ್‌ಅಸಾಬ, ಸಂಪುಟ–2, ಪುಟ–201, ದಆರುಲ್ ಕುತುಬ್ ಇಲ್‌ಮಿಯ ಬೈರೂತ್ 1995) (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–7, ಪುಟ–768, ಹದೀಸ್–23912, ಆಲಿಮುಲ್ ಕುತುಬ್ ಬೈರೂತ್ 1998)

ಒಂದು ವರದಿಯ ಪ್ರಕಾರ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಅಮೀರ್ ಮುಆವಿಯರ ಖ಼ಿಲಾಫತ್ ಕಾಲದಲ್ಲಿ, ಯಝೀದಿನ ನೇತೃತ್ವದ ಅಡಿಯಲ್ಲಿ, ರೋಮನ್ನರ ವಿರುದ್ಧ ನಡೆದ ಯುದ್ಧದಲ್ಲಿ ಭಾಗವಹಿಸಿದ್ದರು ಎಂದಿದೆ. ಇಸ್ತಾಂಬುಲಿನ ಪಟ್ಟಣದ ಸಮೀಪ ಹಿಜರೀ 50 ಅಥವಾ 52ಕ್ಕೆ ನಿಧನರಾಗಿ ಅಲ್ಲೇ ದಫನ್ ಮಾಡಲ್ಪಟ್ಟರು ಎಂದೂ ಇದೆ. ಒಂದು ವರದಿಯ ಪ್ರಕಾರ, ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಖಬರಿನ ಮೇಲಿಂದ ಆಚೆ ಈಚೆ ಕುದುರೆಯನ್ನು ಓಡಿಸಲು ಕುದುರೆ ಸವಾರರೊಡನೆ ಯಝೀದ್ ಆದೇಶಿಸಿದರು ಎಂದಿದೆ. ಹೀಗೆ ಅವರ ಗೋರಿಯ ಗುರುತು ಇಲ್ಲವಾಯಿತು. ಒಂದು ವರದಿಯ ಪ್ರಕಾರ ಹೀಗೆಯೂ ಬಂದಿದೆ: ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ನಿಧನರಾದ ಮರುದಿನ ಬೆಳಿಗ್ಗೆ ರೋಮನ್ನರು ಮುಸ್ಲಿಮರೊಡನೆ ಕೇಳಿದರು: ನೀವು ರಾತ್ರಿ ಏನು ಮಾಡುತ್ತಿದ್ದೀರಿ? ಮುಸ್ಲಿಮರು ಹೇಳಿದರು: ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹಝ್ರತ್ ಪೈಗಂಬರರ(ಸ) ಶ್ರೇಷ್ಠ ಸಹಾಬಿಯಾಗಿದ್ದರು. ಆರಂಭ ಕಾಲದಲ್ಲಿ ಇಸ್ಲಾಂ ಧರ್ಮವನ್ನು ಅವರು ಸ್ವೀಕರಿಸಿದ್ದರು. ನಾವು ಅವರನ್ನು ದಫನ್ ಮಾಡುತ್ತಿದ್ದೆವು. ಅಲ್ಲಾಹನಾಣೆ, ನಮ್ಮ ಬಳಿ ಆಡಳಿತವಿರುವ ವರೆಗೆ, ಅರೇಬಿಯಾದಲ್ಲಿ ನಿಮಗೆ ಮೇಲುಗೈ ಉಂಟಾಗುವಂತೆ ನಾವು ಬಿಡಲಾರೆವು. ಮುಜಾಹಿದ್ ವರದಿಮಾಡುತ್ತಾರೆ: ಅವರ ಪ್ರದೇಶದಲ್ಲಿ ಕ್ಷಾಮ ಉಂಟಾಗುವಾಗ, ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಗೋರಿಯಿಂದ ಸ್ವಲ್ಪ ಮಣ್ಣನ್ನು ಸರಿಸುತ್ತಿದ್ದರು. ಆಗ ಮಳೆ ಬರುತ್ತಿತ್ತು. (ಅಸದುಲ್‌ಗಾಬ, ಸಂಪುಟ–6, ಪುಟ–23, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003)

ರೋಮಿನ ಈ ಪ್ರದೇಶದಲ್ಲಿ ಈಗಲೂ ಈ ರಿವಾಜಿದೆ. ಎಲ್ಲಿಯ ವರೆಗೆ ಇದು ಸರಿಯೆಂದು ಅಲ್ಲಾಹನೇ ಬಲ್ಲನು. ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹಿಜರೀ 50,51, ಅಥವಾ 52ರಲ್ಲಿ ಇಸ್ತಾಂಬುಲಿನ ಯುದ್ಧದ ವೇಳೆ ನಿಧನರಾದರು. ಹೆಚ್ಚಿನವರು 52ರಲ್ಲಿ ಎಂದು ಹೇಳಿದ್ದಾರೆ. (ಅಲ್‌ಅಸಾಬ, ಸಂಪುಟ–2, ಪುಟ–201, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1995)

ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಗೋರಿ ತುರ್ಕಿಯ ಪಟ್ಟಣವಾದ ಇಸ್ತಾಂಬುಲಿನಲ್ಲಿದೆ. ಇವರ ಗೋರಿಯೂ ಒಂದು ಎತ್ತರದ ಚೌಕಟ್ಟಿನಲ್ಲಿದೆ. ಅದನ್ನು ಹಿತ್ತಾಳೆ ಕಂಬಿಯ ಬಾಗಿಲಿಂದ ಮುಚ್ಚಿಡಲಾಗಿದೆ.ತುರ್ಕಿಯ ಹೆಚ್ಚಿನ ಜನರು ಮನಸ್ಸಮಾಧಾನಕ್ಕಾಗಿ ಇಲ್ಲಿಗೆ ಬರುತ್ತಾರೆ. (ತಬರ್ರುಕಾತ್ ಸಹಾಬ ಕಾ ತಸ್ವೀರಿ ಆಲ್ಬಮ್ ಅರ್ಸಲಾನ್ ಬಿನ್ ಅಖ್ತರ್ 35 ಮತ್ತು 50, ಮಕ್ತಬ ಅರ್ಸಲಾನ್ ಕರಾಚಿ 2011)

ಇಲ್ಲಿಗೆ ಬದರೀ ಸಹಾಬಿಯರ ಪ್ರಸ್ತಾಪ ಮುಗಿಯಿತು. ಆದರೆ ನಾಲ್ವರು ಖ಼ಲೀಫರ ಬಗ್ಗೆಗಿನ ಪ್ರಸ್ತಾಪ ವಿವರಿಸಲಿರುವೆನು. ಇನ್ಶಾ ಅಲ್ಲಾಹ್. ಮೊದಲು ಸಂಕ್ಷಿಪ್ತವಾಗಿ ವಿವರಿಸಿದ್ದೆ. ಇನ್ನು ವಿಶದವಾಗಿ ವಿವರಿಸಲಿರುವೆನು. ಅದೇ ರೀತಿಯಲ್ಲಿ ಆರಂಭದಲ್ಲಿ ಕೆಲವು ಸಹಾಬರ ಬಗ್ಗೆ ಸಂಕ್ಷೇಪವಾಗಿ ಪ್ರಸ್ತಾಪಿಸಲಾಗಿತ್ತು. ಅವರ ಬಗ್ಗೆ ಇನ್ನು ಹೆಚ್ಚಿನ ವಿಷಯಗಳು ಲಭಿಸಿದರೆ ಅವುಗಳನ್ನು ಸಹ ವಿವರಿಸುವೆನು. ಅವೆಲ್ಲವನ್ನು ಬರೆಯಲ್ಪಡುವಾಗ, ಅವು ಆ ಭಾಗಗಳಲ್ಲಿ ಒಂದೇ ಕಡೆ ಸಂಗ್ರಹಿಸಿ ಬರೆಯಲಾಗುವುದು. ಬಹುಶಃ ಕೆಲವೇ ಕೆಲವು ಪ್ರಸ್ತಾಪಗಳು ಬಾಕಿಯುಳಿದಿರಬಹುದು.

ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಅವರ ಜನಾಝ ನಮಾಝ಼್ ಸಹ ಜುಮಾ ನಮಾಝ಼್ ನಂತರ ನಿರ್ವಹಿಸುವೆನು. ಮೊದಲನೆಯದಾಗಿ, ಭಾರತದಲ್ಲಿ ಜಮಾಅತಿನ ಮುಅಲ್ಲಿಮ್‌ರಾಗಿದ್ದ ಸನ್ಮಾನ್ಯ ಅಬ್ದುಲ್ ಹಯ್ಯ್ ಮಂಡಲ್ ಸಾಹಿಬ್‌ರದ್ದಾಗಿದೆ. ಸೆಪ್ಟೆಂಬರ್ 25ಕ್ಕೆ ಹೃದಯಾಘಾತದ ಕಾರಣದಿಂದ 53ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು 1999ರಲ್ಲಿ ಸ್ವತಃ ಶೋಧನೆ ನಡೆಸಿ ಜಮಾಅತಿನಲ್ಲಿ ಸೇರಿದ್ದರು. 2003ರಲ್ಲಿ ಜಾಮಿಅತುಲ್ ಮುಬಶ್ಶಿರೀನಿನಿಂದ ತೇರ್ಗಡೆಯಾದ ನಂತರ ಮರಣದ ವರೆಗೆ ಪರಿಶ್ರಮ, ನಿಷ್ಠೆ ಮತ್ತು ಮಗ್ನತೆಯಿಂದ ಜಮಾಅತಿನ ಸೇವೆ ಮಾಡುತ್ತಿದ್ದರು. ಈ ರೀತಿಯಲ್ಲಿ ಅವರ ಸೇವೆಯ ಕಾಲಾವಧಿ 17ವರ್ಷಗಳು ಆಗುತ್ತವೆ.

ದಿವಂಗತರು ಅತ್ಯಂತ ನಿಷ್ಠಾವಂತ, ಧರ್ಮನಿಷ್ಠೆ ಹೊಂದಿದ್ದ, ವಿಧೇಯರಾದ, ನಮಾಝ್ ಅನುಷ್ಠಾನವನ್ನು ಸರಿಯಾಗಿ ಪಾಲಿಸುತ್ತಿದ್ದ ಮತ್ತು ಜಮಾಅತಿನೊಂದಿಗೆ ಪ್ರೀತಿಯಿದ್ದ ಮುಅಲ್ಲಿಮ್ ಆಗಿದ್ದರು. ಪತ್ನಿಯನ್ನಲ್ಲದೆ, ಇಬ್ಬರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಅಲ್ಲಾಹನು ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪತ್ನಿಗೂ ಮಕ್ಕಳಿಗೂ ಮನಸ್ಸಮಾಧಾನ ನೀಡಲಿ.

ಮುಂದಿನ ಜನಾಝ ಬಂಗಾಳದ, ಮುರ್ಶಿದಾಬಾದ್ ಜಿಲ್ಲೆಯ ಮುಅಲ್ಲಿಮ್‌ರಾಗಿದ್ದ ಸನ್ಮಾನ್ಯ ಸಿರಾಜುಲ್ ಇಸ್ಲಾಂ ಸಾಹಿಬರದ್ದಾಗಿದೆ. ಅಕ್ಟೋಬರ್ 14ರಂದು 60ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಮುಅಲ್ಲಿಮ್ ಸಾಹಿಬರು 2002ರಲ್ಲಿ ಜಾಮಿಅತುಲ್ ಮುಬಶ್ಶಿರೀನ್ ಖಾದಿಯಾನಿನಿಂದ 6 ತಿಂಗಳ ಮುಅಲ್ಲಿಮ್ ಟ್ರೇನಿಂಗ್ ಪಡೆದರು ಮತ್ತು 2020ರ ವರೆಗೆ ತಾತ್ಕಾಲಿಕ ಮುಅಲ್ಲಿಮ್ ಎಂಬ ರೀತಿಯಲ್ಲಿ ಸೇವೆ ಮಾಡುತ್ತಿದ್ದರು. ಈ ರೀತಿಯಲ್ಲಿ ಅವರು ಸೇವೆಯ ಕಾಲಾವಧಿ 18 ವರ್ಷಗಳಾಗುತ್ತವೆ. ಸನ್ಮಾನ್ಯರು ಅತ್ಯಂತ ನಿಷ್ಠಾವಂತ, ಧರ್ಮಿಷ್ಠರಾದ, ಅನುಸರಣೆಯುಳ್ಳ, ನಮಾಝ್ ಮತ್ತು ಉಪವಾಸ ಸರಿಯಾಗಿ ಪಾಲಿಸುತ್ತಿದ್ದ ಹಾಗು ಜಮಾಅತಿನ ಮೇಲೆ ಪ್ರೀತಿಯಿದ್ದ ಪರಿಶ್ರಮಿಯಾದ ಮುಅಲ್ಲಿಮ್‌ರಾಗಿದ್ದರು. ದಿವಂಗತರು ತನ್ನ ಪತ್ನಿಯನ್ನಲ್ಲದೆ, ಮೂರು ಪುತ್ರಿಯರನ್ನು ಅಗಲಿರುವರು. ಹಿರಿಯ ಪುತ್ರಿಯರ ವಿವಾಹಗಳು ಆಗಿವೆ. ಮೂರನೇ ಮಗಳು ಕಲಿಯುತ್ತಿದ್ದಾಳೆ. ಅಲ್ಲಾಹನು ಅವರೊಡನೆ ಮಗ್‌ಫರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಮತ್ತು ಅವರ ಸಂಬಂಧಿಕರಿಗೆ ಸಹನೆ ನೀಡಲಿ. ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಮೂರನೇ ಜನಾಝ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಗಳಾದ ಹಝ್ರತ್ ನವಾಬ್ ಅಮತುಲ್ ಹಫೀಝ್ ಬೇಗಂ ಸಾಹಿಬರ ಮತ್ತು ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬರ ಮಗನಾದ ಹಝ್ರತ್ ನವಾಬ್ ಅಬ್ದುಲ್ಲಾಹ್ ಖಾನ್ ಸಾಹಿಬರ ಮಗನಾದ ಸನ್ಮಾನ್ಯ ಶಾಹಿದ್ ಅಹ್ಮದ್ ಖಾನ್ ಪಾಶಾ ಸಾಹಿಬರದ್ದಾಗಿದೆ. ಅಕ್ಟೋಬರ್ 26ರಂದು 85ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಆಸ್ಪತ್ರೆಯಲ್ಲಿದ್ದರು. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿಯಾಗಿದ್ದರು. ಸನ್ಮಾನ್ಯ ಶಾಹಿದ್ ಅಹ್ಮದ್ ಸಾಹಿಬರು ಎರಡು ವಿವಾಹಗಳನ್ನು ಮಾಡಿದ್ದರು. ಮೊದಲ ವಿವಾಹ 1962ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸರ ಮಗಳಾದ ಅಮತುಶ್ಶುಕೂರ್ ಸಾಹಿಬರೊಂದಿಗೆ ಆಗಿತ್ತು. ಹಝ್ರತ್ ಮುಸ್ಲಿಹ್ ಮೌಊದ್(ರ) ರೋಗಗ್ರಸ್ತರಾಗಿದ್ದ ಕಾರಣದಿಂದ ಅವರ ನಕಾಹನ್ನು ಮೌಲಾನ ಜಲಾಲುದ್ದೀನ್ ಶಮ್ಸ್ ಸಾಹಿಬ್‌ರು ನಿರ್ವಹಿಸಿದ್ದರು. ಮೊದಲ ವಿವಾಹದಿಂದ ಅವರಿಗೆ ಐವರು ಮಕ್ಕಳಿದ್ದರು. ಇಬ್ಬರು ಪುತ್ರರು ಮತ್ತು ಮೂವರು ಪುತ್ರಿಯರು. ಎರಡನೇ ವಿವಾಹ 1977ರಲ್ಲಿದಿವಂಗತ ಸಈದ್ ಸಾಹಿಬರ ಮಗಳಾದ ಸಮೀನ ಸಈದ್ ಸಾಹಿಬರೊಂದಿಗೆ ನಡೆದಿತ್ತು. ಅವರ ಮಗನು ಈಗ ಅಮೇರಿಕದಲ್ಲಿ ನೆಲೆಸಿದ್ದಾರೆ. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್‌ರೊಂದಿಗೆ(ರಹ್) ಅವರಿಗೆ ಯಾವುದೇ ಜಮಾಅತಿನ ಸೇವೆಗಳು ಇದ್ದಿರಲಿಲ್ಲ. ಆದರೆ ಹಝ್ರತ್ ಖಲೀಫತುಲ್ ಮಸೀಹ್‌ರೊಂದಿಗೆ ಕೆಲವು ವಿದೇಶೀ ಪರ್ಯಟನೆಗಳಿಗೆ ಹೋಗುವ ಸೌಭಾಗ್ಯಗಳನ್ನು ಪಡೆದಿದ್ದರು ಮತ್ತು ಅಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದಿದ್ದರು. ಅವರ ಪತ್ನಿ ಬರೆಯುತ್ತಾಳೆ: ಅವರ ಒಂದು ಗುಣ ದರಿದ್ರರ ಆರೈಕೆಯಾಗಿತ್ತು. ಹಲವಾರು ಬಡವರಿಗೆ ಖರ್ಚು ನೀಡುತ್ತಿದ್ದರು. ಒಂದು ಮನೆಯನ್ನೂ ನಿರ್ಮಾಣ ಮಾಡಿಕೊಟ್ಟಿದ್ದರು. ನಿಯತವಾಗಿ ದರಿದ್ರರನ್ನು ಸಹಾಯ ಮಾಡುತ್ತಿದ್ದರು. ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಮತ್ತು ಅವರ ಮಕ್ಕಳನ್ನೂ ಜಮಾಅತ್ ಮತ್ತು ಖಿಲಾಫತಿನೊಂದಿಗೆ ಹೊಂದಿಸಿ ಇರಿಸಲಿ.

ಮುಂದಿನ ಜನಾಝ ಯು.ಕೆ. ಯ ಶೀಫಲ್ಡಿನ ಸನ್ಮಾನ್ಯ ಸಯ್ಯದ್ ಮಸ್‌ಊದ್ ಅಹ್ಮದ್ ಶಾಹ್ ಸಾಹಿಬ್‌ರದ್ದಾಗಿದೆ. ಸೆಪ್ಟೆಂಬರ್ 8ರಂದು ಹೃದಯಾಘಾತದ ಕಾರಣದಿಂದ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಂದೆಯಾದ ಹಝ್ರತ್ ಸಯ್ಯದ್ ನಾಝಿಂ ಹುಸೈನ್ ಸಾಹಿಬ್‌ರ(ರ) ಮುಖಾಂತರ ಬಂದಿತ್ತು. ಅವರು 1902ರಲ್ಲಿ 20ನೇ ವಯಸ್ಸಿನಲ್ಲಿ ಖಾದಿಯಾನಿಗೆ ಹೋಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೈಯಲ್ಲಿ ಬೈಅತ್ ಮಾಡಿದ್ದರು. ಸಯ್ಯದ್ ಮಸ್‌ಊದ್ ಅಹ್ಮದ್ ಸಾಹಿಬರು 1962ರಲ್ಲಿ ಯು.ಕೆ.ಗೆ ಬಂದ ನಂತರ ಸ್ಥಿರವಾಗಿ ಶೀಫಿಲ್ಡ್‌ನಲ್ಲಿ ನೆಲೆಸಿದ್ದರು. ಶೀಫೀಲ್ಡಿನಲ್ಲಿ ಜಮಾಅತ್ ಸ್ಥಾಪಿತವಾದಾಗ, ಅವರ ನಿವಾಸವನ್ನು ನಮಾಝ್ ಸೆಂಟರ್ ಮಾಡಲಾಗಿತ್ತು. 1970ರ ವರೆಗೆ ಅವರೇ ಜಮಾಅತಿನ ಅಧ್ಯಕ್ಷರಾಗಿದ್ದರು. ಅನಂತರ 1997ರಿಂದ ನಿಧನದ ತನಕ ಅತಿಥಿ ಸತ್ಕಾರದ ಸೆಕ್ರಟರಿ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ದಿವಂಗತರು ಹಸನ್ಮುಖಿ, ಅತಿಥಿ ಸತ್ಕಾರ ಪ್ರಿಯ, ಪರಿಶುದ್ಧ ಮನಸ್ಸಿನ, ಸೇವೆಯ ಆವೇಶವನ್ನು ಹೊಂದಿದ್ದ ದರಿದ್ರರೊಡನೆ ಸಹಾನುಭೂತಿ ಹೊಂದಿದ್ದ, ನಿಷ್ಠಾವಂತ, ಪ್ರಾಮಾಣಿಕ ಮತ್ತು ಒಳ್ಳೆಯ ವ್ಯಕ್ತಿಯಾಗಿದ್ದರು. ಖಿಲಾಫತಿನೊಂದಿಗೆ ಅಪರಿಮಿತವಾದ ವಿಶ್ವಾಸಾದರದ ಸಂಬಂಧವನ್ನು ಹೊಂದಿದ್ದರು. ಅವರ ಮಗಳಾದ ಡಾಕ್ಟರ್ ಆಯಿಶ ಸಾಹಿಬ ಹೇಳುತ್ತಾರೆ: ನಮ್ಮನ್ನು ಜಮಾಅತ್ ಮತ್ತು ವಿಶೇಷವಾಗಿ ಖಿಲಾಫತಿನೊಂದಿಗೆ ಹೊಂದಿಸಿಕೊಂಡಿಡಲು ಪ್ರಯತ್ನಿಸುತ್ತಿದ್ದರು. ಪ್ರತಿ ಆರು ತಿಂಗಳಿಗೊಮ್ಮೆ ಖಲೀಫತುಲ್ ಮಸೀಹರನ್ನು ಭೇಟಿಯಾಗಲು ಉಪದೇಶಿಸುತ್ತಿದ್ದರು. ಅಲ್ಲಾಹನು ಅವರ ಮಗಳಿಗೆ ಮತ್ತು ಪತ್ನಿಗೆ ಸಹನೆ ಮತ್ತು ಧೈರ್ಯವನ್ನು ದಯಪಾಲಿಸಲಿ. ಶಾಹ್ ಸಾಹಿಬರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಮತ್ತು ಅವರ ಮಗಳಿಗೂ ಪತ್ನಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

*********************

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

**Love for All, Hatred for None**
**ಪ್ರೀತಿ ಯಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ದಿನ ಮತ್ತೆ ಬರುವುದು. ಅಂತ್ಯ ತೀರ್ಮಾನದ ದಿನದ ಮುಂಚೆ ಲಭಿಸುವ ಜೀವನಕ್ಕೆ ಅವಶ್ಯವಾಗಿರುವುದೇನೆಂದರೆ ಅದರಲ್ಲಿ ಸತ್ಕರ್ಮಗಳ ಅಥವಾ ದುಷ್ಕರ್ಮಗಳ ಫಲ ದೊರೆಯುವುದಾದರೆ ಇಲ್ಲದಿದ್ದರೆ ಈ ಜಿವನಕ್ಕೆ ಅರ್ಥವೇ ಇರುವುದಿಲ್ಲ. ಸತ್ಕರ್ಮ ದುಷ್ಕರ್ಮಗಳಿಗೆ ಫಲ ಸಿಗುತ್ತದೆ ಎಂದಾದರೆ ತಿಳಿದುಬರುವುದೇನೆಂದರೆ ಅಂತ್ಯ ತೀರ್ಮಾನದ ದಿನ ಮುಂಚೆಯೂ ಒಂದು ಅಪೂರ್ಣ ಪುಣ್ಯಕಾಲ ಮತ್ತು ಅಪೂರ್ಣ ಶಿಕ್ಷೆಯ ಕಾಲವಿದೆ ಎಂದು. ಅದನ್ನೇ ಕರ್ಮಫಲ ಮತ್ತು ಗೋರಿ ಎನ್ನುವುದು. ಅದು ನಬಿ ಕರೀಂ(ಸ) ರವರ ಹದೀಸುಗಳಿಂದಲೂ ಸಾಬೀತಾಗಿದೆ. ಪವಿತ್ರ ಖುರ್‌ಆನ್‌ನ ಇನ್ನೊಂದು ವಚನ ಸ್ಪಷ್ಟವಾಗಿ ಈ ಶಿಕ್ಷೆಯ ಕುರಿತು ಸ್ಪಷ್ಟನೆ ನೀಡುತ್ತದೆ. **ಅನ್ನಾರು ಯುಅ್‌ರಝೂನ ಅಲೈಹ ಗುದುವ್ವವ ಅಶಿಯ್ಯ. ವಯೌಮ ತಖೂಮುಸ್ಸಾಅತು. ಅದ್‌ಖಿಲೂ ಆಲ ಫಿರ್‌ಔನ ಅಶದ್ದಲ್ ಅಝಾಬ್** (ಮೂಮಿನ್–ರುಕು: 5)

ನರಕ ಹಗಲು ರಾತ್ರಿ ಅವರನ್ನು ಅದರ ಮುಂದೆ ಒಡ್ಡಲಾಗುವುದು. ಆ ದಿನದಂದು ನಿಗದಿತ ಸಮಯ ಬಂದಾಗ, ಫಿರ್‌ಔನ್‌ನ ಜನರನ್ನು ಅತ್ಯಂತ ಕಠೋರವಾದ ಶಿಕ್ಷೆಗೆ ಗುರಿಪಡಿಸಿರಿ ಎಂದು ದೇವದೂತರೊಡನೆ ಹೇಳಲಾಗುವುದು. ಈ ವಚನದಿಂದ ಸ್ಪಷ್ಟವಾಗಿರುವುದೇನೆಂದರೆ. ನರಕಕ್ಕೆ ಹಾಕುವ ಮುಂಚೆ ಫಿರ್‌ಔನನ ಜನರನ್ನು ಶಿಕ್ಷೆ ಗುರಿಪಡಿಸಲಾಗುವುದು. ಪವಿತ್ರ ಖುರ್‌ಆನ್‌ನ ಅವತರಣಿಕೆಯ ಸಮಯವು ಗುರಿಯಾಗುವುದು. **(ತಫ್ಸೀರ್ ಕಬೀರ್ ಸಂಪುಟ 1, ಪುಟ 265–266, ಮುದ್ರಣ ಖಾದಿಯಾನ್ 2010)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಅದರಲ್ಲಿ ಯಾವುದೇ ಕೊರತೆಗಳನ್ನು ಮಾಡದಿರಲು ಉಪದೇಶಿಸುತ್ತಿದ್ದರು ಮತ್ತು ಅದರ ಮೇಲ್ನೋಟವಹಿಸುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ನಾವು 6 ಸಹೋದರ ಸಹೋದರರಾಗಿರುವೆವು. ಕುಟುಂಬದ ಹಲವಾರು ಮಕ್ಕಳು ಸಹ ನಮ್ಮ ಮನೆಯಲ್ಲಿ ಶಿಕ್ಷಣದ ಉದ್ದೇಶದಿಂದ ತಂಗಿದ್ದರು. ನಮ್ಮ ಇಬ್ಬರು ಅಜ್ಜಿಯಂದಿರು ಮತ್ತು ತಂದೆಯ ಅಜ್ಜಿ ದೀರ್ಘಕಾಲದ ವರೆಗೆ ನಮ್ಮ ಮನೆಯಲ್ಲೇ ಇರುತ್ತಿದ್ದರು. ಈ ಎಲ್ಲ ಅವಸ್ಥೆಯಲ್ಲೂ ಈ ಮೂವರು ಹಿರಿಯರ ಸೇವೆಯನ್ನು ಹಲವಾರು ವರ್ಷಗಳಿಂದ ಅವರು ಉತ್ತಮ ರೀತಿಯಲ್ಲಿ ನಿರ್ವಹಿಸುತ್ತಿದ್ದರು. ಜಲ್ಸ ಸಾಲಾನದ ಸಮಯದಲ್ಲಿ ಮನೆಯಲ್ಲಿ ಎಂಬತ್ತು ತೊಂಬತ್ತು ಅತಿಥಿಗಳು ಇರುತ್ತಿದ್ದರು. ಅವರ ತಂಗುವಿಕೆ ಮತ್ತು ಊಟದ ವ್ಯವಸ್ಥೆಗಾಗಿ, ಮನೆಯಲ್ಲಿ ಟೆಂಟ್ ಹಾಕುತ್ತಿದ್ದರು. ಹಾಸಿಗೆಗಳಿಗಾಗಿ ಗ್ರಾಮದಿಂದ ವ್ಯವಸ್ಥೆ ಮಾಡುತ್ತಿದ್ದರು. ಈ ಎಲ್ಲ ವ್ಯವಸ್ಥೆಗಳನ್ನು ತಂದೆ–ತಾಯಂದಿರರು ಇಬ್ಬರೂ ಸೇರಿಕೊಂಡು ಬಹಳ ಸಂತೋಷದಿಂದ, ಪ್ರೀತಿಭಾವದಿಂದ ಮತ್ತು ತೆರೆದ ಹೃದಯದಿಂದ ಮಾಡುತ್ತಿದ್ದರು. ಆಪ್ತರೆಲ್ಲರೂ ಅವರ ಪ್ರೀತಿ ಮತ್ತು ಅತಿಥಿ ಸತ್ಕಾರದ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಅವರ ಒಬ್ಬ ಸೋದರಿಯ ಮಗ ಬರೆಯುತ್ತಾರೆ: ನಾನು ಅವರ ಮನೆಯಲ್ಲಿ ಇದ್ದುಕೊಂಡು ಶಿಕ್ಷಣ ಪಡೆಯುತ್ತಿದ್ದೆ. ಎಂದಿಗೂ ಅವರು ಬೆಳಗ್ಗಿನ ರೊಟ್ಟಿ ಸಂಜೆ ಅಥವಾ ಸಂಜೆಯ ಆಹಾರ ಬೆಳಿಗ್ಗೆ ನೀಡುತ್ತಿರಲಿಲ್ಲ. ಬದಲಿಗೆ ಊಟದ ಸಮಯದಲ್ಲಿ ತಾಜಾ ಚಪಾತಿ ಮತ್ತು ಮೊಸರು ಇತ್ಯಾದಿಗಳನ್ನು ಯಾವಾಗಲೂ ನೀಡುತ್ತಿದ್ದರು. ಹೀಗೆ ಸ್ವಂತ ಮಕ್ಕಳು ಅವರಿಗೆ ತುಂಬ ಇದ್ದರೂ, ಮನೆಯಲ್ಲಿ ಶಿಕ್ಷಣ ಪಡೆಯುತ್ತಿದ್ದ ಇತರ ಮಕ್ಕಳ ಬಗ್ಗೆ ಸಹ ಇಷ್ಟೊಂದು ಕಾಳಜಿ ವಹಿಸುತ್ತಿದ್ದರು. ಖಲೀಫರೊಂದಿಗೆ ಪ್ರೀತಿ ಮತ್ತು ಅನುಸರಣೆಯ ಸಂಬಂಧದಲ್ಲಿ ಎಲ್ಲರಿಗೂ ಮಾದರಿಯಾಗಿದ್ದರು. ಖಲೀಫರ ಮೇಲಿನ ಪ್ರೀತಿ ಮತ್ತು ಪ್ರೇಮದ ಸಂಬಂಧವನ್ನು ನಮ್ಮ ಮನಸ್ಸಲ್ಲೂ ತುಂಬಿಸಿದ್ದರು. ಅವರ ಸೊಸೆಯಾದ ನಬೀಲ ನಈಮ್ ಸಾಹಿಬ ಹೇಳುತ್ತಾರೆ: ದಿವಂಗತರು ಹಲವು ಗುಣವೈಶಿಷ್ಟ್ಯಗಳನ್ನು ಹೊಂದಿದ್ದರು. ಕಷ್ಟದ ಸಮಯದಲ್ಲೂ ಎಂದಿಗೂ ಯಾವುದೇ ರೀತಿಯಲ್ಲಿ ದೂರುತ್ತಿರಲಿಲ್ಲ. ಅಲ್ಲಾಹನ ಇಚ್ಛೆಯಲ್ಲಿ ಸಂತುಷ್ಟರಾಗಿರುತ್ತಿದ್ದರು. ಬಡವರಿಗೆ ಸಹಾಯ ಮಾಡುತ್ತಿದ್ದರು. ಯಾರನ್ನು ದುಃಖ ಮತ್ತು ಸಂಕಷ್ಟದಲ್ಲಿ ಇರುವುದಾಗಿ ಕಾಣುವುದನ್ನು ಸಹಿಸುತ್ತಿರಲಿಲ್ಲ. ಯಾವಾಗಲೂ ಅವರ ನೆರವಿಗಾಗಿ ತಯಾರಿರುತ್ತಿದ್ದರು. ದಿವಂಗತರು ಖಿಲಾಫತಿನೊಂದಿಗೆ ಅನುಸರಣೆ ಮತ್ತು ನಿಷ್ಠೆಯಲ್ಲಿ ಮುಂದಿದ್ದರು. ಅಲ್ಲಾಹನು ಅವರ ಮಕ್ಕಳನ್ನು ಮತ್ತು ಸಂತಾನ ಪರಂಪರೆಯನ್ನು ಈ ಗುಣಗಳನ್ನು ಹೊಂದಿರುವವರನ್ನಾಗಿ ಮಾಡಲಿ. ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ.

ಮುಂದಿನ ಜನಾಝ ಡಾಕ್ಟರ್ ಲತೀಫ್ ಖುರೈಶಿಯ ತಾಯಿಯಾದ ಮನ್ಸೂರ ಬುಶ್ರ ಸಾಹಿಬರದ್ದಾಗಿದೆ. ನವೆಂಬರ್ 6ರಂದು 97ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯರ ಸಂತಾನ ಪರಂಪರೆಗೆ ಸೇರಿದ್ದವರಾಗಿದ್ದರು. ಹಝ್ರತ್ ಮುನ್ಶಿ ಫಯಾಝ್ ಅಲಿ ಕಪೂರ್ತಲವಿ(ರ) ಮತ್ತು ಶೇಖ್ ಅಬ್ದುರ್ರಶೀದ್ ಸಾಹಿಬರ ಮೊಮ್ಮಗಳಾಗಿದ್ದರು. ಇಬ್ಬರೂ ಸಹಾಬಿಯಾಗಿದ್ದರು. ಕಿರಿವಯಸ್ಸಿನಲ್ಲಿ ಹಝ್ರತ್ ಅಮ್ಮಾ ಜಾನ್‌ರೊಂದಿಗೆ, ಎಂದರೆ ಹಝ್ರತ್ ಮಸೀಹ್ ಮೌಊದ್‌ರ(ಅ) ಪತ್ನಿಯೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದರು. ದಿವಂಗತರಿಗೆ ಕೊನೆಯ ವಯಸ್ಸಿನಲ್ಲಿ ಜ್ಞಾಪಕ ಶಕ್ತಿ ಕಡಿಮೆ ಇದ್ದರೂ ನಮಾಝ್ ನಿರ್ವಹಿಸಲು ಎಂದೂ ಮರೆಯುತ್ತಿರಲಿಲ್ಲ. ಜುಮಾ ಖುತ್‌ಬ ಸಹ ಎಂ.ಟಿ.ಎ.ದಲ್ಲಿ ನಿಯತವಾಗಿ ಕೇಳುತ್ತಿದ್ದರು. ಸಜ್ಜನ ಮತ್ತು ನಿಷ್ಠಾವಂತ ಹಿರಿಯ ಸ್ತ್ರೀಯಾಗಿದ್ದರು. ದಿವಂಗತರು ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದರು. ಕಳೆದ ದಿನಗಳಲ್ಲಿ ಇವರ ಮಗನಾದ ಡಾಕ್ಟರ್ ಖುರೈಶಿ ಸಾಹಿಬ ಮತ್ತು ಅವರ ಪತ್ನಿಯಾದ ಶೌಕತ್ ಗೋಹರ್ ಸಾಹಿಬರು ನಿಧನಹೊಂದಿದ್ದರು. ಅವರು ಜೀವಂತವಿರುವ ತನಕ ಇವರ ಉತ್ತಮ ರೀತಿಯಲ್ಲಿ ಸೇವೆ ಮಾಡುತ್ತಿದ್ದರು. ಹೇಗಿದ್ದರೂ ಇವರ ಜೀವಿತಕಾಲದಲ್ಲೇ ಅವರಿಬ್ಬರೂ ನಿಧನರಾಗಿದ್ದರು.

ಇವರ ಮೊಮ್ಮಗಳಾದ ಅಸ್ಮತ್ ಮಿರ್ಝಾ ಬರೆಯುತ್ತಾರೆ: ನನ್ನ ಅಜ್ಜಿ ನೈಜವಾದ ಸತ್ಯವಿಶ್ವಾಸಿಯೂ ಅಹ್ಮದಿಯ್ಯತ್ ಮತ್ತು ಖಿಲಾಫತಿನ ಪ್ರೇಮಿಯಾಗಿದ್ದರು. ನಾನು ಅವರಿಗಿಂತ ಹೆಚ್ಚು ಆರಾಧನೆ ಮಾಡುವ ಮತ್ತು ಪವಿತ್ರ ಖುರ್‌ಆನಿನೊಂದಿಗೆ ವಿಶ್ವಾಸಾದರವನ್ನು ಹಾಗು ಪ್ರೇಮವನ್ನು ಹೊಂದಿರುವ ಯಾರನ್ನೂ ಕಂಡಿಲ್ಲ. ಕಡಿಮೆ ಮಾತುಗಾರಿಕೆಯ ಮತ್ತು ಸರಳ ಸ್ವಭಾವದವರಾಗಿದ್ದರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಹಾಗೂ ಅವರ ಪದವಿಗಳನ್ನು ಉನ್ನತಗೊಳಿಸಲಿ. ಜುಮಾ ನಮಾಝಿನ ನಂತರ ಇವರೆಲ್ಲರ ಜನಾಝ ನಮಾಝನ್ನು ನಿರ್ವಹಿಸುವೆನು. **ಇನ್ಶಾ ಅಲ್ಲಾಹ್**.

**************

# ಖುತ್‌ಬ ಜುಮುಅ

**ಪೈಗಂಬರರೆ! ನಾನು ವಯಸ್ಸಿನಲ್ಲಿ ಚಿಕ್ಕನಾದರೂ ಸಹ ನಾನು ನಿಮ್ಮ ಸಹಾಯಕನಾಗಿರುವೆನು (ಹಝ್ರ್‌ರತ್ ಅಲಿ(ರ))**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಅಳಿಯ ಹಾಗೂ ಅಬೂ ತುರಾಬ್ ಹಝ್ರ್‌ರತ್ ಅಲಿ(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಒಂದು ವರದಿಯ ಪ್ರಕಾರ ಹಝ್ರ್‌ರತ್ ಅಲಿ(ರ)ರವರು ಹಝ್ರ್‌ರತ್ ಖದೀಜ(ರ)ರವರು ಇಸ್ಲಾಮ್ ಸ್ವೀಕರಿಸಿದ ಮಾರನೇಯ ದಿವಸ ಪ್ರವಾದಿ(ಸ) ಹಾಗೂ ಹಝ್ರ್‌ರತ್ ಖದೀಜ(ರ)ರವರನ್ನು ನಮಾಝ್ ನಿರ್ವಹಿಸುತ್ತಿದ್ದನ್ನು ಕಂಡರು. ಹಝ್ರ್‌ರತ್ ಅಲಿ(ರ)ರವರು ಆ ರಾತ್ರಿ ಕಳೆದ ನಂತರ ಮಾರನೇಯ ದಿವಸ ಇಸ್ಲಾಮ್ ಸ್ವೀಕರಿಸಿದರು, ಆಗ ಅವರ ವಯಸ್ಸು 13ವರ್ಷ ಆಗಿತ್ತು**

**ನಾಲ್ಕು ದಿವಂಗತರಾದ ಸನ್ಮಾನ್ಯ ತಾರಿಖ್ ಮಹ್ಮೂದ್ ಸಾಹಿಬರ ಮಗನಾದ ಡಾಕ್ಟರ್ ತಾಹಿರ್ ಮಹ್ಮೂದ್ ಸಾಹಿಬ್, ಸಿರಾಲಿಯೋನನ ನ್ಯಾಶನಲ್ ಸೆಕ್ರಟರಿಯಾದ ಸನ್ಮಾನ್ಯ ಜಮಾಲುದ್ದೀನ್ ಮಹ್ಮೂದ್ ಸಾಹಿಬ್ ಮತ್ತು ರಬ್ವದ ಕಾನೂನು ಸಲಹೆಗಾರರೂ ನಾಝಿರ್ ನಾಝಿಂ ಜಾಇದಾದ್ ಆಗಿದ್ದ ದಿವಂಗತ ಚೌಧರಿ ಸಲಾಹುದ್ದೀನ್ ಸಾಹಿಬ್‌ರ ಪತ್ನಿಯಾದ ಅಮತುಸ್ಸಲಾಮ್ ಸಾಹಿಬ ಹಾಗೂ ಲತೀಫ್ ಖುರೈಶಿಯ ತಾಯಿಯಾದ ಮನ್ಸೂರ ಬುಶ್ರ ಸಾಹಿಬ ಅವರೆಲ್ಲರ ಜನಾಝ ನಮಾಝ್ ನಿರ್ವಹಣೆ ಹಾಗೂ ಅವರ ಸದ್ಗುಣಗಳ ಪ್ರಸ್ತಾವನೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **20–11–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಇಂದು ನಾನು ಹಝ್ರ್‌ರತ್ ಅಲಿ ಬಿನ್ ಅಬೂ ತಾಲಿಬ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪದೊಂದಿಗೆ ನಾಲ್ವರು ಖಲೀಫರ ಪ್ರಸ್ತಾಪವನ್ನು ಶುರುಮಾಡುವೆನು. ಹಝ್ರ್‌ರತ್ ಅಲಿ ಬಿನ್ ಅಬೂ ತಾಲಿಬ್ ಬಿನ್ ಅಬ್ದುಲ್‌ಮುತಲಿಬ್ ಬಿನ್ ಹಾಶಿಂ. ಅವರ ತಂದೆಯ ಹೆಸರು ಅಬುಲ್‌ಮನಾಫ್ ಮತ್ತು ಉಪನಾಮ ಅಬೂ ತಾಲಿಬ್ ಎಂದಾಗಿತ್ತು. ಹಝ್ರ್‌ರತ್ ಅಲಿಯರ(ರ) ತಾಯಿಯ ಹೆಸರು ಫಾತಿಮ ಬಿನ್ತ್ ಅಸದ್ ಬಿನ್ ಹಾಶಿಂ ಎಂದಾಗಿತ್ತು. ಹಝ್ರ್‌ರತ್ ಅಲಿ(ರ) ಹಝ್ರ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರವಾದಿತ್ವ ವಾದಕ್ಕೆ ಹತ್ತು ವರ್ಷಗಳ ಮುಂಚಿತವಾಗಿ ಜನಸಿದ್ದರು. ಹಝ್ರ್‌ರತ್ ಅಲಿಯರ(ರ) ಮೈಕಟ್ಟಿನ ಬಗ್ಗೆ ಹೀಗೆ ವರದಿಯಾಗಿದೆ: ಅವರು ಮಧ್ಯಮ ಎತ್ತರವನ್ನು, ಕಪ್ಪು ಬಣ್ಣದ ಕಣ್ಣುಗಳನ್ನು, ದಪ್ಪ ದೇಹವನ್ನು ಮತ್ತು ವಿಶಾಲವಾದ ಭುಜಗಳನ್ನು ಹೊಂದಿದ್ದರು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ ಲಿಇಬ್ನೆ ಹಜರ್ ಅಸ್‌ಖಲಾನಿ, ಸಂಪುಟ–4, ಪುಟ–464, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1995) (ಅಸಸುಲ್‌ಗಾಬ ಫೀ ಮಾರಿಫತಿಸ್ಸಹಾಬ ಲಿಇಬ್ನೆ ಅಸೀರ್, ಸಂಪುಟ–4, ಪುಟ–87–88, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003) (ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್ಹಾಬ್, ಸಂಪುಟ–3, ಪುಟ–218, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹಝ್ರ್‌ರತ್ ಅಲಿಯ(ರ) ತಾಯಿ, ಅವರ ತಂದೆಯ ಹೆಸರಾದ ಅಸದ್ ಎಂಬುದನ್ನು ಮಗನಗೆ ಇಟ್ಟಿದ್ದರು. ಅವರ ಜನನದ ವೇಳೆ ಅಬೂ ತಾಲಿಬ್ ಮನೆಯಲ್ಲಿದ್ದಿರಲಿಲ್ಲ. ಅಬೂ ತಾಲಿಬ್ ಮರಳಿ ಬಂದಾಗ, ಅವರು ಮಗನಿಗೆ ಅಸದ್ ಎಂಬ ಹೆಸರಿನ ಬದಲಿಗೆ ಅಲಿ ಎಂದು ಹೆಸರಿಟ್ಟರು. ಹಝ್ರ್‌ರತ್ ಅಲಿಗೆ(ರ) ತಾಲಿಬ್, ಅಖೀಲ್, ಜಾಫರ್ ಎಂಬ ಹೆಸರಿನ ಮೂವರು ಸಹೋದರರಿದ್ದರು. ಉಮ್ಮೇ ಹಾನಿ ಮತ್ತು ಉಮ್ಮೇ ಜಮಾನ ಎಂಬ ಇಬ್ಬರು ಸಹೋದರಿಯರಿದ್ದರು. ಇವರಲ್ಲಿ ತಾಲಿಬ್ ಮತ್ತು ಜಮಾನರ ಹೊರತು ಇತರರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದರು. (ತಾರೀಖ್ ಅಲ್‌ಖಮೀಸ್, ಸಂಪುಟ–1,ಪುಟ–295–297, ಮತ್ತು ಸಂಪುಟ–2, ಪುಟ–421, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2009)

ಅಬುಲ್ ಹಸನ್, ಅಬೂ ಸಬ್‌ತೀನ್ ಮತ್ತು ಅಬೂ ತುರಾಬ್ ಎಂಬುದು ಹಝ್ರ್‌ರತ್ ಅಲಿಯರ ಉಪನಾಮಗಳಾಗಿದ್ದುವು. (ಅಸದುಲ್‌ಗಾಬ, ಸಂಪುಟ–4, ಪುಟ–88, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003) (ಸಹೀಹ್ ಬುಖಾರಿ, ಕಿತಾಬುಸ್ಸಲಾತ್ ಹದೀಸ್–441)

ಸಹೀಹ್ ಬುಖ್ಖಾರಿಯ ಒಂದು ವರದಿಯ ಪ್ರಕಾರ ಹಝ್ರ್‌ರತ್ ಸುಹೈಲ್ ಬಿನ್ ಸಅದ್ ವರದಿ ಮಾಡುತ್ತಾರೆ: ಹಝ್ರ್‌ರತ್ ಪೈಗಂಬರ್(ಸ) ಹಝ್ರ್‌ರತ್ ಫಾತಿಮರ(ರ) ಮನೆಗೆ ಹೋದಾಗ, ಹಝ್ರ್‌ರತ್ ಅಲಿ(ರ) ಮನೆಯಲ್ಲಿ ಇರಲಿಲ್ಲ. ಹಝ್ರ್‌ರತ್ ಪೈಗಂಬರ್(ಸ) ಕೇಳಿದರು: ನಿನ್ನ ಚಿಕ್ಕಪ್ಪರ ಮಗನು ಎಲ್ಲಿದ್ದಾರೆ? ಹಝ್ರ್‌ರತ್ ಫಾತಿಮ(ರ) ಹೇಳಿದರು: ನನ್ನ ಮತ್ತು ಅವರ ನಡುವೆ ವಿರಸ ಉಂಟಾಗಿತ್ತು. ಆದ್ದರಿಂದ ಅವರು ಸಿಟ್ಟುಗೊಂಡು ಹೊರಟುಹೋದರು. ಮನೆಯಲ್ಲಿ ಮಧ್ಯಾಹ್ನದ ಹಗುರವಾದ ನಿದ್ದೆ ಕೂಡ ಮಾಡಿಲ್ಲ. ಅವರು ಎಲ್ಲಿದ್ದಾರೆ ಎಂದು ನೋಡಿಕೊಂಡು ಬರಲು ಒಬ್ಬರನ್ನು ಹಝ್ರ್‌ರತ್ ಪೈಗಂಬರ್(ಸ) ಕಳುಹಿಸಿದರು. ಅವರು ಮಸೀದಿಯಲ್ಲಿ ಮಲಗಿರುವರು ಎಂದು ಆ ವ್ಯಕ್ತಿ ಮರಳಿ ಬಂದು ತಿಳಿಸಿದರು. ಹಝ್ರ್‌ರತ್ ಪೈಗಂಬರ್(ಸ) ಮಸೀದಿಗೆ ಹೋದರು. ಹಝ್ರ್‌ರತ್ ಅಲಿ(ರ) ಅಲ್ಲಿ ಮಲಗಿದ್ದರು. ಅವರ ದೇಹದಿಂದ ಅವರ ಹೊದಿಕೆ ಸರಿದಿತ್ತು ಮತ್ತು ಸ್ವಲ್ಪ ಮಣ್ಣು ಸೊಂಟಕ್ಕೆ ತಗುಲಿತ್ತು. ಹಝ್ರ್‌ರತ್ ಪೈಗಂಬರ್(ಸ) ಮಣ್ಣನ್ನು ಒರೆಸಿಕೊಂಡು ಹೇಳಿದರು: ಎದ್ದೇಳು ಹೇ ಅಬೂ ತುರಾಬ್, ಎದ್ದೇಳು ಅಬೂ ತುರಾಬ್. (ಸಹೀಹ್ ಬುಖಾರಿ, ಕಿತಾಬುಸ್ಸಲಾತ್, ಹದೀಸ್–441)

ಅಂದಿನಿಂದ ಅವರು ಅಬೂ ತುರಾಬ್ ಎಂಬ ಉಪನಾಮದಿಂದ ಕರೆಯಲ್ಪಟ್ಟರು. ಹಝ್ರ್‌ರತ್ ಅಲಿ(ರ) ಹಝ್ರ್‌ರತ್ ಪೈಗಂಬರರ(ಸ) ಸಂರಕ್ಷಣೆಯಲ್ಲಿ ಹೇಗೆ ಬಂದರು ಎಂಬುದರು ಬಗ್ಗೆ ತಾರೀಖೆ ತಬರಿಯಲ್ಲಿ ಮುಜಾಹಿದ್ ಬಿನ್ ಜಬರ್ ಅಬುಲ್ ಹಿಜಾಜ್ ವರದಿ ಮಾಡುತ್ತಾರೆ: ಖುರೈಶರ ಮೇಲೆ ಹಿರಿದಾದೊಂದು ವಿಪತ್ತು ಬಂದದ್ದು, ಹಝ್ರ್‌ರತ್ ಅಲಿಯ(ರ) ಮೇಲೆ ಅಲ್ಲಾಹನ ವರದಾನ ಮತ್ತು ಅನುಗ್ರಹಗಳಿಗೆ ಕಾರಣವಾಯಿತು. ಹಝ್ರ್‌ರತ್ ಅಬೂ ತಾಲಿಬ್‌ರದ್ದು ದೊಡ್ಡದಾದ ಒಂದು ಕುಟುಂಬವಾಗಿತ್ತು. ಆದ್ದರಿಂದ ಹಾಶಿಂ ಕುಟುಂಬದಲ್ಲಿ ಹೆಚ್ಚು ಸೌಖ್ಯದಿಂದ ಇದ್ದ ತನ್ನ ದೊಡ್ಡಪ್ಪರಾದ ಹಝ್ರ್‌ರತ್ ಅಬ್ಬಾಸ್‌ರೊಡನೆ ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: ನಿಮ್ಮ ಸಹೋದರ ಅಬೂ ತಾಲಿಬ್ ಹಿರಿದಾದ ಕುಟುಂಬವನ್ನು ಹೊಂದಿದ್ದಾರೆ. ಈ ಕ್ಷಾಮದಿಂದ ಜನರಿಗೆ ಉಂಟಾದ ಸ್ಥಿತಿಯನ್ನು ನೀವು ನೋಡುತ್ತಿದ್ದೀರಿ. ಆದ್ದರಿಂದ ನೀವು ನನ್ನೊಂದಿಗೆ ಬನ್ನಿರಿ. ನಾವು ಅವರ ಕುಟುಂಬದ ಭಾರವನ್ನು ಕಡಿಮೆಗೊಳಿಸೋಣ. ಅವರ ಮಕ್ಕಳಲ್ಲಿ ಒಬ್ಬರನ್ನು ನಾನು ಕೊಂಡು ಹೋಗುತ್ತೇನೆ ಮತ್ತು ಒಬ್ಬರನ್ನು ನೀವು ಕೊಂಡುಹೋಗಿರಿ. ಅಬೂ ತಾಲಿಬ್‌ರಿಗಾಗಿ ನಾವು ಅವರಿಬ್ಬರ ಸಂರಕ್ಷಕರಾಗೋಣ. ಹಝ್ರ್‌ರತ್ ಅಬ್ಬಾಸ್ ಸಮ್ಮತಿಸಿದರು. ಇಬ್ಬರೂ ಹಝ್ರ್‌ರತ್ ಅಬೂತಾಲಿಬ್‌ರ ಬಳಿಗೆ ಹೋಗಿ ಹೀಗೆ ಹೇಳಿದರು: ಜನರ ಮೇಲೆ ಎರಗಿರುವ ವಿಪತ್ತು ದೂರವಾಗುವ ತನಕ ನಾವು ನಿಮ್ಮ ಕುಟುಂಬದ ಭಾರವನ್ನು ಸ್ವಲ್ಪ ಹಗುರಗೊಳಿಸಲು ಇಚ್ಛಿಸುತ್ತಿದ್ದೇವೆ. ಹಝ್ರ್‌ರತ್ ಅಬೂ ತಾಲಿಬ್ ಹೇಳಿದರು: ಅಖೀಲ್ ನನ್ನ ಬಳಿ ಇರಲಿ. ಬಾಕಿಯಿರುವವರ ಬಗ್ಗೆ ನಿಮ್ಮ ಇಷ್ಟ ಪ್ರಕಾರ ಮಾಡಿರಿ. ಹೀಗೆ ಹಝ್ರ್‌ರತ್ ಪೈಗಂಬರ್(ಸ) ಹಝ್ರ್‌ರತ್ ಅಲಿಯ(ರ) ಕೈಯನ್ನು ಹಿಡಿದುಕೊಂಡು ತನ್ನೊಂದಿಗೆ ಸೇರಿಸಿದರು. ಹಝ್ರ್‌ರತ್ ಅಬ್ಬಾಸ್(ರ) ಜಾಫರ್‌ನನ್ನು ತನ್ನೊಂದಿಗೆ ಇರಿಸಿದರು. ಅಲ್ಲಾಹನು ಹಝ್ರ್‌ರತ್ ಪೈಗಂಬರರನ್ನು(ಸ) ನಬಿಯಾಗಿ ನಿಯೋಜಿಸಿದ ಸಮಯದಲ್ಲೂ ಹಝ್ರ್‌ರತ್ ಅಲಿ(ರ) ಹಝ್ರ್‌ರತ್ ಪೈಗಂಬರರೊಂದಿಗೆ(ಸ) ಇದ್ದರು. ಅನಂತರ ಹಝ್ರ್‌ರತ್ ಅಲಿ(ರ) ಹಝ್ರ್‌ರತ್ ಪೈಗಂಬರರ(ರ) ವಿಧೇಯತೆಯನ್ನು ಕೈಗೊಂಡರು, ಅವರನ್ನು ನಂಬಿದರು ಮತ್ತು ಅವರ ಸತ್ಯತೆಗೆ ಸಾಕ್ಷ್ಯವಹಿಸಿದರು. ಹಝ್ರ್‌ರತ್ ಅಬ್ಬಾಸ್‌ರೊಂದಿಗೆ ಇದ್ದ ಹಝ್ರ್‌ರತ್ ಜಾಫರ್ ಸಹ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಅನಂತರ ಹಝ್ರ್‌ರತ್ ಜಾಫರ್ ಹಝ್ರ್‌ರತ್ ಅಬ್ಬಾಸ್‌ರಿಂದ ಬೇರೆಯಾಗಿ ಇರಲು ತೊಡಗಿದರು. (ತಾರೀಖುತ್ತಿಬರಿ, ಸಂಪುಟ–2, ಪುಟ–225, ದಾರುಲ್ ಫೀಕರ್ ಲೆಬನಾನ್ 2002)

ಈ ಸಂಗತಿಯನ್ನು ಪ್ರಸ್ತಾಪಿಸುತ್ತಾ ಹಝ್ರ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ಬರೆದಿರುವರು: ಅಬೂ ತಾಲಿಬ್ ತುಂಬ ಆದರಣೀಯ ವ್ಯಕ್ತಿಯಾಗಿದ್ದರು. ಆದರೆ ಬಡವರಾಗಿದ್ದರು ಮತ್ತು ಬಹಳ ಕಷ್ಟದಿಂದ ಇವರ ದೈನಂದಿನ ಖರ್ಚುಗಳು ನಡೆಯುತ್ತಿತ್ತು. ವಿಶೇಷವಾಗಿ, ಮಕ್ಕದಲ್ಲಿ ಕ್ಷಾಮದ ಸ್ಥಿತಿಯುಂಟಾದಾಗ, ಅವರ ದಿನಗಳು ಬಹಳ ಕಷ್ಟದಿಂದ ಕಳೆಯುತ್ತಿತ್ತು. ಹಝ್ರ್‌ರತ್ ಪೈಗಂಬರ್(ಸ) ತನ್ನ ದೊಡ್ಡಪ್ಪರ ಈ ಸಂಕಷ್ಟಾವಸ್ಥೆಯನ್ನು ನೋಡಿದಾಗ, ತನ್ನ ಮತ್ತೋರ್ವ ದೊಡ್ಡಪ್ಪರಾದ ಅಬ್ಬಾಸ್‌ರೊಡನೆ ಹೀಗೆ ಹೇಳಿದರು: ನಿಮ್ಮ ಸಹೋದರ ಅಬೂ ತಾಲಿಬರ ಆರ್ಥಿಕ ಸ್ಥಿತಿ ತುಂಬ ಕೆಟ್ಟುಹೋಗಿದೆ. ಅವರ ಮಕ್ಕಳಲ್ಲಿ ಒಬ್ಬರನ್ನು ನೀವು ನಿಮ್ಮ ಮನೆಗೆ ಕರಕೊಂಡು ಹೋಗುವುದಾದರೆ ಮತ್ತು ಒಬ್ಬರನ್ನು ನಾನು ಕೊಂಡುಹೋಗುವುದಾದರೆ ಚೆನ್ನಾಗಿರುವುದು. ಅಬ್ಬಾಸ್ ಈ ಸಲಹೆಯನ್ನು ಒಪ್ಪಿಕೊಂಡರು ಮತ್ತು ಇಬ್ಬರೂ ಅಬೂ ತಾಲಿಬರ ಬಳಿಗೆ ಹೋದರು. ಈ ವಿನಂತಿಯನ್ನು ಅವರ ಮುಂದಿಟ್ಟರು. ಅವರಿಗೆ ಅವರ ಮಗನಾದ ಅಖೀಲ್‌ನೊಡನೆ ತುಂಬ ಪ್ರೀತಿಯಿತ್ತು. ಅವರು ಹೇಳಿದರು: ಅಖೀಲ್ ನನ್ನ ಬಳಿ ಇರಲಿ. ಬಾಕಿ ಮಕ್ಕಳನ್ನು ನಿಮ್ಮ ಇಚ್ಛೆ ಪ್ರಕಾರ ಕೊಂಡುಹೋಗಿರಿ. ಹೀಗೆ ಜಾಫರ್‌ನನ್ನು ಅಬ್ಬಾಸ್ ತನ್ನ ಮನೆಗೆ ಕೊಂಡುಹೋದರು ಮತ್ತು ಹಝ್ರ್‌ರತ್ ಅಲಿಯನ್ನು(ರ) ಹಝ್ರ್‌ರತ್ ಪೈಗಂಬರ್(ಸ) ತನ್ನೊಂದಿಗೆ ಇರಿಸಿದ್ದರು. ಹಝ್ರ್‌ರತ್ ಅಲಿಗೆ(ರ) ಆಗ ಸುಮಾರು 6,7 ವರ್ಷ ಪ್ರಾಯವಿತ್ತು. ಅನಂತರ ಹಝ್ರ್‌ರತ್ ಅಲಿ(ರ) ಸದಾ ಹಝ್ರ್‌ರತ್ ಪೈಗಂಬರರ(ಸ) ಬಳಿಯಿದ್ದರು. (ಸೀರತ್ ಖಾತಮನ್ನಬೀಈನ್, ಹಝುರರತ್ ಮಿರ್ಝು ಬಶೀರ್ ಅಹ್ಮದ್ ಸಾಹಿಬ್, ಪುಟ–111)

ಹಝ್ರ್‌ರತ್ ಅಲಿಯರ(ರ) ಇಸ್ಲಾಂ ಸ್ವೀಕಾರದ ಬಗ್ಗೆ ಇಬ್ನು ಇಸ್‌ಹಾಖ್‌ರಿಂದ ಹೀಗೆ ವರದಿಯಾಗಿದೆ. ಹಝ್ರ್‌ರತ್ ಖದೀಜ(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಮರುದಿನ ಹಝ್ರ್‌ರತ್ ಅಲಿ ಬಿನ್ ಅಬೂತಾಲಿಬ್(ರ) ಬಂದರು. ಹಝ್ರ್‌ರತ್ ಪೈಗಂಬರ್(ಸ) ಮತ್ತು ಹಝ್ರ್‌ರತ್ ಖದೀಜ(ರ) ನಮಾಝ್ ನಿರ್ವಹಿಸುತ್ತಿರುವುದನ್ನು ಕಂಡರು. ಇದೇನೆಂದು ಹಝ್ರ್‌ರತ್ ಅಲಿ(ರ) ಹಝ್ರ್‌ರತ್ ಪೈಗಂಬರರೊಡನೆ(ಸ) ಕೇಳಿದರು. ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: ಇದು ಅಲ್ಲಾಹನ ಧರ್ಮವಾಗಿದೆ. ಅವನು ಇದನ್ನು ತನಗಾಗಿ ಆಯ್ಕೆ ಮಾಡಿದ್ದಾನೆ ಮತ್ತು ಅದರೊಂದಿಗೆ ಪ್ರವಾದಿಗಳನ್ನು ನಿಯೋಜಿಸಿದ್ದಾನೆ. ಆದ್ದರಿಂದ ನಾನು ನಿನ್ನನ್ನು ಅವನ ಆರಾಧನೆಯ ಕಡೆಗೆ ಕರೆಯುತ್ತಿದ್ದೇನೆ ಮತ್ತು ಲಾತ್ ಮತ್ತು ಉಝ್ಝರನ್ನು ಪೂಜೆ ಮಾಡದಿರಲು ಉಪದೇಶಿಸುತ್ತಿದ್ದೇನೆ. ಆಗ ಹಝ್ರ್‌ರತ್ ಅಲಿ(ರ) ಹೇಳಿದರು: ಇದು ಇಂದಿನ ತನಕ ನಾನು ಕೇಳಿರದ ಸಂಗತಿಯಾಗಿದೆ. ಅಬೂತಾಲಿಬ್‌ರೊಡನೆ ಇದರ ಬಗ್ಗೆ

ಪ್ರಸ್ತಾಪಿಸದೇ ನಾನು ಇದರ ಬಗ್ಗೆ ಏನೂ ಹೇಳಲಾರನು. ಪ್ರವಾದಿತ್ವದ ಬಗ್ಗೆ ಘೋಷಿಸುವ ವರೆಗೆ ಈ ರಹಸ್ಯವನ್ನು ಬಯಲು ಮಾಡುವುದನ್ನು ಹಝ್ರತ್ ಪೈಗಂಬರ್(ಸ) ಇಷ್ಟಪಟ್ಟಿರಲಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಲಿ, ನೀನು ಇಸ್ಲಾಂ ಸ್ವೀಕರಿಸುವುದಿಲ್ಲವಾದರೆ, ಇದರ ಬಗ್ಗೆ ಈಗ ಯಾರೊಡನೆಯೂ ಹೇಳಬೇಡ. ಹೀಗೆ ಹಝ್ರತ್ ಅಲಿ(ರ) ಅಂದಿನ ರಾತ್ರಿಯನ್ನು ಕಳೆದರು. ಅನಂತರ ಅಲ್ಲಾಹನು ಹಝ್ರತ್ ಅಲಿಯ ಹೃದಯದಲ್ಲಿ ಇಸ್ಲಾಂ ಧರ್ಮವನ್ನು ದಾಖಲು ಮಾಡಿದನು. ಮರುದಿನ ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾಗಿ ಹೀಗೆ ಹೇಳಿದರು: ನಿನ್ನೆ ರಾತ್ರಿ ನೀವು ಯಾವ ಸಂಗತಿಯನ್ನು ನನ್ನ ಮುಂದಿಟ್ಟಿದ್ದೀರಿ? ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನಲ್ಲದೆ, ಬೇರೆ ಆರಾಧ್ಯನಿಲ್ಲ, ಅವನು ಏಕನೂ ಅವನಿಗೆ ಸಹಭಾಗಿಯಾಗಿ ಯಾರೂ ಇಲ್ಲ ಎಂಬುದಕ್ಕೆ ನೀನು ಸಾಕ್ಷ್ಯವಹಿಸು. ಲಾತ್, ಉಝ್ಝಾ ಮತ್ತು ಇತರ ಸಹಭಾಗಿಗಳನ್ನು ಪೂಜೆ ಮಾಡುವುದನ್ನು ಉಪೇಕ್ಷಿಸು. ಹಝ್ರತ್ ಅಲಿ(ರ) ಹಾಗೆಯೇ ಮಾಡಿದರು ಮತ್ತು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಅಬೂ ತಾಲಿಬ್‌ರೊಡನೆ ಇದ್ದ ಭಯದ ಕಾರಣದಿಂದ ಹಝ್ರತ್ ಅಲಿ(ರ) ರಹಸ್ಯವಾಗಿ ಹಝ್ರತ್ ಪೈಗಂಬರರ(ಸ) ಬಳಿಗೆ ಬರುತ್ತಿದ್ದರು. (ಅಸದುಲ್‌ಗಾಬ, ಸಂಪುಟ–4, ಪುಟ–88–89, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಅವರು ಅಲ್ಲೇ ಇರುತ್ತಿದ್ದರೂ ತನ್ನ ಇಸ್ಲಾಂ ಧರ್ಮ ಸ್ವೀಕಾರವನ್ನು ರಹಸ್ಯವಾಗಿ ಇರಿಸಿದ್ದರು. ವರದಿಗಳಲ್ಲಿ ಹೀಗೆಯೇ ಹೇಳಲಾಗಿದೆ. ಹೇಗಿದ್ದರೂ ಇದು ಅಸದುಲ್ ಗ್ಗಾಬದ ವರದಿಯಾಗಿದೆ.

ಹಝ್ರತ್ ಖದೀಜರ(ರ) ನಂತರ ಮೊತ್ತಮೊದಲು ಹಝ್ರತ್ ಅಲಿ(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದರು. ಆ ಸಮಯದಲ್ಲಿ ಹಝ್ರತ್ ಅಲಿಗೆ(ರ) ಹದಿಮೂರು ವಯಸ್ಸಿತ್ತು. ಕೆಲವು ವರದಿಗಳ ಪ್ರಕಾರ, ಅವರಿಗೆ ಆ ಸಮಯದಲ್ಲಿ, ಹದಿನೈದು, ಹದಿನಾರು, ಹದಿನೆಂಟು ವಯಸ್ಸಿತ್ತು ಎಂದೂ ವರದಿಗಳಲ್ಲಿ ಬಂದಿವೆ. (ಅಲ್‌ಇಸ್ತಿಆಬ್ ಫೀ ಮಾರಿಫತಿಲ್ ಅಸ್ಹಾಬ್, ಸಂಪುಟ–3, ಪುಟ–200, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಪುರುಷರಲ್ಲಿ ಮೊತ್ತಮೊದಲು ಯಾರು ವಿಶ್ವಾಸ ಕೈಗೊಂಡಿದ್ದರು ಎಂಬುದರ ಬಗ್ಗೆ ಚರಿತ್ರೆಗಾರರು ಚರ್ಚಿಸಿದ್ದಾರೆ. ಹಝ್ರತ್ ಅಬೂಬಕರ್, ಹಝ್ರತ್ ಅಲಿ ಅಥವಾ ಹಝ್ರತ್ ಝೈದ್‌ರಲ್ಲಿ ಯಾರೆಂಬುದರ ಬಗ್ಗೆ. ಮಕ್ಕಳಲ್ಲಿ ಹಝ್ರತ್ ಅಲಿ, ದೊಡ್ಡವರಲ್ಲಿ ಹಝ್ರತ್ ಅಬೂಬಕರ್ ಮತ್ತು ಗುಲಾಮರಲ್ಲಿ ಹಝ್ರತ್ ಝೈದ್ ಎಂದು ಹೇಳಿ ಕೆಲವರು ಇದನ್ನು ಬಗೆಹರಿಸಿದ್ದಾರೆ. ಇದರ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಸಹ ತನ್ನ ದೃಷ್ಟಿಕೋನವನ್ನು ಮುಂದಿರಿಸಿರುವರು. ಅವರು ಹೇಳುತ್ತಾರೆ: ಹಝ್ರತ್ ಖದೀಜರ(ರ) ನಂತರ ಪುರುಷರಲ್ಲಿ ಎಲ್ಲರಿಗಿಂತ ಮುಂಚೆ ಯಾರು ವಿಶ್ವಾಸ ಕೈಗೊಂಡಿದ್ದರು ಎಂಬುದರು ಬಗ್ಗೆ ಚರಿತ್ರೆಗಾರರು ಭಿನ್ನಾಭಿಪ್ರಾಯಗಳನ್ನು ಹೊಂದಿರುವರು. ಕೆಲವರು ಹಝ್ರತ್ ಅಬೂಬಕರ್ ಬಿನ್ ಅಬೀ ಖಹಾಫರ ಹೆಸರು ಹೇಳುತ್ತಾರೆ. ಕೆಲವರು ಆ ಸಮಯದಲ್ಲಿ ಕೇವಲ ಹತ್ತು ವರ್ಷಗಳ ಪ್ರಾಯವಿದ್ದ ಹಝ್ರತ್ ಅಲಿಯ(ರ) ಹೆಸರನ್ನು ಹೇಳುತ್ತಾರೆ. ಕೆಲವರು ಹಝ್ರತ್ ಪೈಗಂಬರ್(ಸ) ಸ್ವತಂತ್ರಗೊಳಿಸಿದ ಗುಲಾಮರಾದ ಹಝ್ರತ್ ಝೈದ್ ಬಿನ್ ಹಾರಿಸರ ಹೆಸರನ್ನು ಹೇಳುತ್ತಾರೆ. ಆದರೆ ನಮ್ಮ ಪ್ರಕಾರ ಇದು ವ್ಯರ್ಥವಾದ ಚರ್ಚೆಯಾಗಿದೆ. ಹಝ್ರತ್ ಅಲಿ(ರ) ಮತ್ತು ಝೈದ್ ಬಿನ್ ಹಾರಿಸ(ರ) ಹಝ್ರತ್ ಪೈಗಂಬರರ(ಸ) ಮನೆಯ ಸದಸ್ಯರಾಗಿದ್ದರು. ಪೈಗಂಬರರ ಮಕ್ಕಳ ಹಾಗೆ ಅವರು ಅವರೊಂದಿಗೆ ಇರುತ್ತಿದ್ದರು. ಅವರು ವಿಶ್ವಾಸ ಕೈಗೊಳ್ಳಲು ಹಝ್ರತ್ ಪೈಗಂಬರರ ನಿರ್ದೇಶನವೇ ಸಾಕಾಗಿತ್ತು. ಮಾತ್ರವಲ್ಲ, ಬಹುಶಃ ಅವರ ನಾಲಗೆಯಿಂದ ಸಮ್ಮತಿಯ ಯಾವ ಆವಶ್ಯಕತೆಯೂ ಇದ್ದಿರಲಿಲ್ಲ. ಆದ್ದರಿಂದ ಇವರ ಹೆಸರು ಈ ಚರ್ಚೆಯಲ್ಲಿ ತರುವ ಆವಶ್ಯಕತೆಯೇ ಇಲ್ಲ. ಇತರರಲ್ಲಿ ಮೊತ್ತಮೊದಲು ವಿಶ್ವಾಸ ಕೈಗೊಂಡವರು ಹಝ್ರತ್ ಅಬೂಬಕ್ಕರ್ ಆಗಿದ್ದರು ಎಂಬುದು ಸರ್ವ ಸಮ್ಮತನೀಯವಾದ ಸಂಗತಿಯಾಗಿದೆ. (ಸೀರತ್ ಖಾತಮುನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ಪುಟ–121)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಮೂಸಾ(ಅ) ಅಲ್ಲಾಹನೊಡನೆ ಬೇಡಿದಾಗ, ಅವರಿಗೆ ಒಬ್ಬ ಸಹಾಯಕ ಸಿಕ್ಕಿದರು. ಆದರೆ ಹಝ್ರತ್ ಪೈಗಂಬರರ(ಸ) ಸ್ಥಾನವನ್ನು ನೋಡಿರಿ. ಅವರಿಗೆ ಬೇಡದೇ ಸಹಾಯಕ ಲಭಿಸಿತು. ಇಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹಝ್ರತ್ ಖದೀಜರ(ರ) ಬಗ್ಗೆ ಹೇಳುತ್ತಿದ್ದಾರೆ. ಹಝ್ರತ್ ಖದೀಜ(ರ) ಹಝ್ರತ್ ಪೈಗಂಬರರ(ಸ) ಸಹಾಯಕರಾಗಿದ್ದರು ಎಂದು ಹೇಳುತ್ತಿದ್ದಾರೆ. ಹಝ್ರತ್ ಪೈಗಂಬರರಿಗೆ(ಸ) ಅತ್ಯಂತ ಪ್ರಿಯವಾಗಿದ್ದ ಪತ್ನಿ ಎಲ್ಲರಿಗಿಂತ ಮುಂಚೆ ಪೈಗಂಬರರ(ಸ) ಮೇಲೆ ವಿಶ್ವಾಸ ಕೈಗೊಂಡರು. ಏಕೆಂದರೆ, ಪ್ರತಿಯೊಬ್ಬರು ತಮ್ಮ ಧರ್ಮ ಮತ್ತು ವಿಶ್ವಾಸದ ಕಾರ್ಯದಲ್ಲಿ ಸ್ವತಂತ್ರರಾಗಿರುತ್ತಾರೆ. ಯಾರೂ ಯಾರನ್ನೂ ಒತ್ತಾಯದಿಂದ ಸಮ್ಮತಿಸುವಂತಿಲ್ಲ. ಆದ್ದರಿಂದ ಅಲ್ಲಾಹನ ದಿವ್ಯವಾಣಿಯ ಬಗ್ಗೆ ಹಝ್ರತ್ ಖದೀಜರೊಡನೆ(ರ) ಹಝ್ರತ್ ಪೈಗಂಬರ್(ಸ) ಪ್ರಸ್ತಾಪಿಸಿದಾಗ, ಹಝ್ರತ್ ಖದೀಜ(ರ) ಹಝ್ರತ್ ಪೈಗಂಬರರಿಗೆ(ಸ) ನೆರವಾಗದೆ, ನಾನೀಗ ಯೋಚಿಸಿ ಇದರ ಬಗ್ಗೆ ತೀರ್ಮಾನಿಸುತ್ತೇನೆ ಎಂದು ಹೇಳಬಹುದಾಗಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಹಝ್ರತ್ ಖದೀಜ(ರ) ಹಿಂಜರಿಕೆಯಿಲ್ಲದೆ, ತಡಮಾಡದೆ, ಹಿಂದುಮುಂದು ನೋಡದೆ ಹಝ್ರತ್ ಪೈಗಂಬರರ(ಸ) ವಾದವನ್ನು ಅಂಗೀಕರಿಸಿದರು. ಹಝ್ರತ್ ಖದೀಜ(ರ) ನನ್ನನ್ನು ನಂಬದೇ ಇರಬಹುದೇ ಎಂಬ ಚಿಂತೆ ಹಝ್ರತ್ ಪೈಗಂಬರರಿಗೆ(ಸ) ಇಲ್ಲವಾಯಿತು. ಹೀಗೆ ಹಝ್ರತ್ ಖದೀಜ(ರ) ಮೊತ್ತಮೊದಲು ವಿಶ್ವಾಸ ಕೈಗೊಂಡವರಾದರು.ಆ ವೇಳೆ ಅಲ್ಲಾಹನು ತನ್ನ ಸಿಂಹಾಸನದಲ್ಲಿ ಕುಳಿತುಕೊಂಡು ಹೀಗೆ ಹೇಳುತ್ತಿದ್ದನು. **ಅಲೈಸಲ್ಲಾಹು ಬಿಕಾಫಿನ್ ಅಬ್ದದಹು**. ಅಲ್ಲಾಹನು ತನ್ನ ದಾಸನಿಗೆ ಸಾಕಾಗಲಾರನೇ? ಹೇ ಮುಹಮ್ಮದ್, ನಿನಗೆ ಖದೀಜರೊಡನೆ ಪ್ರೀತಿಯಿತ್ತು, ಪ್ರೇಮವಿತ್ತು. ಖದೀಜ ನಿನ್ನನ್ನು ಬಿಟ್ಟುಹೋಗುವರೋ ಎಂಬ ಚಿಂತೆ ನಿನ್ನ ಮನಸಲ್ಲಿತ್ತು. ಖದೀಜ ನಿನ್ನನ್ನು ನಂಬುವರೋ ಇಲ್ಲವೋ ಎಂಬ ಚಿಂತೆ ನಿನಗಿತ್ತು. ಆದರೆ ನಾನು ನಿನ್ನ ಆವಶ್ಯಕತೆಯನ್ನು ಈಡೇರಿಸಲಿಲ್ಲವೇ? ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅನಂತರ ಹಝ್ರತ್ ಪೈಗಂಬರರ(ಸ) ಮನೆಯಲ್ಲಿ ಅಲ್ಲಾಹನ ದಿವ್ಯವಾಣಿಯ ಕುರಿತು ಮಾತುಕತೆ ನಡೆದಾಗ, ಮನೆಯಲ್ಲಿ ಇರುತ್ತಿದ್ದ ಹಝ್ರತ್ ಪೈಗಂಬರರ(ರ) ಗುಲಾಮ ಮುಂದಕ್ಕೆ ಬಂದು, ಯಾ ರಸೂಲಲ್ಲಾಹ್, ನಾನು ನಿಮ್ಮ ಮೇಲೆ ವಿಶ್ವಾಸ ಕೈಗೊಳ್ಳುತ್ತೇನೆ ಎಂದು ಹೇಳಿದರು. ಅನಂತರ ಆಗ ಹನ್ನೊಂದು ವರ್ಷ ಮಾತ್ರ ಪ್ರಾಯವಿದ್ದ ಸಣ್ಣ ಹುಡುಗನಾದ ಹಝ್ರತ್ ಅಲಿ(ರ) ಬಾಗಿಲ ಬಳಿ ನಿಂತುಕೊಂಡು ಹಝ್ರತ್ ಪೈಗಂಬರರ(ಸ) ಮತ್ತು ಹಝ್ರತ್ ಖದೀಜರ(ರ) ನಡುವೆ ನಡೆಯುತ್ತಿರುವ ಮಾತುಕತೆಗಳನ್ನು ಕೇಳುತ್ತಿದ್ದರು. ಅಲ್ಲಾಹನ ಸಂದೇಶ ಬಂದಿದೆ ಎಂದು ಕೇಳಿದಾಗ, ಪ್ರತಿಭಾವಂತ ಮತ್ತು ಸಮರ್ಥ ಹುಡುಗನಾಗಿದ್ದ ಆ ಅಲಿ, ಹೃದಯದಲ್ಲಿ ಒಳಿತುಗಳಿದ್ದ ಆ ಅಲಿ, ಪೋಷಿಸಲ್ಪಡದ ಒಳಿತಿನ ಭಾವನೆಗಳನ್ನು ಹೊಂದಿದ್ದ ಆ ಅಲಿ, ಉನ್ನತ ಸಂವೇದನೆಯನ್ನು ಹೊಂದಿದ್ದ, ಆದರೆ ಅವುಗಳನ್ನು ಎದೆಯಲ್ಲಿ ಅದುಮಿ ಇಟ್ಟಿದ್ದ ಆ ಅಲಿ. ಅವರೊಳಗೆ ಅಲ್ಲಾಹನು ಸತ್ಯ ಸ್ವೀಕಾರದ ಗುಣವನ್ನು ಹುದುಗಿಸಿ ಇಟ್ಟಿದ್ದನು ಆದರೆ ಅವರಿಗೆ ಅದನ್ನು ಹೊರಗೆಡಹಲು ಅವಕಾಶ ಸಿಕ್ಕಿರಲಿಲ್ಲ. ಈಗ ತನ್ನ ಭಾವನೆಗಳನ್ನು ಪ್ರಕಟಿಸುವ ಸಮಯ ಬಂದಿದೆ ಎಂದು ಅವರು ಕಂಡಾಗ, ಈಗ ತನ್ನ ಸಂವೇದನೆಗಳ ಬೆಳವಣಿಗೆಯ ಸಂದರ್ಭ ಒದಗಿ ಬಂದಿದೆ ಎಂದು ನೋಡಿದಾಗ, ಈಗ ಅವರನ್ನು ಅಲ್ಲಾಹನು ತನ್ನ ಬಳಿಗೆ ಕರೆಯುತ್ತಿದ್ದಾನೆ ಎಂದು ಅವರು ನೋಡಿದಾಗ, ಆ ಹುಡುಗನಾದ ಅಲಿ ತನ್ನ ನೋವಿನಿಂದ ಕೂಡಿದ್ದ ಹೃದಯದೊಂದಿಗೆ ಸಂಕೋಚ ಪಡುತ್ತಾ ಮತ್ತು ನಾಚುತ್ತಾ ಮುಂದಕ್ಕೆ ಬಂದು ಹೇಳಿದರು: ಯಾ ರಸೂಲಲ್ಲಾಹ್, ಯಾವ ಸಂಗತಿಯನ್ನು ನನ್ನ ಚಿಕ್ಕಮ್ಮ ನಂಬಿರುವರೋ, ಯಾವ ಮಾತನ್ನು ಝೈದ್ ನಂಬಿರುವರೋ, ಆ ಸಂಗತಿಯನ್ನು ನಾನು ಸಹ ನಂಬುತ್ತೇನೆ. (ರಸೂಲೆ ಕರೀಂ(ಸ) ಕೀ ಝಿಂದಗಿ ಕೆ ತಮಾಮ್ ಎಹೆಮ್ ವಾಖಿಆತ್, ಅನ್ವಾರುಲ್ ಉಲೂಮ್, ಸಂಪುಟ–19, ಪುಟ–127–128)

ತಾರೀಖೆ ತಬರಿಯಲ್ಲಿ ಹೀಗೆ ಬರೆಯಲಾಗಿದೆ: ನಮಾಝಿನ ಸಮಯವಾಗುವಾಗ, ಹಝ್ರತ್ ಪೈಗಂಬರ್(ಸ) ಮಕ್ಕದ ಕಣಿವೆಗಳ ಕಡೆಗೆ ಹೋಗುತ್ತಿದ್ದರು. ಹಝ್ರತ್ ಅಲಿ(ರ) ಸಹ ತನ್ನ ಚಿಕ್ಕಪ್ಪ ಅಬೂ ತಾಲಿಬ್ ಮತ್ತು ಇತರ ಚಿಕ್ಕಪರು ಹಾಗೂ ಸಮುದಾಯದ ಇತರರು ಕಾಣದ ರೀತಿಯಲ್ಲಿ ರಹಸ್ಯವಾಗಿ ಹಝ್ರತ್ ಪೈಗಂಬರರೊಂದಿಗೆ(ಸ) ಹೋಗುತ್ತಿದ್ದರು. ಇಬ್ಬರು ಅಲ್ಲಿ ನಮಾಝ್ ನಿರ್ವಹಿಸಿ ಸಂಜೆ ಮರಳಿ ಬರುತ್ತಿದ್ದರು. ಈ ರೀತಿ ಮುಂದುವರಿಯುತ್ತಾ ಹೋಗುತ್ತಿತ್ತು. ಅನಂತರ ಒಂದು ದಿನ ಇವರಿಬ್ಬರೂ ನಮಾಝ್ ಅನುಷ್ಠಿಸುವುದನ್ನು ಅಬೂ ತಾಲಿಬ್ ಕಂಡರು ಮತ್ತು ಹಝ್ರತ್ ಪೈಗಂಬರರೊಡನೆ(ಸ) ಕೇಳಿದರು: ಹೇ ನನ್ನ ಸೋದರ ಪುತ್ರಾ, ನೀನು ಯಾವ ಧರ್ಮವನ್ನು ಕೈಗೊಂಡಿರುವುದಾಗಿ ನಾನೀಗ ನೋಡುತ್ತಿರುವೆನು? ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ನನ್ನ ಚಿಕ್ಕಪ್ಪ, ಇದು ಅಲ್ಲಾಹನ ಧರ್ಮವಾಗಿದೆ. ಅವನ ದೇವದೂತರ ಧರ್ಮವಾಗಿದೆ. ಅವನ ಪ್ರವಾದಿಗಳ ಧರ್ಮವಾಗಿದೆ. ನಮ್ಮ ತಂದೆಯಾದ ಹಝ್ರತ್ ಇಬ್ರಾಹೀಮರ ಧರ್ಮವಾಗಿದೆ. ಅಲ್ಲಾಹನು ಈ ಧರ್ಮದೊಂದಿಗೆ ನನ್ನನ್ನು ಜನರೆಡೆಗೆ ಕಳುಹಿಸಿರುವನು. ಹೇ ಚಿಕ್ಕಪ್ಪ, ಈ ಉಪದೇಶದ ಬಗ್ಗೆ ಕೇಳಲು ನೀವು ಅತ್ಯಂತ ಹೆಚ್ಚು ಅರ್ಹರಾಗಿದ್ದೀರಿ. ಈ ಮಾರ್ಗದೆಡೆಗೆ ಬರಲು ನೀವು ಹೆಚ್ಚು ಅರ್ಹರಾಗಿದ್ದೀರಿ. ನನ್ನನ್ನು ಅಂಗೀಕರಿಸಲು ಮತ್ತು ನನಗೆ ನೆರವಾಗಲು ನೀವು ಹೆಚ್ಚು ಹಕ್ಕುದಾರರಾಗಿರುವಿರಿ. ಆಗ ಅಬೂತಾಲಿಬ್ ಹೇಳಿದರು: ಹೇ ನನ್ನ ಸೋದರ ಪುತ್ರಾ, ನಾನು ನನ್ನ ಮತ್ತು ನನ್ನ ತಂದೆತಾತಂದಿರರು ಇದ್ದ ಧರ್ಮವನ್ನು ಬಿಟ್ಟುಬರಲು ಶಕ್ತನಲ್ಲ. ಆದರೆ, ಅಲ್ಲಾಹನಾಣೆ, ನಾನು ಜೀವಂತವಾಗಿರುವ ತನಕ ನನಗೆ ಇಷ್ಟವಿಲ್ಲದ ಏನೂ ಬರದಂತೆ ನಾನು ನೋಡುವೆನು. (ತಾರೀಖುತ್ತಿಬರಿ, ಭಾಗ–2, ಪುಟ–225, ದಾರುಲ್ ಫೀಕರ್ 2002)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಒಂದು ಸಲ ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಲಿ(ರ) ಮಕ್ಕದ ಒಂದು ಕಣಿವೆಯಲ್ಲಿ ನಮಾಝ್ ನಿರ್ವಹಿಸುತ್ತಿದ್ದರು. ಅಚಾನಕ್ಕಾಗಿ, ಅಲ್ಲಿಂದ ಅಬೂ ತಾಲಿಬ್ ದಾಟಿಹೋದರು. ಅಲ್ಲಿಯವರೆಗೂ ಇಸ್ಲಾಮಿನ ಬಗ್ಗೆ ಅಬೂ ತಾಲಿಬ್ ಏನೂ ಕೇಳಿರಲಿಲ್ಲ. ಆದ್ದರಿಂದ ಅವರು ನಿಂತುಕೊಂಡು ಅತ್ಯಂತ ಅಚ್ಚರಿಯಿಂದ ಈ ದೃಶ್ಯವನ್ನು ನೋಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ನಮಾಝ್ ಮುಗಿಸಿದಾಗ, ಅವರು ಕೇಳಿದರು: ಹೇ ನನ್ನ ತಮ್ಮನ ಮಗನೇ, ನೀನಿದು ಯಾವ ಧರ್ಮವನ್ನು ಕೈಗೊಂಡಿದ್ದೀಯಾ? ಹಝ್ರತ್ ಪೈಗಂಬರ್(ಸ) ಹೇಳಿದರು: ದೊಡ್ಡಪ್ಪ, ಇದು ದೇವನ ಧರ್ಮ ಮತ್ತು ಹಝ್ರತ್ ಇಬ್ರಾಹೀಮ್‌ರ(ಅ) ಧರ್ಮವಾಗಿದೆ. ಹಝ್ರತ್ ಪೈಗಂಬರ್(ಸ) ಹ್ರಸ್ವವಾಗಿ ಇಸ್ಲಾಮಿನ ಸಂದೇಶ ಹೇಳಿಕೊಟ್ಟರು. ಆದರೆ, ಅಬೂ ತಾಲಿಬ್ ಹೀಗೆ ಹೇಳುತ್ತಾ ಅದನ್ನು ಅವಗಣಿಸಿದರು: ನಾನು ನನ್ನ ತಂದೆತಾತಂದಿರ ಧರ್ಮವನ್ನು ಉಪೇಕ್ಷಿಸಲಾರೆನು. ಅದರೊಂದಿಗೆ ತನ್ನ ಮಗನಾದ ಹಝ್ರತ್ ಅಲಿಯನ್ನು(ರ) ಸಂಬೋಧಿಸುತ್ತಾ ಹೇಳಿದರು: ಸರಿ, ನೀನು ಖಂಡಿತವಾಗಿಯೂ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ನೆರವಾಗು, ಏಕೆಂದರೆ ಅವರು ನಿನ್ನನ್ನು ಒಳಿತಿನ ಕಡೆಗೆ ಅಲ್ಲದೆ, ಬೇರೆ ಯಾವ ಕಡೆಗೂ ಕರೆಯಲಾರರು ಎಂದು ನನಗೆ ದೃಢವಿಶ್ವಾಸವಿದೆ. (ಸೀರತ್ ಖಾತಮುನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ಪುಟ–127)

ಅಲ್ಲಾಹನ ಆಜ್ಞೆ ಪ್ರಕಾರ, ಹಝ್ರತ್ ಪೈಗಂಬರರು(ಸ) ತಮ್ಮ ನಿಕಟ ಸಂಬಂಧಿಕರಿಗೆ ಮುನ್ನೆಚ್ಚರಿಕೆ ನೀಡಿದ್ದ ಬಗ್ಗೆ ಹಝ್ರತ್ ಬರಾ ಬಿನ್ ಆಝಿಬ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರರಿಗೆ(ಸ)**ವ ಅಂಝಿರ್ ಅಶೀರತಕಲ್ ಅಖ್‌ರಬೀನ್** ಎಂಬ ವಚನ ಅವತೀರ್ಣವಾಯಿತು. ಎಂದರೆ, ನೀನು ನಿನ್ನ ನಿಕಟ ಸಂಬಂಧಿಕರಿಗೆ ಮುನ್ನೆಚ್ಚರಿಕೆ ನೀಡು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಲಿ, ಒಂದು ಸಾಅ್ ಊಟದೊಂದಿಗೆ ಒಂದು ಆಡಿನ ತೊಡೆಯನ್ನು ತಂದು ತಯಾರಿಸು ಮತ್ತು ನಮಗಾಗಿ ಒಂದು ಪಾತ್ರೆ ಹಾಲನ್ನು ಸಹ ಕೊಂಡು ಬಾ ಅನಂತರ ಅಬ್ದುಲ್ ಮುತಲಿಬರ ಮಕ್ಕಳನ್ನು ಒಟ್ಟುಸೇರಿಸು. ಒಂದು ವರದಿಯಲ್ಲಿ ಸಾಇನ ಬದಲಿಗೆ ಮುದ್ದ್ ಎಂಬ ಪದ ಬರುತ್ತದೆ. ಒಂದು ಸಾಅ್ ಎಂದರೆ ನಾಲ್ಕು ಮುದ್ದ್ ಆಗಿದೆ. ಎಂದರೆ, ಸುಮಾರು ಎರಡುವರೆ ಸೇರು ಅಥವಾ ಎರಡುವರೆ ಕಿಲೋ ಎಂದು ಹೇಳಬಹುದು. ಕೂಫದ ಮತ್ತು ಇರಾಕಿನ ಒಂದು ಸಾಅ್ ಎಂಟು ಮುದ್ದ್ ಆಗಿರುತ್ತದೆ ಎಂದೂ ಇಲ್ಲಿ ಬರೆಯಲಾಗಿದೆ. ಎಂದರೆ ನಾಲ್ಕು ಸೇರು ಅಥವಾ ನಾಲ್ಕುವರೆ ಸೇರು. ಎರಡುವರೆ ಸೇರು ಅಥವಾ ನಾಲ್ಕು ಸೇರು ಎಷ್ಟೇ ಆದರೂ ಬಹಳ ಸಣ್ಣ ಪ್ರಮಾಣದಲ್ಲಿ ತಯಾರು ಮಾಡಲಾಗಿತ್ತು. ಕುಟುಂಬದ ಸದಸ್ಯರನ್ನು ಕರೆಯಬೇಕಿತ್ತು, ಆಮಂತ್ರಿಸಬೇಕಾಗಿತ್ತು. ಅವರಿಗಾಗಿ ಊಟ ತಯಾರು ಮಾಡಬೇಕಾಗಿತ್ತು. ಹಝ್ರತ್ ಅಲಿ(ರ) ಹೇಳುತ್ತಾರೆ: ನಾನು ಹೇಳಿದಂತೆ ಮಾಡಿದೆ. ಎಲ್ಲರೂ ಒಟ್ಟುಸೇರಿದರು.ಸುಮಾರು ನಲ್ವತ್ತು ಜನರಿದ್ದರು. ಅವರಲ್ಲಿ ಹಝ್ರತ್ ಪೈಗಂಬರರ(ಸ) ದೊಡ್ಡಪ್ಪರಾದ, ಅಬೂತಾಲಿಬ್, ಹಂಝಾ, ಅಬ್ಬಾಸ್, ಅಬೂಲಹಬ್ ಸಹ ಇದ್ದರು. ನಾನು ಊಟದ ದೊಡ್ಡ ಪಾತ್ರೆಯನ್ನು ಅವರ ಮುಂದಿರಿಸಿದೆ. ಆಗ ಹಝ್ರತ್ ಪೈಗಂಬರ್(ಸ) ಅದರಿಂದ ಒಂದು ಮಾಂಸದ ತುಂಡನ್ನು ತೆಗೆದರು ಮತ್ತು ಹಲ್ಲುಗಳಿಂದ ಅದನ್ನು ತುಂಡು ಮಾಡಿದರು. ಅನಂತರ ಬರ್ಕತ್‌ಗಾಗಿ ಆ ಪಾತ್ರೆಯ ನಾಲ್ಕೂ ಕಡೆ ಅದನ್ನು ಹರಡಿದರು ಮತ್ತು ಅಲ್ಲಾಹನ ಹೆಸರಲ್ಲಿ ತಿನ್ನಲು ಹೇಳಿದರು. ಜನರು ಹೊಟ್ಟೆ ತುಂಬ ತಿಂದರು. ಅಲ್ಲಾಹನಾಣೆ, ನಾನು ಅದನ್ನು ಅವರ ಮುಂದಿರಿಸಿದಾಗ, ಅದು ಒಬ್ಬ ವ್ಯಕಿಗೆ ತಿನ್ನಲಿಕ್ಕೆ ಬೇಕಾದಷ್ಟು ಮಾತ್ರವಿದ್ದಿತ್ತು. ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ಜನರಿಗೆ ಕುಡಿಯಲು ಕೊಡು. ಆಗ ನಾನು ಹಾಲಿನ ಆ ಪಾತ್ರೆಯನ್ನು ಕೊಂಡುಬಂದೆ. ಸಾಕಾಗುವಷ್ಟು ಎಲ್ಲರೂ ಕುಡಿದರು. ಅಲ್ಲಾಹನಾಣೆ,

ಅದರಲ್ಲಿ ಒಬ್ಬ ವ್ಯಕ್ತಿಗೆ ಸಾಕಾಗುವಷ್ಟು ಮಾತ್ರ ಹಾಲು ಇದ್ದಿತ್ತು. ಅನಂತರ ಹಝ್ರತ್ ಪೈಗಂಬರ್(ಸ) ಅಲ್ಲಿದ್ದವರೊಡನೆ ಮಾತನಾಡಲು ಉದ್ದೇಶಿಸಿದಾಗ, ಅಬೂಲಹಬ್ ಬೇಗನೇ ಮಾತನಾಡಲು ಶುರುಮಾಡುತ್ತಾ ಹೀಗೆ ಹೇಳಿದ: ನಿಮ್ಮ ಸಂಗಡಿಗ ನಿಮ್ಮ ಮೇಲೆ ಹೇಗೆ ಜಾದೂ ಮಾಡಿದ್ದಾನೆ ಎಂದು ನೋಡಿರಿ. ಆಗ ಜನರೆಲ್ಲರೂ ಹೊರಟು ಹೋದರು. ಹಝ್ರತ್ ಪೈಗಂಬರರಿಗೆ(ಸ) ಅವರೊಡನೆ ಮಾತನಾಡಲು ಸಾಧ್ಯವಾಗಲಿಲ್ಲ. ಮರುದಿನ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಲಿ, ನಿನ್ನೆ ನೀನು ತಯಾರು ಮಾಡಿದ ರೀತಿಯಲ್ಲೇ ಇಂದು ಸಹ ಊಟ ಮತ್ತು ಪಾನೀಯವನ್ನು ತಯಾರು ಮಾಡು. ನಾನು ಹಾಗೆಯೇ ಮಾಡಿದೆ. ಅನಂತರ ನಾನು ಆ ಜನರನ್ನು ಆಮಂತ್ರಿಸಿದೆ. ಹಝ್ರತ್ ಪೈಗಂಬರ್(ಸ) ಹಿಂದಿನ ದಿನ ಮಾಡಿದ ಹಾಗೆಯೇ ಅಂದೂ ಮಾಡಿದರು. ಅನಂತರ ಆ ಜನರು ಹೊಟ್ಟೆ ತುಂಬ ತಿಂದು ಕುಡಿದರು. ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬ್ದುಲ್ ಮುತಲಿಬರ ಮಕ್ಕಳೇ, ನಾನು ನಿಮ್ಮ ಬಳಿಗೆ ತಂದಿರುವ ಸಂಗತಿಗಿಂತ ಉತ್ತಮವಾದ ಸಂಗತಿಯನ್ನು ಅರೇಬಿಯಾದ ಯಾರಾದರೂ ತನ್ನ ಸಮುದಾಯಕ್ಕಾಗಿ ಕೊಂಡುಬಂದಿದ್ದರು ಎಂದು ನನಗೆ ಅನಸುವುದಿಲ್ಲ. ನಾನು ನಮಗಾಗಿ ಇಹಪರ ಲೋಕದ ಸಂಗತಿಯನ್ನು ತಂದಿದ್ದೇನೆ. ಇದಕ್ಕಾಗಿ ಯಾರು ನನಗೆ ನೆರವಾಗುವರು. ಹಝ್ರತ್ ಅಲಿ(ರ) ಹೇಳುತ್ತಾರೆ: ಆಗ ಎಲ್ಲರೂ ಸುಮ್ಮನಾದರು. ನಾನು ಎಲ್ಲರಿಗಿಂತ ಕಿರಿಯವನಾಗಿದ್ದರೂ ನಾನು ಹೇಳಿದೆ: ಯಾ ರಸೂಲಲ್ಲಾಹ್, ನಾನು ನಿಮಗೆ ನೆರವಾಗುವೆನು. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ–2, ಪುಟ–324, ದಆರುಲ್ ಕುತುಬ್ ಇಲ್‌ಮಿಯ ಬೈರೂತ್ 1993) (ಲುಗಾತುಲ್ ಹದೀಸ್, ಸಂಪುಟ–2, ಪುಟ–648)

ಸೀರತ್ ಖ಼ಾತಮುನ್ನಬಿಯ್ಯೀನಿನಲ್ಲಿ ಇದರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಹಝ್ರತ್ ಅಲಿಯರೊಡನೆ(ರ) ಹಝ್ರತ್ ಪೈಗಂಬರ್(ಸ) ಹೇಳಿದರು: ಔತಣದ ವ್ಯವಸ್ಥೆಯನ್ನು ಮಾಡು. ಅದರಲ್ಲಿ ಅಬ್ದುಲ್ ಮುತ್ತಲಿಬರ ಕುಟುಂಬದವರನ್ನು ಆಮಂತ್ರಿಸು. ಆ ಮೂಲಕ ಅವರಿಗೆ ಸತ್ಯದ ಸಂದೇಶವನ್ನು ತಲುಪಿಸೋಣ. ಹೀಗೆ ಹಝ್ರತ್ ಅಲಿ(ರ) ಸತ್ಕಾರ ಕೂಟದ ಏರ್ಪಾಡನ್ನು ಮಾಡಿದರು ಮತ್ತು ಹಝ್ರತ್ ಪೈಗಂಬರ್(ಸ) ತಮ್ಮೆಲ್ಲ ನಿಕಟ ಸಂಬಂಧಿಕರಾದ ಸುಮಾರು ನಲ್ವತ್ತು ವ್ಯಕ್ತಿಗಳನ್ನು ಔತಣಕ್ಕಾಗಿ ಕರೆದರು. ಅವರು ಊಟ ಮುಗಿಸಿದಾಗ, ಅವರೊಡನೆ ಕೆಲವು ಮಾತುಗಳನ್ನು ಹೇಳಲು ಬಯಸಿದರು. ಆದರೆ ನತದೃಷ್ಟನಾದ ಅಬೂಲಹಬ್ ಏನೋ ಮಾತು ಹೇಳಿದ ಕಾರಣದಿಂದ ಎಲ್ಲರು ಅಲ್ಲಿಂದ ಹೊರಟುಹೋದರು. ಅನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಯೊಡನೆ(ರ) ಹೇಳಿದರು: ಈ ಅವಕಾಶ ಕೈಬಿಟ್ಟುಹೋಯಿತು. ಆದರೆ ಪುನಃ ಔತಣದ ಏರ್ಪಾಡನ್ನು ಮಾಡು. ಹೀಗೆ ಹಝ್ರತ್ ಪೈಗಂಬರರ(ಸ) ಸಂಬಂಧಿಕರು ಪುನಃ ಒಟ್ಟುಸೇರಿದರು. ಹಝ್ರತ್ ಪೈಗಂಬರ್(ಸ) ಅವರನ್ನು ಸಂಬೋಧಿಸುತ್ತಾ ಹೀಗೆ ಹೇಳಿದರು: ಎಲೈ ಅಬ್ದುಲ್ ಮುತ್ತಲಿಬರ ಮಕ್ಕಳೇ, ತನ್ನ ಗೋತ್ರದ ಬಳಿ ಯಾರೂ ತಂದಿರದಂಥ ಉತ್ತಮ ಸಂಗತಿಯನ್ನು ನಿಮ್ಮ ಬಳಿಗೆ ನಾನು ತಂದಿರುವೆನು. ನಾನು ನಿಮ್ಮನ್ನು ಅಲ್ಲಾಹನ ಕಡೆಗೆ ಕರೆಯುತ್ತಿದ್ದೇನೆ. ನೀವು ನನ್ನ ಮಾತನ್ನು ಸಮ್ಮತಿಸಿದರೆ, ನೀವು ಇಹಪರಲೋಕಗಳ ಅತ್ಯುತ್ತಮ ಅನುಗ್ರಹಗಳ ವಾರಸುದಾರರಾಗುವಿರಿ. ಈ ಕೆಲಸದಲ್ಲಿ ಯಾರು ನನ್ನ ಸಹಾಯಕರಾಗುವರು ಎಂದು ಈಗ ಹೇಳಿರಿ. ಎಲ್ಲರೂ ಸುಮ್ಮನಿದ್ದರು. ಸಭೆಯ ಎಲ್ಲ ಕಡೆ ಮೌನ ಆವರಿಸಿತ್ತು. ಒಂದೇ ಸವನೇ, ಒಂದು ಕಡೆಯಿಂದ ಹದಿಮೂರು ವಯಸ್ಸಿನ ಒಬ್ಬ ತೆಳ್ಳಗಿನ ಹುಡುಗ ಕಣ್ಣೀರು ಸುರಿಸುತ್ತಾ ಎದ್ದುನಿಂತು ಹೀಗೆ ಹೇಳಿದನು: ನಾನು ಎಲ್ಲರಿಗಿಂತ ದುರ್ಬಲನೂ ಎಲ್ಲರಿಗಿಂತ ಕಿರಿಯವನೂ ಆಗಿರುವೆನಾದರೂ, ನಾನು ನಿಮಗೆ ನೆರವಾಗುವೆನು. ಅದು ಹಝ್ರತ್ ಅಲಿಯ ಸ್ವರವಾಗಿತ್ತು. ಹಝ್ರತ್ ಅಲಿಯ ಈ ಮಾತುಗಳನ್ನು ಕೇಳಿದ ಹಝ್ರತ್ ಪೈಗಂಬರ್(ಸ) ತನ್ನ ಸಂಬಂಧಿಕರನ್ನು ನೋಡಿ ಹೇಳಿದರು: ನೀವು ತಿಳುವಳಿಕೆಯುಳ್ಳವರಾಗಿದ್ದರೆ, ಈ ಹುಡುಗನ ಮಾತನ್ನು ಕೇಳಿರಿ ಮತ್ತು ಅದನ್ನು ಅಂಗೀಕರಿಸಿರಿ. ಈ ದೃಶ್ಯದಿಂದ ಪಾಠ ಕಲಿಯುವುದಕ್ಕೆ ಬದಲಾಗಿ, ಎಲ್ಲರೂ ಗಹಗಹಿಸಿ ನಕ್ಕರು. ಅಬೂಲಹಬ್ ತನ್ನ ಹಿರಿಯ ಸಹೋದರನಾದ ಅಬೂತಾಲಿಬ್‌ರೊಡನೆ ಹೀಗೆ ಹೇಳಿದ: ನೀವು ನಿಮ್ಮ ಮಕ್ಕಳನ್ನು ಅನುಸರಿಸಲು ಈಗ ಮುಹಮ್ಮದ್ ಹೇಳುತ್ತಿದ್ದಾನೆ. ಅನಂತರ ಅವರೆಲ್ಲ ಇಸ್ಲಾಂ ಮತ್ತು ಹಝ್ರತ್ ಪೈಗಂಬರರ(ಸ) ದೌರ್ಬಲ್ಯದ ಮೇಲೆ ನಗಾಡುತ್ತಾ ಅಲ್ಲಿಂದ ಹೊರಟುಹೋದರು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್, ಪುಟ–128–129)

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯನ್ನು ಹೀಗೆ ಪ್ರಸ್ತಾಪಿಸಿರುವರು: ಹಝ್ರತ್ ಅಲಿ(ರ) ಧರ್ಮದ ನೆರವಿಗಾಗಿ ನಿಂತಾಗ, ಅವರಿಗೆ ಆಗ ಹನ್ನೊಂದು ವರ್ಷ ಪ್ರಾಯವಿದ್ದಿತ್ತು. ಹಝ್ರತ್ ಪೈಗಂಬರರಿಗೆ(ಸ) ದಿವ್ಯವಾಣಿ ಅವತೀರ್ಣವಾದಾಗ, ಅವರು ಒಂದು ಔತಣವನ್ನು ಏರ್ಪಡಿಸಿದರು. ಅದರಲ್ಲಿ ಮಕ್ಕದ ಎಲ್ಲ ಹಿರಿಯ ಸರದಾರರನ್ನು ಕರೆದರು. ಅವರಿಗೆ ಊಟ ನೀಡಿದರು. ಅನಂತರ ಅವರು ನಿಂತುಕೊಂಡು ಹೇಳಿದರು: ನಾನು ನನ್ನ ವಾದದ ಬಗ್ಗೆ ಸ್ವಲ್ಪ ಹೇಳಲು ಬಯಸುತ್ತಿದ್ದೇನೆ. ಆಗ ಎಲ್ಲರೂ ಎದ್ದು ಓಡಿಹೋದರು. ಇದನ್ನು ನೋಡಿ ಹಝ್ರತ್ ಅಲಿ(ರ) ಹಝ್ರತ್ ಪೈಗಂಬರರ(ಸ) ಬಳಿಗೆ ಬಂದು ಹೀಗೆ ಹೇಳಿದರು: ಹೇ ಸಹೋದರ, ನೀವು ಏನು ಮಾಡಿದ್ದೀರಿ. ಇವರು ಲೌಕಿಕ ಜನರಾಗಿರುವರು. ಇವರೊಡನೆ ಮೊದಲು ಮಾತನಾಡಿದ ನಂತರ ಊಟ ನೀಡಬೇಕಾಗಿತ್ತು. ಆ ಅವಿಶ್ವಾಸಿಗಳು ಊಟ ಮಾಡಿ ಓಡಿಹೋದರು. ಅವರು ಊಟ ಪ್ರಿಯರು. ನೀವು ಮೊದಲು ಮಾತನಾಡುವವರಾದರೆ, ಎರಡು ಗಂಟೆಗಳ ಕಾಲ ಮಾತನಾಡಿದರೂ ಖಂಡಿತ ಅವರು ಇಲ್ಲೇ ಕುಳಿತುಕೊಳ್ಳುತ್ತಿದ್ದರು. ಅನಂತರ ಅವರಿಗೆ ಊಟ ಬಡಿಸಬೇಕು. ಅನಂತರ ಹಝ್ರತ್ ಪೈಗಂಬರ್(ಸ) ಹಾಗೆಯೇ ಮಾಡಿದರು. ಅವರನ್ನು ಪುನಃ ಔತಣಕ್ಕಾಗಿ ಕರೆದರು. ಮೊದಲು ಸ್ವಲ್ಪ ಸಂಗತಿಗಳನ್ನು ಹೇಳಿದರು ಅನಂತರ ಊಟ ಕೊಟ್ಟರು. ಅನಂತರ ಹಝ್ರತ್ ಪೈಗಂಬರ್(ಸ) ನಿಂತುಕೊಂಡು ಹೇಳಿದರು: ಹೇ ಜನರೇ, ನಾನು ನಿಮಗೆ ಅಲ್ಲಾಹನ ಮಾತುಗಳನ್ನು ಹೇಳಿಕೊಟ್ಟಿರುವೆನು. ಈ ಕೆಲಸಕ್ಕಾಗಿ ಯಾರು ನನಗೆ ನೆರವಾಗುವರು? ಮಕ್ಕದ ಎಲ್ಲ ಹಿರಿಯ ಜನರು ಕುಳಿತುಕೊಂಡೇ ಇದ್ದರು. ಕೇವಲ ಹಝ್ರತ್ ಅಲಿ(ರ) ನಿಂತುಕೊಂಡು ಹೇಳಿದರು: ಹೇ ನನ್ನ ಚಿಕ್ಕಪ್ಪನ ಪುತ್ರಾ, ನಾನು ನಿಮ್ಮ ಸಹಾಯಕನಾಗುವೆನು. ಹಝ್ರತ್ ಅಲಿ(ರ) ಹುಡುಗನಾಗಿದ್ದ ಕಾರಣದಿಂದ ಹಝ್ರತ್ ಪೈಗಂಬರ್(ಸ) ಪುನಃ ನಿಂತುಕೊಂಡು ಹೇಳಿದರು: ಜನರೇ, ನಿಮ್ಮಲ್ಲಿ ಯಾರಾದರೂ ನನಗೆ ನೆರವಾಗುವರು ಇದ್ದಾರೆಯೇ? ಆಗಲೂ ವಯಸ್ಕರಾದ ಎಲ್ಲರೂ ಕುಳಿತುಕೊಂಡೇ ಇದ್ದರು. ಹನ್ನೊಂದು ವರ್ಷದ ಆ ಹುಡುಗ ಎದ್ದುಕೊಂಡು ಹೇಳಿದನು: ಹೇ ನನ್ನ ಚಿಕ್ಕಪ್ಪನ ಪುತ್ರಾ, ನಾನು ನಿಮಗೆ ನೆರವಾಗುವೆನು. ಆಗ ಅಲ್ಲಾಹನ ಸನ್ನಿಧಿಯಲ್ಲಿ ಈ ಹನ್ನೊಂದು ವರ್ಷದ ಹುಡುಗನೇ ಯುವಕನಾಗಿರುವನು, ಈ ಹುಡುಗನೇ ಬುದ್ಧಿವಂತನು. ಇತರರೆಲ್ಲರೂ ವೃದ್ಧರೂ ಮಕ್ಕಳು ಆಗಿದ್ದಾರೆ, ಅವರೊಳಗೆ ಯಾವುದೇ ಶಕ್ತಿಯಿಲ್ಲ ಎಂದು ಹಝ್ರತ್ ಪೈಗಂಬರ್(ಸ) ಮನವರಿಕೆ ಮಾಡಿದರು. ಹೀಗೆ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಯನ್ನು(ರ) ತನ್ನೊಂದಿಗೆ ಸೇರಿಸಿದರು. ಹೀಗೆ ಅದೇ ಅಲಿ(ರ) ಹಝ್ರತ್ ಪೈಗಂಬರರೊಡನೆ(ಸ) ಕೊನೆಯ ವರೆಗೂ ಇದ್ದರು. ಅನಂತರ ಪೈಗಂಬರರ(ಸ) ಖ಼ಲೀಫ ಸಹ ಆದರು. ಅವರು ಧರ್ಮಕ್ಕೆ ತಳಹದಿ ಹಾಕಿದರು. ಅದೇ ರೀತಿಯಲ್ಲಿ ಅವರ ಮಕ್ಕಳನ್ನು ಸಹ ಅಲ್ಲಾಹನು ಪುಣ್ಯವಂತರನ್ನಾಗಿ ಮಾಡಿದನು. ಹನ್ನೆಡರು ಪೀಳಿಗೆ ವರೆಗೆ ನಿರಂತರವಾಗಿ ಅವರಲ್ಲಿ ಹನ್ನೆರಡು ಇಮಾಮರು ಜನಿಸಿದರು. (ಉದ್ಘಾಟನ ಭಾಷಣ ಜಲ್ಸ ಸಾಲಾನ 1955, ಅನ್ವಾರುಲ್ ಉಲೂಮ್ ಸಂಪುಟ–25, ಪುಟ–187–188)

ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಕಡೆ ಹಝ್ರತ್ ಅಲಿಯ(ರ) ಬಗ್ಗೆ ಪ್ರಸ್ತಾಪಿಸುತ್ತಾ ಹೇಳುತ್ತಾರೆ:

ಹಝ್ರತ್ ಅಲಿ(ರ) ವಿಶ್ವಾಸ ಕೈಗೊಂಡಾಗ, ಅವರು ಸಣ್ಣ ಹುಡುಗರಾಗಿದ್ದರು. ಇಸ್ಲಾಮಿಗಾಗಿ ಎಲ್ಲ ರೀತಿಯ ಕಷ್ಟತೆಗಳನ್ನು ಸಹಿಸಬೇಕಾಗಿ ಬರುವುದು ಎಂದು ಅರಿತುಕೊಂಡೇ ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದರು. ಸಣ್ಣ ಹುಡುಗರಾಗಿದ್ದರು. ಆದರೆ, ತ್ಯಾಗಗಳನ್ನು ಮಾಡಬೇಕಾಗಿ ಬರುವುದು, ಜೀವ ತ್ಯಾಗಮಾಡಬೇಕಾಗಿ ಬರುವ ಸಂದರ್ಭ ಬಂದರೆ, ತನ್ನ ಜೀವವನ್ನು ಕೂಡ ಅಲ್ಲಾಹನ ಮಾರ್ಗದಲ್ಲಿ ಸಮರ್ಪಿಸಿಬೇಕಾಗಿ ಬರುವುದು ಎಂದು ತಿಳಿದುಕೊಂಡೇ ವಿಶ್ವಾಸ ಕೈಗೊಂಡಿದ್ದರು. ಹದೀಸುಗಳಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ) ತನ್ನ ಪ್ರವಾದಿತ್ವದ ಆರಂಭ ಕಾಲದಲ್ಲಿ, ಸತ್ಯದ ಸಂದೇಶ ತಲುಪಿಸುವ ಸಲುವಾಗಿ ಒಂದು ಔತಣವನ್ನು ಏರ್ಪಡಿಸಿ, ಅಬ್ದುಲ್ ಮುತಲಿಬ್‌ರ ಕುಟುಂಬದವರನ್ನು ಆಮಂತ್ರಿಸಿದರು. ಹಲವಾರು ಸಂಬಂಧಿಕರು ಈ ಔತಣಕ್ಕೆ ಬಂದಿದ್ದರು. ಎಲ್ಲರೂ ಊಟ ಮಾಡಿದ ನಂತರ ಹಝ್ರತ್ ಪೈಗಂಬರ್(ಸ) ನಿಂತುಕೊಂಡು ಭಾಷಣ ಮಾಡಲು ಇಚ್ಛಿಸಿದರು. ಆದರೆ ಅಬೂಲಹಬ್ ಎಲ್ಲರನ್ನು ಚದುರಿಸಿದನು. ಹೀಗೆ ಎಲ್ಲರೂ ಹಝ್ರತ್ ಪೈಗಂಬರರ(ಸ) ಮಾತನ್ನು ಕೇಳದೆ ತಮ್ಮ ತಮ್ಮ ಮನೆಗಳಿಗೆ ಹೋದರು. ಊಟ ಸಹ ಮಾಡಿಕೊಂಡು ಮಾತನ್ನು ಕೇಳಲು ಅವರು ತಯಾರಿಲ್ಲದ್ದನ್ನು ಕಂಡು ಹಝ್ರತ್ ಪೈಗಂಬರ್(ಸ) ಅಚ್ಚರಿಗೊಂಡರು. ಆದರೆ ಹಝ್ರತ್ ಪೈಗಂಬರ್(ಸ) ನಿರಾಶೆಗೊಳ್ಳಲಿಲ್ಲ. ಪುನಃ ಅವರನ್ನು ಊಟಕ್ಕಾಗಿ ಆಮಂತ್ರಿಸಲು ಹಝ್ರತ್ ಅಲಿಯೊಡನೆ(ರ) ಹಝ್ರತ್ ಪೈಗಂಬರ್(ಸ) ಹೇಳಿದರು. ಹೀಗೆ ಅವರೆನ್ನೆಲ್ಲ ಊಟಕ್ಕಾಗಿ ಆಮಂತ್ರಿಸಲಾಯಿತು. ಅವರು ಬೇಕಾದಷ್ಟು ತಿಂದ ನಂತರ, ಹಝ್ರತ್ ಪೈಗಂಬರ್(ಸ) ನಿಂತುಕೊಂಡು ಹೇಳಿದರು: ಅಲ್ಲಾಹನ ತನ್ನ ಪ್ರವಾದಿಯನ್ನು ನಿಮ್ಮೊಳಗಿಂದಲೇ ಕಳುಹಿಸಿದ್ದಾನೆ ಎಂಬುದು ಅವನ ಎಷ್ಟು ದೊಡ್ಡ ಔದಾರ್ಯವಾಗಿದೆ ಎಂದು ನೋಡಿರಿ. ನಾನು ನಿಮ್ಮನ್ನು ಅಲ್ಲಾಹನ ಕಡೆಗೆ ಕರೆಯುತ್ತಿದ್ದೇನೆ. ನೀವು ನನ್ನ ಮಾತನ್ನು ಅಂಗೀಕರಿಸಿದರೆ, ನೀವು ಧಾರ್ಮಿಕ ಮತ್ತು ಲೌಕಿಕ ಅನುಗ್ರಹಗಳ ವಾರಸುದಾರರಾಗುವಿರಿ. ನಿಮ್ಮಲ್ಲಿ ನನಗೆ ನೆರವಾಗುವವರು ಯಾರಾದರೂ ಇದ್ದಾರೆಯೇ? ಇದನ್ನು ಕೇಳಿದಾಗ, ಸಭೆಯಲ್ಲಿ ಮೌನ ಸ್ಮಶಾನದ ಸ್ಥಿತಿಯುಂಟಾಯಿತು. ಆದರೆ, ಒಂದೇ ಸವನೇ ಒಂದು ಮೂಲೆಯಿಂದ ಒಂದು ಬಾಲಕ ಎದ್ದು ಹೇಳಿದನು: ನಾನು ಅತ್ಯಂತ ದುರ್ಬಲ ವ್ಯಕ್ತಿಯೂ ನಿಮ್ಮಲ್ಲಿ ಅತ್ಯಂತ ಕಿರಿಯವನೂ ಆಗಿರುವೆನಾದರೂ ನಾನು ನಿಮಗೆ ನೆರವಾಗುವೆನು. ಆ ಬಾಲಕ ಹಝ್ರತ್ ಅಲಿ(ರ) ಆಗಿದ್ದರು. ಅವರು ಆಗ ಇಸ್ಲಾಮಿನ ನೆರವು ಮಾಡುವುದಾಗಿ ಘೋಷಿಸಿದರು. (ತಫ್‌ಸೀರೆ ಕಬೀರ್, ಸಂಪುಟ–7, ಪುಟ–24–25)

ಹಝ್ರತ್ ಪೈಗಂಬರರ(ಸ) ಹಿಜ್ರತಿನ ಸಮಯದಲ್ಲಿ ಹಝ್ರತ್ ಅಲಿ(ರ) ಮಾಡಿದ ತ್ಯಾಗದ ಘಟನೆಯ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ: ಮಕ್ಕಾ ನಿವಾಸಿಗಳು ಪರಸ್ಪರ ಸಮಾಲೋಚಿಸಿ ಹಝ್ರತ್ ಪೈಗಂಬರರ(ಸ) ಮನೆಯ ಮೇಲೆ ಆಕ್ರಮಣ ನಡೆಸಿಕೊಂಡು ಹಝ್ರತ್ ಪೈಗಂಬರರನ್ನು ಸೆರೆ ಹಿಡಿಯಲು ಅಥವಾ ಕೊಲ್ಲಲ್ಲು ಯೋಜನೆ ಮಾಡಿದರು. ಆಗ ದಿವ್ಯವಾಣಿ ಮೂಲಕ ಹಝ್ರತ್ ಪೈಗಂಬರರಿಗೆ(ಸ) ಶತ್ರುಗಳ ಈ ದುರುದ್ದೇಶದ ಬಗ್ಗೆ ಅರಿವು ಸಿಕ್ಕಿತು. ಅಲ್ಲಾಹನು ಹಝ್ರತ್ ಪೈಗಂಬರರಿಗೆ(ಸ) ಮದೀನ ಹಿಜ್ರತ್ ಮಾಡಲು ಅನುಮತಿ ಕೊಟ್ಟನು. ಆಗ ಹಝ್ರತ್ ಪೈಗಂಬರ್(ಸ) ವಲಸೆ ಹೋಗಲು ತಯಾರಿ ಮಾಡಿದರು ಮತ್ತು ರಾತ್ರಿ ಹಝ್ರತ್ ಪೈಗಂಬರರ(ಸ) ಹಾಸಿಗೆಯಲ್ಲಿ ಮಲಗಲು ಹಝ್ರತ್ ಅಲಿಯೊಡನೆ ಹೇಳಿದರು. ಹಝ್ರತ್ ಪೈಗಂಬರರ(ಸ) ಕೆಂಪು ಬಣ್ಣದ ಹೊದಿಕೆಯನ್ನು ಹೊದ್ದುಕೊಂಡು ಹಝ್ರತ್ ಅಲಿ(ರ) ರಾತ್ರಿ ಕಳೆದರು.
(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–1, ಪುಟ–176, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಪೈಗಂಬರರಿಗಾಗಿ(ಸ) ಹೊಂಚುಹಾಕುತ್ತಾ ಮುಶ್ರಿಕರ ಸಂಘ ಅಲ್ಲಿ ಕುಳಿತುಕೊಂಡಿತ್ತು. ಅವರು ಬೆಳಿಗ್ಗೆ ಹಝ್ರತ್ ಪೈಗಂಬರರ(ಸ) ಮನೆಗೆ ಪ್ರವೇಶಿಸಿದರು. ಹಝ್ರತ್ ಅಲಿ(ರ) ಹಾಸಿಗೆಯಿಂದ ಎದ್ದರು. ಹಝ್ರತ್ ಅಲಿ(ರ) ಸಮೀಪಕ್ಕೆ ಬಂದಾಗ, ಜನರು ಅವರನ್ನು ಗುರುತಿಸಿದರು. ಸಂಗಡಿಗ ಎಲ್ಲಿದ್ದಾರೆಂದು ಅವರು ಕೇಳಿದರು. ಹಝ್ರತ್ ಅಲಿ(ರ) ಹೇಳಿದರು: ನನಗೇನು ಗೊತ್ತು? ನಾನು ಹಝ್ರತ್ ಪೈಗಂಬರರ(ಸ) ಮೇಲ್ನೋಟಗಾರನಲ್ಲ. ನೀವು ಅವರೊಡನೆ ಮಕ್ಕದಿಂದ ಹೊರಟುಹೋಗಲು ಹೇಳಿದ್ದೀರಿ. ಅವರು ಹೊರಟು ಹೋದರು. ಮುಶ್ರಿಕರು ಹಝ್ರತ್ ಅಲಿಯನ್ನು(ರ) ಬೈದರು ಮತ್ತು ಹೊಡೆದರು. ಕಅ್‌ಬದ ಬಳಿಗೆ ಕೊಂಡುಹೋದರು. ಸ್ವಲ್ಪ ಸಮಯ ಬಂಧಿಸಿಟ್ಟರು. ಅನಂತರ ಬಿಟ್ಟರು. (ತಾರೀಖ್ ತಿಬರಿ ಸಂಪುಟ–2, ಪುಟ–256, ದಾರುಲ್ ಫಿಕರ್ ಬೈರೂತ್ 2002)

ಮತ್ತೊಂದು ಚರಿತ್ರೆಯ ಪುಸ್ತಕದಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಪೈಗಂಬರರ(ಸ) ನಿರ್ದೇಶನದ ಪ್ರಕಾರ ಹಝ್ರತ್ ಅಲಿ(ರ) ಮೂರು ದಿನಗಳ ನಂತರ ಮಕ್ಕಾ ನಿವಾಸಿಗಳ ಅಮಾನತುಗಳನ್ನು ಮರಳಿಕೊಟ್ಟು, ಹಿಜ್ರತ್ ಮಾಡಿ ಹಝ್ರತ್ ಪೈಗಂಬರರ(ಸ) ಬಳಿಗೆ ತಲುಪಿದರು. ಹಝ್ರತ್ ಪೈಗಂಬರರೊಂದಿಗೆ(ಸ), ಖುಬಾ ಉಮ್ಮೇ ಕುಲ್‌ಸೂಮ್ ಬಿನ್ ಹದಮ್‌ರ ಬಳಿ ತಂಗಿದರು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ–348, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಿಜ್ರತ್ ಸಂದರ್ಭದ ಘಟನೆಯನ್ನು ವಿವರಿಸುತ್ತಾ ಸೀರತ್ ಖ಼ಾತಮುನ್ನಬಿಯ್ಯೀನನಲ್ಲಿ ಹೀಗೆ ಬರೆಯಲಾಗಿದೆ: ರಾತ್ರಿಯ ಅಂಧಕಾರದ ಸಮಯವಾಗಿತ್ತು. ವಿವಿಧ ಗೋತ್ರಗಳಿಗೆ ಸಂಬಂಧಪಟ್ಟ ಖುರೈಶಿಗಳೂ ತಮ್ಮ ರಕ್ತಸಿಕ್ತ ಉದ್ದೇಶದೊಂದಿಗೆ ಹಝ್ರತ್ ಪೈಗಂಬರರ(ಸ) ಮನೆಯ ಸುತ್ತಮುತ್ತ ಒಟ್ಟು ಸೇರಿಕೊಂಡು ಹಝ್ರತ್ ಪೈಗಂಬರರ(ಸ) ಮನೆಗೆ ಮುತ್ತಿಗೆ ಹಾಕಿದ್ದರು. ಬೆಳಿಗ್ಗೆ ಆಗಲು ಅಥವಾ ಹಝ್ರತ್ ಪೈಗಂಬರ್(ಸ) ತನ್ನ ಮನೆಯಿಂದ ಹೊರಗೆ ಬರುವಾಗ, ಒಂದೇ ಸವನೇ ಹಲ್ಲೆ ನಡೆಸಿ ಕೊಲ್ಲಲ್ಲು ಕಾಯುತ್ತಿದ್ದರು. ಹಝ್ರತ್

ಪೈಗಂಬರರ(ಸ) ಬಳಿ ಕೆಲವು ಕುಫ್ಫಾರ್‌ಗಳ ಅಮಾನತುಗಳು ಇದ್ದುವು. ತೀವ್ರವಾದ ವಿರೋಧವಿದ್ದರೂ, ಹೆಚ್ಚಿನ ಜನರು ತಮ್ಮ ಅಮಾನತ್ತುಗಳನ್ನು ಹಝ್ರತ್ ಪೈಗಂಬರರ(ಸ) ಸತ್ಯತೆ ಮತ್ತು ಪ್ರಾಮಾಣಿಕತೆಯ ಕಾರಣದಿಂದ ಅವರ ಬಳಿ ಇರಿಸುತ್ತಿದ್ದರು. ಹೀಗೆ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಗೆ(ರ) ಆ ಅಮಾನತುಗಳ ಲೆಕ್ಕವನ್ನು ಹೇಳಿಕೊಟ್ಟರು. ಅಮಾನತುಗಳನ್ನು ಮರಳಿಕೊಡದೆ, ಮಕ್ಕದಿಂದ ಹೊರಡಬೇಡ ಎಂದು ತಾಕೀತು ಮಾಡಿದರು. ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ನನ್ನ ಹಾಸಿಗೆಯಲ್ಲಿ ಮಲಗು, ಅಲ್ಲಾಹನ ಕೃಪೆಯಿಂದ ಏನು ಹಾನಿ ಆಗಲಿಕ್ಕಿಲ್ಲ ಎಂದು ಅವರನ್ನು ಸಮಾಧಾನ ಪಡಿಸಿದರು. ಹಝ್ರತ್ ಅಲಿ(ರ) ಅಲ್ಲಿ ಮಲಗಿದರು. ಹಝ್ರತ್ ಪೈಗಂಬರ್(ಸ) ತನ್ನ ಕೆಂಪು ಬಣ್ಣದ ಚಾದರವನ್ನು ಹಝ್ರತ್ ಅಲಿಗೆ(ರ) ಹೊದಿಸಿದರು. ಅನಂತರ ಹಝ್ರತ್ ಪೈಗಂಬರ್(ಸ) ಅಲ್ಲಾಹನ ನಾಮ ಉಚ್ಚರಿಸುತ್ತಾ ತನ್ನ ಮನೆಯಿಂದ ಹೊರಟುಹೋದರು. ಆ ಸಮಯದಲ್ಲಿ ಮುತ್ತಿಗೆ ಹಾಕಿದವರು ಬಾಗಿಲ ಮುಂದೆ ಇದ್ದರು. ಆದರೆ, ಹಝ್ರತ್ ಪೈಗಂಬರ್(ಸ) ರಾತ್ರಿಯ ಆರಂಭ ಸಮಯದಲ್ಲೇ ಮನೆಯಿಂದ ಹೊರಟು ಹೋಗುವರು ಎಂದು ಅವರು ಭಾವಿಸಿರಲಿಲ್ಲ. ಶತ್ರುಗಳು ಎಷ್ಟು ಅಲಕ್ಷ್ಯರಾಗಿ ಇದ್ದರು ಎಂದರೆ, ಹಝ್ರತ್ ಪೈಗಂಬರ್(ಸ) ಅವರ ಕಣ್ಣುಗಳಿಗೆ ಹುಡಿ ಹಾಕುತ್ತಾ ಅವರ ಮಧ್ಯೆದಿಂದಲೇ ಹೊರಟುಹೋದರು ಆದರೆ ಅವರಿಗೆ ಗೊತ್ತೇ ಆಗಲಿಲ್ಲ. ಅದೇ ವೇಳೆ ಹಝ್ರತ್ ಪೈಗಂಬರ್(ಸ) ಮೌನವಾಗಿ, ಆದರೆ ಬೇಗಬೇಗನೇ ಮಕ್ಕದ ಗಲ್ಲಿಗಳಿಂದ ದಾಟು ಹೋಗುತ್ತಿದ್ದರು. ಸ್ವಲ್ಪ ಸಮಯದಲ್ಲಿ ಅವರು ಜನನಿಬಿಡ ಪ್ರದೇಶದಿಂದ ದೂರಕ್ಕೆ ಹೋಗಿದ್ದರು ಮತ್ತು ಸೌರ್ ಗುಹೆಯ ಕಡೆಗೆ ಹೋದರು. ಹಝ್ರತ್ ಅಬೂಬಕರ್‌ರೊಡನೆ(ರ) ಮೊದಲೇ ಎಲ್ಲ ಸಂಗತಿಗಳ ಬಗ್ಗೆ ನಿರ್ಣಯಿಸಲಾಗಿತ್ತು. ಅವರು ಸಹ ಮಾರ್ಗ ಮಧ್ಯೆ ಭೇಟಿಯಾದರು. ಈ ಘಟನೆಯ ಕಾರಣದಿಂದ ಸೌರ್ ಗುಹೆಯನ್ನು ಇಸ್ಲಾಮಿನಲ್ಲಿ ಒಂದು ಪರಿಶುದ್ಧ ಸ್ಮರಣೆಯಾಗಿ ಕಾಣಲಾಗುತ್ತದೆ. ಮಕ್ಕದ ದಕ್ಷಿಣ ದಿಕ್ಕಿನಲ್ಲಿ, ಎಂದರೆ, ಮದೀನಕ್ಕೆ ವಿರುದ್ಧ ದಿಕ್ಕಿನಲ್ಲಿ ಮೂರು ಮೈಲು ದೂರದಲ್ಲಿ ಒಂದು ಬಂಜರು ಪರ್ವತದ ಮೇಲೆ ತುಂಬ ಎತ್ತರದಲ್ಲಿ ಈ ಗುಹೆಯಿದೆ. ಅಲ್ಲಿಗೆ ಹೋಗುವ ಮಾರ್ಗವೂ ಬಹಳ ದುರ್ಗಮವಾದುದಾಗಿದೆ. ಅಲ್ಲಿಗೆ ತಲುಪಿದ ನಂತರ ಮೊದಲು ಹಝ್ರತ್ ಅಬೂಬಕ್ಕರ್(ರ) ಒಳಗೆ ಹೋಗಿ ಜಾಗವನ್ನು ಸ್ವಚ್ಛಗೊಳಿಸಿದರು. ಅನಂತರ ಹಝ್ರತ್ ಪೈಗಂಬರ್(ಸ) ಸಹ ಒಳಗೆ ಹೋದರು. ಇನ್ನೊಂದು ಕಡೆ, ಖುರೈಶಿಗಳು ಹಝ್ರತ್ ಪೈಗಂಬರರ(ಸ) ಮನೆಯನ್ನು ಸುತ್ತುವರೆದಿದ್ದರು. ಎಡೆಬಿಟ್ಟುಕೊಂಡು ಅವರು ಹಝ್ರತ್ ಪೈಗಂಬರರ(ಸ) ಮನೆಯ ಒಳಗೆ ಇಣುಕಿ ನೋಡುತ್ತಿದ್ದರು. ಅಲ್ಲಿ ಮಲಗಿದ್ದ ಹಝ್ರತ್ ಅಲಿಯನ್ನು(ರ) ಹಝ್ರತ್ ಪೈಗಂಬರ್(ಸ) ಎಂದು ಭಾವಿಸಿಕೊಂಡು ಸಮಾಧಾನ ಪಡುತ್ತಿದ್ದರು. ಆದರೆ ಬೆಳಿಗ್ಗೆಯಾದಾಗ, ಅವರ ಬೇಟೆ ಕೈಜಾರಿ ಹೋಯಿತೆಂದು ಅವರಿಗೆ ಗೊತ್ತಾಯಿತು.ಆಗ ಅವರು ಆಚೀಚೆ ಓಡಲು ತೊಡಗಿದರು. ಮಕ್ಕದ ಗಲ್ಲಿಗಳಲ್ಲಿ, ಸಹಾಬರ ಮನೆಗಳಲ್ಲಿ ಹುಡುಕಾಡಲು ತೊಡಗಿದರು. ಆದರೆ ಯಾವುದೇ ಸುಳಿವು ಸಿಗಲಿಲ್ಲ. ಕೋಪದಿಂದ ಅವರು ಹಝ್ರತ್ ಅಲಿಯನ್ನು(ರ) ಹಿಡಿದರು ಮತ್ತು ಸ್ವಲ್ಪ ಹೊಡೆದರು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್, ಪುಟ–236–237)

ಹಝ್ರತ್ ಅಲಿಯ(ರ) ತ್ಯಾಗದ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಮನೆಯಿಂದ ಹೊರಡುವಾಗ ಹಝ್ರತ್ ಅಲಿಯನ್ನು(ರ) ತನ್ನ ಹಾಸಿಗೆಯಲ್ಲಿ ಮಲಗಿಸಿದರು. ಮಂಚದ ವಾಡಿಕೆ ಆ ದಿನಗಳಲ್ಲಿ ಇದ್ದಿರಲಿಲ್ಲ. ಈಗಲೂ ಮಕ್ಕದಲ್ಲಿ ಮಂಚದ ರಿವಾಜಿಲ್ಲ. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಯನ್ನು(ರ) ಮಂಚದಲ್ಲಿ ಮಲಗಿಸಿದರು ಎಂದು ಕೆಲವು ವರದಿಗಳಲ್ಲಿ ತಪ್ಪಾಗಿ ಬಂದಿವೆ. ಹಝ್ರತ್ ಪೈಗಂಬರ್(ಸ) ಅವರ ಸಮೀಪದಿಂದ ದಾಟಿದಾಗ, ಅವರಲ್ಲಿ ಕೆಲವರು ಅವರನ್ನು ನೋಡಿದ್ದರು. ಆದರೆ ಅವರು ಹಝ್ರತ್ ಪೈಗಂಬರರನ್ನು(ಸ) ಭೇಟಿಯಾಗಲು ಬಂದು ಮರಳಿ ಹೋಗುವ ವ್ಯಕ್ತಿಯೆಂದು ಶತ್ರುಗಳು ಭಾವಿಸಿದರು. ಇದಕ್ಕೆ ಕಾರಣವೇನೆಂದರೆ, ಹಝ್ರತ್ ಪೈಗಂಬರ್(ಸ) ಬಹಳ ಧೈರ್ಯದಿಂದ ಮನೆಯಿಂದ ಹೊರಗೆ ಬಂದಿದ್ದರು. ಅವರೊಳಗೆ ಕಿಂಚಿತ್ತೂ ಭಯವಿದ್ದಿರಲಿಲ್ಲ. ಇಂತಹ ಸನ್ನಿವೇಶದಲ್ಲಿ ಇಷ್ಟು ಧೈರ್ಯದಿಂದ ಹಝ್ರತ್ ಪೈಗಂಬರ್(ಸ) ಹೊರಗೆ ಬರಲು ಸಾಧ್ಯವಿಲ್ಲವೆಂದೂ, ಹೊರಗೆ ಬಂದದ್ದು, ಹಝ್ರತ್ ಪೈಗಂಬರರನ್ನು ಭೇಟಿಯಾಗಲು ಬಂದಿದ್ದ ಬೇರೆ ಯಾರೋ ಆಗಿರಬಹುದೆಂದೂ ಅವರು ಭಾವಿಸಿದ್ದರು. ಅನಂತರ ಹೊರಗೆ ಹೋಗಿಲ್ಲವೆಂದು ಖಾತರಿಪಡಿಸಲು ಅವರು ಬಾಗಿಲಿನ ಬಿರುಕಿನ ಮುಖಾಂತರ ಒಳಗೆ ಇಣುಕಿ ನೋಡಿದರು. ಆಗ ಒಳಗೆ ಒಬ್ಬ ವ್ಯಕ್ತಿ ನಿದ್ದೆ ಮಾಡುತ್ತಿರುವುದಾಗಿ ಕಂಡರು. ಅವರು ಹಝ್ರತ್ ಪೈಗಂಬರರೇ ಆಗಿರುವರು ಎಂದು ಭಾವಿಸಿದ್ದರು. ಒಟ್ಟಿನಲ್ಲಿ, ರಾತ್ರಿ ಪೂರ್ತಿ ಹಝ್ರತ್ ಪೈಗಂಬರರ(ಸ) ಮನೆಯ ಹೊರಗೆ ಕಾವಲು ನಿಂತರು. ಅನಂತರ ಸರಿಯಾದ ಸಮಯವೆಂದು ತೋರಿದಾಗ ಒಳಗೆ ನುಗ್ಗಿದ್ದರು. ಬಹುಶಃ ಕೆಲವು ಸಮಯದ ನಂತರ ಅಲ್ಲಿರುವುದು ಹಝ್ರತ್ ಪೈಗಂಬರ್(ಸ) ಅಲ್ಲವೆಂಬ ಸಂಶಯ ಬಂದಿರಬಹುದು. ಹೇಗಿದ್ದರೂ ನಿದ್ದೆ ಮಾಡುತ್ತಿರುವ ವ್ಯಕ್ತಿ ಹಝ್ರತ್ ಪೈಗಂಬರ್(ಸ) ಅಲ್ಲ, ಹಝ್ರತ್ ಅಲಿಯೆಂದು ಅವರಿಗೆ ಗೊತ್ತಾಯಿತು. ಹಝ್ರತ್ ಪೈಗಂಬರ್(ಸ) ಕ್ಷೇಮವಾಗಿ ಅಲ್ಲಿಂದ ಹೊರಟು ಹೋಗಿರುವರು ಎಂದು ಅವರಿಗೆ ಗೊತ್ತಾಯಿತು. ಈಗ ಅವರ ಬಳಿ ಪರಾಜಯವಲ್ಲದೆ ಬೇರೆ ಏನೂ ಇದ್ದಿರಲಿಲ್ಲ. (ತಫ್‌ಸೀರೆ ಕಬೀರ್, ಸಂಪುಟ–8, ಪುಟ–510)

ಇನ್ನೊಂದು ಕಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಲ್ಲಾಹನು ಹಝ್ರತ್ ಅಲಿಗೆ(ರ) ಈ ಮಹತ್ತಾದ ತ್ಯಾಗವನ್ನು ಮಾಡಲು ಸೌಭಾಗ್ಯವನ್ನು ನೀಡಿದ್ದನು. ಹಝ್ರತ್ ಪೈಗಂಬರ್(ಸ) ಹಿಜ್ರತ್ ಮಾಡಲು ರಾತ್ರಿ ಸಮಯದಲ್ಲಿ ತನ್ನ ಮನೆಯಿಂದ ಹೊರಡಲು ಇಚ್ಛಿಸಿದಾಗ, ಹಝ್ರತ್ ಅಲಿಯೊಡನೆ(ರ) ಹೇಳಿದರು: ಸತ್ಯನಿಷೇಧಿಗಳು ಇಣುಕಿ ನೋಡುವರಾದರೆ, ಅವರಿಗೆ ಒಬ್ಬರು ಹಾಸಿಗೆಯಲ್ಲಿ ಮಲಗಿರುವುದು ಕಾಣುವಂತಾಗಲು ಮತ್ತು ಅವರು ಬೆನ್ನಟ್ಟಿ ಬರದಂತಾಗಲು ನೀನು ನನ್ನ ಹಾಸಿಗೆಯಲ್ಲಿ ಮಲಗು. ಆ ಸಂದರ್ಭದಲ್ಲಿ, ಯಾ ರಸೂಲಲ್ಲಾಹ್, ಮನೆಯ ಸುತ್ತಮುತ್ತ ಖುರೈಶಿನ ಪ್ರಮುಖ ಯುವಕರು ಕೈಯಲ್ಲಿ ಖಡ್ಗವನ್ನು ಹಿಡಿದು ನಿಂತಿದ್ದಾರೆ. ನೀವು ಬೇರೆ ಎಲ್ಲಿಗೋ ಹೋಗಿದ್ದೀರಿ ಎಂದು ಅವರಿಗೆ ಬೆಳಿಗ್ಗೆ ಗೊತ್ತಾದರೆ, ಅವರು ನನ್ನ ಮೇಲೆ ಹಲ್ಲೆ ನಡೆಸಿ ನನ್ನನ್ನು ಕೊಲ್ಲುವರು ಎಂದು ಹಝ್ರತ್ ಅಲಿ(ರ) ಹೇಳಲಿಲ್ಲ. ಬದಲಿಗೆ, ಬಹಳ ಸಮಾಧಾನದಿಂದ ಹಝ್ರತ್ ಪೈಗಂಬರರ(ಸ) ಹಾಸಿಗೆಯಲ್ಲಿ ಮಲಗಿದರು ಮತ್ತು ಹಝ್ರತ್ ಪೈಗಂಬರ್(ಸ) ತನ್ನ ಹೊದಿಕೆಯನ್ನು ಅವರ ಮೇಲೆ ಹಾಕಿದರು. ಬೆಳಿಗ್ಗೆಯಾದಾಗ, ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬದಲಿಗೆ, ಹಝ್ರತ್ ಅಲಿ(ರ) ಹಾಸಿಗೆಯಿಂದ ಏಳುವುದನ್ನು ಕಂಡಾಗ, ತಮ್ಮ ಪರಾಜಯದ ಕಾರಣದಿಂದ ಖುರೈಶಿಯರು ಹಲ್ಲು ಕಡಿಯುತ್ತಾ ನಿಂತರು ಹಾಗೂ ಅವರು ಹಝ್ರತ್ ಅಲಿಯನ್ನು(ರ) ಹಿಡಿದು ಹೊಡೆದರು. ಆದರೆ ಇದರಿಂದ ಏನು ಪ್ರಯೋಜನ?ಅಲ್ಲಾಹನ ತೀರ್ಮಾನ ಈಡೇರಿತು. ಹಝ್ರತ್ ಪೈಗಂಬರ್(ಸ) ಸುರಕ್ಷಿತವಾಗಿ ಮಕ್ಕದಿಂದ ಹೊರಗೆ ದಾಟಿದ್ದರು. ಆ ವಿಶ್ವಾಸದ ಬದಲಿಗೆ ತನಗೆ ಸಿಗುವ ಪ್ರತಿಫಲವೇನೆಂದು ಆ ಸಮಯದಲ್ಲಿ ಹಝ್ರತ್ ಅಲಿಗೆ(ರ) ಏನು ಗೊತ್ತಿತ್ತು? ಆದರೆ, ಆ ತ್ಯಾಗದ ಪ್ರತಿಫಲವಾಗಿ ಹಝ್ರತ್ ಅಲಿ(ರ) ಮಾತ್ರವಲ್ಲ, ಹಝ್ರತ್ ಅಲಿಯರ(ರ) ಮಕ್ಕಳು ಸಹ ಗೌರವ ಪಡೆಯುವರು ಎಂದು ಅಲ್ಲಾಹನಿಗೆ ತಿಳಿದಿತ್ತು. ಹೀಗೆ ಅಲ್ಲಾಹನು ಹಝ್ರತ್ ಅಲಿಯ(ರ) ಮೇಲೆ ಮಾಡಿದ ಮೊದಲ ಔದಾರ್ಯವೇನೆಂದರೆ, ಅವರಿಗೆ ಹಝ್ರತ್ ಪೈಗಂಬರರ(ಸ) ಅಳಿಯನಾಗುವ ಸೌಭಾಗ್ಯವನ್ನು ನೀಡಿದನು. ಎರಡನೆಯದಾಗಿ, ಹಝ್ರತ್ ಪೈಗಂಬರರ(ಸ) ಹೃದಯದಲ್ಲಿ ಅವರ ಮೇಲೆ ಎಷ್ಟು ಪ್ರೀತಿಯನ್ನು ಉಂಟುಮಾಡಿದ್ದನೆಂದರೆ, ಹಝ್ರತ್ ಪೈಗಂಬರ್(ಸ) ಹಲವಾರು ಬಾರಿ ಅವರನ್ನು ಹೊಗಳಿದ್ದರು. (ತಫ್‌ಸೀರೆ ಕಬೀರ್, ಸಂಪುಟ–7, ಪುಟ–25)

ಹೇಗಿದ್ದರೂ, ಒಂದೇ ಘಟನೆಯನ್ನು ವಿವಿಧ ಶೈಲಿಗಳಲ್ಲಿ, ವಿವಿಧ ರೀತಿಯಲ್ಲಿ ವಿವರಿಸಲಾಗಿದೆ. ಇದರಿಂದ ಘಟನೆಯ ವಿಶದ ವಿವರಣೆ ಲಭಿಸುತ್ತದೆ. ಕೆಲವು ಹೊಸ ಸಂಗತಿಗಳು ಗೊತ್ತಾಗುತ್ತವೆ. ಬೇರೆ ಬೇರೆ ಶೈಲಿಯಿಂದ ಘಟನೆಯ ವಿವಿಧ ಮಗ್ಗಲುಗಳು ಮುಂದೆ ಬರುತ್ತವೆ. ಪ್ರಸ್ತಾಪಿಸಲಾಗುವ ಸಹಾಬಿಯ ಅಥವಾ ಖಲೀಫರ ವ್ಯಕ್ತಿತ್ವದ ವಿವಿಧ ಮಜಲುಗಳು ಮುಂದಕ್ಕೆ ಬರುತ್ತವೆ. ಪ್ರತಿಯೊಬ್ಬ ಸಹಾಬಿಯರಿಗೆ ಹಝ್ರತ್ ಪೈಗಂಬರರೊಂದಿಗೆ(ಸ) ಇದ್ದ ಸಂಬಂಧದ ಬಗ್ಗೆ ಗೊತ್ತಾಗುತ್ತದೆ. ಒಂದೇ ಸಂಗತಿಯನ್ನು ಮುಂದಿರಿಸಲಾಗುತ್ತಿದೆ ಎಂದು ಕೆಲವು ಬಾರಿ ಅನಿಸುತ್ತದೆ. ಆದರೆ ಪ್ರತಿಯೊಂದು ಪರಾಮರ್ಶೆಯ ಶೈಲಿ ಬೇರೆ ಬೇರೆಯಾಗಿರತ್ತದೆ. ಆದ್ದರಿಂದ ಅವುಗಳನ್ನೆಲ್ಲ ಪ್ರಸ್ತಾಪಿಸುತ್ತೇನೆ. ಇಲ್ಲೂ ಹಝ್ರತ್ ಅಲಿಗೆ(ರ) ಸಂಬಂಧಿಸಿಯೂ ಈ ಸಂಗತಿಗಳೇ ನಮಗೆ ತಿಳಿದುಬಂದಿವೆ. ಹೇಗಿದ್ದರೂ ಹಝ್ರತ್ ಅಲಿಯ(ರ) ಪ್ರಸ್ತಾಪ ನಡೆಯುತ್ತಿದೆ. ಉಳಿದ ಭಾಗವನ್ನು ಮುಂದಿನ ಬಾರಿ ಪ್ರಸ್ತಾಪಿಸುವೆನು.

ಈ ವೇಳೆ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸಿ ಅವರ ಜನಾಝವನ್ನು ನಿರ್ವಹಿಸುವೆನು. ಅವರಲ್ಲಿ ಮೊದಲ ಪ್ರಸ್ತಾಪ ತಾರಿಖ್ ಮಹ್ಮೂದ್ ಸಾಹಿಬರ ಮಗನಾದ ಡಾಕ್ಟರ್ ತಾಹಿರ್ ಮಹ್ಮೂದ್ ಸಾಹಿಬ್ ಶಹೀದರದ್ದಾಗಿದೆ. ಇವರು ನಂಕಾನ ಜಿಲ್ಲೆಯ ಮುಡ್‌ಬಲೋಚಾನಿನವರಾಗಿರುವರು. ಅವರನ್ನು ಅಹ್ಮದಿಯ್ಯತಿನ ವಿರೋಧಿಗಳು ಕಳೆದ ಜುಮಾ ದಿನವಾದ ನವೆಂಬರ್ 20ಕ್ಕೆ ಜುಮಾ ನಮಾಝಿನ ನಂತರ ಫೈರಿಂಗ್ ಮಾಡಿ ಶಹೀದ್ ಮಾಡಿದ್ದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ಲಭಿಸಿದ ಮಾಹಿತಿಗಳ ಪ್ರಕಾರ, ದಿವಂಗತರು ತನ್ನ ತಂದೆಯಾದ ತಾರಿಕ್ ಮಹ್ಮೂದ್ ಸಾಹಿಬ್ ಮತ್ತು ಕುಟುಂಬದ ಇತರ ಸದಸ್ಯರೊಂದಿಗೆ ನವೆಂಬರ್ 20ಕ್ಕೆ ಜುಮಾ ನಮಾಝ್ ನಿರ್ವಹಿಸಲು ತನ್ನ ದೊಡ್ಡಪ್ಪರಾದ ಸನ್ಮಾನ್ಯ ಮುಹಮ್ಮದ್ ಹಫೀಝ್ ಸಾಹಿಬರ ಮನೆಯಲ್ಲಿ ಒಟ್ಟು ಸೇರಿದ್ದರು. ಜುಮಾ ನಮಾಝ್ ನಿರ್ವಹಿಸಿದ ನಂತರ ಸುಮಾರು ಎರಡುವರೆ ಗಂಟೆಗೆ ತನ್ನ ಮನೆಗೆ ಹೋಗಲಿಕ್ಕಾಗಿ ಹೊರಗೆ ಬಂದಾಗ, ಗಲ್ಲಿಯಲ್ಲಿ ಇರುವ ಮೆಹದ್ ಎಂಬ ಹೆಸರಿನ ಹದಿನಾರು ವಯಸ್ಸಿನ ಯುವಕ ಪಿಸ್ತೂಲಿನಿಂದ ಫೈರಿಂಗ್ ಮಾಡಿದ. ಫೈರಿಂಗಿನಿಂದ ಡಾಕ್ಟರ್ ತಾಹಿರ್ ಮಹ್ಮೂದ್ ಸಾಹಿಬರು ಘಟನೆ ಸ್ಥಳದಲ್ಲೇ ಶಹೀದ್ ಆದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಶಹೀದರಿಗೆ 31 ವರ್ಷ ಪ್ರಾಯವಿದ್ದಿತ್ತು. ಈ ಹಲ್ಲೆಯಿಂದ ಶಹೀದ್‌ರ ತಂದೆಯಾದ ತಾರಿಖ್ ಮಹ್ಮೂದ್ ಸಾಹಿಬ್‌ರ ತಲೆಗೆ ಗುಂಡು ತಗುಲಿದ ಕಾರಣದಿಂದ ಅವರು ತೀವ್ರವಾಗಿ ಗಾಯಗೊಂಡರು. ಈಗ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿದ್ದಾರೆ. ಮಾಜಿ ಸದರ್ ಮತ್ತು ಈಗ ಸೆಕ್ರಟರಿ ಮಾಲ್ ಆಗಿರುವ ಇವರಿಗೆ 55 ವರ್ಷ ಪ್ರಾಯವಿದೆ. ಅದೇ ರೀತಿಯಲ್ಲಿ, ಜಮಾಅತಿನ ಸದರ್ ಆಗಿರುವ 60 ವರ್ಷ ಪ್ರಾಯವಿರುವ ಅವರ ದೊಡ್ಡಪ್ಪರಾದ ಸಈದ್ ಮಖ್ಸೂದ್ ಸಾಹಿಬ್ ಮತ್ತು ಖುದ್ದಾಮುಲ್ ಅಹ್ಮದಿಯಾ ಖಾಇದ್ ಆಗಿರುವ, 26 ವರ್ಷ ಪ್ರಾಯದ ತಯ್ಯಬ್ ಮಹ್ಮೂದ್ ಸಾಹಿಬರು ಫೈರಿಂಗಿನಿಂದ ಗಾಯಗೊಂಡಿದ್ದ ಕಾರಣದಿಂದ ಸ್ವಲ್ಪ ಸಮಯ ಚಿಕಿತ್ಸೆಯಲ್ಲಿದ್ದರು. ಅವರು ಕ್ಷೇಮವಾಗಿದ್ದಾರೆ. ಆದರೆ ಶಹೀದರ ತಂದೆ ತೀವ್ರವಾಗಿ ಗಾಯಗೊಂಡಿರುವರು. ಹಲ್ಲೆಗಾರರು ಎರಡು ಮ್ಯಾಗಝಿನ್ ಫೈರಿಂಗ್ ಮಾಡಿದ ನಂತರ ಮೂರನೇ ಮ್ಯಾಗಝಿನ್ ಲೋಡ್ ಮಾಡುತ್ತಿದ್ದಾಗ, ಸೆರೆ ಹಿಡಿಯಲ್ಪಟ್ಟರು. ಹೇಗಿದ್ದರೂ ಅಹ್ಮದಿಯ್ಯತನ್ನು ವಿರೋಧಿಸಲು ಅಲ್ಲೀಗ ಹೊಸ ವಿಧಾನವನ್ನು ಶತ್ರುಗಳು ಕೈಗೊಂಡಿದ್ದಾರೆ. ಅದೇನೆಂದರೆ, ಅವರು ಕಿರಿವಯಸ್ಸಿನ ಹುಡುಗರನ್ನು ಕೆರಳಿಸಿ ಅವರ ಮೂಲಕ ಹಲ್ಲೆ ನಡೆಸುತ್ತಾರೆ. ಅನಂತರ ಹಲ್ಲೆ ನಡೆಸಿದವರು ಅಪ್ರಾಪ್ತ ವಯಸ್ಸಿನವರಾದ ಕಾರಣದಿಂದ ಶಿಕ್ಷೆಯನ್ನು ಕಮ್ಮಿ ಮಾಡಲು ಅಥವಾ ಕ್ಷಮಿಸಲು ನ್ಯಾಯಾಲಯದಲ್ಲಿ ಬೇಡುತ್ತಾರೆ. ಹೀಗೆ ಅವರು ವಿವಿಧ ರೀತಿಗಳನ್ನು ಪ್ರಯೋಗಿಸುತ್ತಾರೆ. ಒಂದು ಕಡೆ, ನಮಗೆ ಯಾವುದೇ ದೂರಿಲ್ಲ, ನಾವು ಅಹ್ಮದಿಯರ ಮೇಲೆ ಕಠಿಣವಾಗಿ ವರ್ತಿಸುತ್ತಿಲ್ಲ ಮತ್ತು ಅನ್ಯಾಯವಾದ ದೌರ್ಜನ್ಯವನ್ನು ಮಾಡುತ್ತಿಲ್ಲ ಎಂದು ಹೇಳುತ್ತಾರೆ. ಮತ್ತೊಂದೆಡೆ ಅಹ್ಮದಿಯರನ್ನು ಕೊಲ್ಲುತ್ತಿದ್ದಾರೆ. ಆಡಳಿತದ ಕೆಲವು ಅಧಿಕಾರಿಗಳು ಅಹ್ಮದಿಯರ ವಿರುದ್ಧ ಅನ್ಯಾಯವಾಗಿ ಮೊಕದ್ದಮೆಗಳನ್ನು ಕೂಡ ಮಾಡುತ್ತಾರೆ. ಹೇಗಿದ್ದರೂ ಅಲ್ಲಾಹನು ಅವರಿಗೆ ಬುದ್ಧಿಕೊಡಲಿ. ಇಲ್ಲದಿದ್ದರೆ, ಅಲ್ಲಾಹನು ಸ್ವತಃ ಅವರನ್ನು ಹಿಡಿಯಲಿ. ಶಹೀದರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಾತರಾದ ಮುಕರ್ರಮ್ ಹಕೀಂ ಮುಹಮ್ಮದ್ ಇಬ್ರಾಹೀಂ ಸಾಹಿಬರ ಮೂಲಕ ಪ್ರವೇಶಿಸಿತು. ಅವರು ಕುಟುಂಬದ ಇತರ ಸದಸ್ಯರೊಂದಿಗೆ ಹದಿಮೂರನೇ ವಯಸ್ಸಿನಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿಯರ ಕಾಲದಲ್ಲಿ ಬೈಅತ್ ಮಾಡಿದ್ದರು. ಶಹೀದ್ ಸಾಹಿಬರು ಇಸ್ಲಾಮಿಯಾ ಕಾಲೇಜ್ ಲಾಹೋರಿನಿಂದ ಎಫ್.ಎಸ್.ಸಿ.ಮಾಡಿದ್ದರು. ಅನಂತರ 2013ರಲ್ಲಿ ಮೋಸ್ಕೋ, ರಶ್ಯದಲ್ಲಿ ಎಂ.ಬಿ.ಬಿ.ಎಸ್ಸಿನ ಡಿಗ್ರಿ ಪಡೆದಿದ್ದರು. ಇತ್ತೀಚೆಗೆ ಪಿ.ಎಂ.ಸಿ.ಯ ಪರೀಕ್ಷೆಗಾಗಿ ತಯಾರಿ ಮಾಡುತ್ತಿದ್ದರು. ಫಝ್ಲ್ ಉಮರ್ ಆಸ್ಪತ್ರೆಯಲ್ಲೂ ಕೆಲಸ ಮಾಡುತ್ತಿದ್ದರು. ದಿವಂಗತರು ಹಲವಾರು ಸ್ವಭಾವ ವೈಶಿಷ್ಟ್ಯಗಳನ್ನು ಹೊಂದಿದ್ದರು. ಅವರಿಗೆ ಖಿಲಾಫತಿನೊಂದಿಗೆ ಅಪರಿಮಿತವಾದ ಪ್ರೇಮವಿತ್ತು. ಜಮಾಅತಿನ ಹುದ್ದೇದಾರರನ್ನು ಮತ್ತು ಮರ್ಕಝಿನ ಅತಿಥಿಗಳನ್ನು ಬಹಳವಾಗಿ ಗೌರವಿಸುತ್ತಿದ್ದರು. ಜಮಾಅತಿನ ಯಾವುದಾದರೂ ಕೆಲಸಕ್ಕಾಗಿ ಅವರನ್ನು ಕರೆದರೆ, ತಕ್ಷಣವೇ ಹಾಜರಾಗುತ್ತಿದ್ದರು. ಖುದ್ದಾಮುಲ್ ಅಹ್ಮದಿಯಾದ ಖಾಇದ್ ಎಂಬ ನೆಲೆಯಲ್ಲಿ ಸೇವೆ ಮಾಡಲು ಸೌಭಾಗ್ಯವನ್ನು ಪಡೆದಿದ್ದರು. ಹಲವು ಬಾರಿ ರೋಗಿಗಳನ್ನು ತನ್ನ ವಾಹನದಲ್ಲಿ ಆಸ್ಪತ್ರೆಗೆ ತಲುಪಿಸುತ್ತಿದ್ದರು. ಸದಾ ಸೇವೆಯಲ್ಲಿ ಮುಂದಿರುತ್ತಿದ್ದರು. ಅಹ್ಮದಿಯೇತರರೊಂದಿಗೂ ಅವರಿಗೆ ಉತ್ತಮ ಸಂಬಂಧವಿದ್ದಿತ್ತು. ಅಹ್ಮದಿಯೇತರಾದ ಹಲವಾರು ಸಭ್ಯ ವ್ಯಕ್ತಿಗಳು ಬಂದು, ಈ ದುರಂತದ ಬಗ್ಗೆ ಶೋಕ ವ್ಯಕ್ತಪಡಿಸಿದ್ದರು. ಈ ಕುಟುಂಬವೂ ದೀರ್ಘ ಕಾಲದಿಂದ ತೀವ್ರವಾದ ವಿರೋಧವನ್ನು ಎದುರಿಸುತ್ತಾ

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.2, Thursday, 07 January 2021, Issue No. 01

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

ಬಂದಿದೆ. 1974ರಲ್ಲೂ ವಿರೋಧಿಗಳು ಶಹೀದ್‌ರ ತಾತರ ಅಂಗಡಿಗೆ ಬೆಂಕಿ ಹಚ್ಚಿದ್ದರು. ಶಹೀದ್‌ರ ತಂದೆಯಾದ ತಾರಿಕ್ ಮಹ್ಮೂದ್ ಸಾಹಿಬ್‌ರನ್ನು 2006ರಲ್ಲಿ ವಿರೋಧಿಗಳು ತೀವ್ರವಾದ ದೌರ್ಜನ್ಯಕ್ಕೆ ಗುರಿಪಡಿಸಿದ್ದರು. ಕೆಲವು ದಿನಗಳ ಹಿಂದೆ, ಶಹೀದ್‌ರ ತಂದೆ, ಬಾಜಾರಲ್ಲಿ ದಾಟುಹೋಗುತ್ತಿದ್ದಾಗ, ಅಹ್ಮದಿಯ್ಯತ್ತಿನ ಶತ್ರುಗಳು ಅವರ ದೇಹದ ಮೇಲೆ ಉಗುಳಿದ್ದರು. ಈ ರೀತಿಯ ಕುಚೇಷ್ಟೆಗಳನ್ನು ಜನರು ಅವರೊಡನೆ ಹಿಂದಿನಿಂದಲೂ ಮಾಡುತ್ತಿದ್ದರು. ಆದರೆ ಅವರು ಅಲ್ಲಿ ಸ್ಥೈರ್ಯದಿಂದ ಇದ್ದರು.

ಸೇಂಟ್ ಪೀಟರಸ್ ಬರ್ಗ್ ರಶ್ಯಾದ ಮುಬಲ್ಲಿಗರಾದ ಸದಾಖತ್ ಅಹ್ಮದ್ ಸಾಹಿಬರು ಬರೆಯುತ್ತಾರೆ: ವಿದ್ಯಾಭ್ಯಾಸದ ಹೆಚ್ಚಿನ ಕಾಲವನ್ನು ಶಹೀದ್‌ರು ರಶ್ಯದ ಕಾಝ್ಝಾನ್ ತಾತಾರಿಸ್ತಾನಿನಲ್ಲಿ ಕಳೆದಿದ್ದರು. ಅನಂತರ ಉತ್ತಮ ಡಾಕ್ಟರ್ ಆಗಿ ಪಾಕಿಸ್ತಾನಕ್ಕೆ ಹೋಗಿದ್ದರು. ಡಾಕ್ಟರ್ ತಾಹಿರ್ ಮಹ್ಮೂದ್ ಸಾಹಿಬ್ ವಿದ್ಯಾಭ್ಯಾಸ ಕಾಲದಲ್ಲಿ ಜಮಾಅತಿನೊಂದಿಗೆ ಅತ್ಯಂತ ನಿಷ್ಠೆಯ ಸಂಬಂಧವನ್ನು ಇರಿಸಿದ್ದರು. ಜುಮಾ ನಮಾಝ್ ನಿರ್ವಹಿಸುವುದರಲ್ಲಿ ಮತ್ತು ಚಂದಾ ನೀಡುವುದರಲ್ಲಿ ಸಕ್ರಮರಾಗಿದ್ದರು. ಅವರ ಹಾಸ್ಟಲ್ ಮಿಶನ್ ಹೌಸಿನಿಂದ ತುಂಬ ದೂರದಲ್ಲಿದ್ದರೂ ಅವರು ಜಮಾಅತಿನ ಕಾರ್ಯಕ್ರಮದಲ್ಲಿ ನಿಯತವಾಗಿ ಮತ್ತು ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಮೆಡಿಕಲ್ ಗ್ರೂಪಿನವರಲ್ಲಿ ಇವರನ್ನು ಪ್ರತಿಭಾವಂತ ವಿಧ್ಯಾರ್ಥಿಗಳಲ್ಲಿ ಗಣಿಸಲಾಗುತ್ತಿತ್ತು. ಕಲಿಕೆಯ ಭಾಷೆ ಇಂಗ್ಲಿಷ್ ಆಗಿತ್ತು. ಆದರೆ ವೈಯಕ್ತಿಕ ಪರಿಶ್ರಮ ಮತ್ತು ಆಸಕ್ತಿಯಿಂದ ರಶ್ಯನ್ ಭಾಷೆಯನ್ನು ಸರಾಗವಾಗಿ ಮಾತನಾಡುತ್ತಿದ್ದರು. ಕಾಝ್ಝಾನಿನಲ್ಲಿ ಅವರು ಇದ್ದ ಹೋಸ್ಟಲಿನಲ್ಲಿ ತಾನು ಅಹ್ಮದಿಯಾಗಿರುವುದರ ಬಗ್ಗೆ ಎಲ್ಲರೊಡನೆ ಹೇಳಿದ್ದರು. ಇದರ ಕಾರಣದಿಂದ ವಿರೋಧವನ್ನು ಕೂಡ ಎದುರಿಸಬೇಕಾಗಿ ಬರುತ್ತಿತ್ತು. ಏಕೆಂದರೆ, ಅಲ್ಲೂ ಪಾಕಿಸ್ತಾನದ ವಿದ್ಯಾರ್ಥಿಗಳು ಇದ್ದರು. ಅವರಿಗೂ ಸಂದರ್ಭ ಸಿಕ್ಕುವಾಗಲೆಲ್ಲ ತಬ್ಲೀಗ್ ಮಾಡುತ್ತಿದ್ದರು. ಮುಬಲ್ಲಿಗ್ ಸಾಹಿಬರು ಬರೆಯುತ್ತಾರೆ: ನಾನು ಪಾಕಿಸ್ತಾನಕ್ಕೆ ಹೋದಾಗ, ಅಲ್ಲೂ ಅವರನ್ನು ಭೇಟಿಯಾಗಿದ್ದೆ. ಮುಢ್‌ಬಲೋಚಾನನಲ್ಲಿ ತುಂಬ ವಿರೋಧವಿದೆ ಎಂದು ಅವರು ಹೇಳಿದ್ದರು. ಆದ್ದರಿಂದ ರಬ್ವಗೆ ಹೋಗಲು ಇಚ್ಛಿಸಿದ್ದರು. ರಬ್ವದಲ್ಲಿ ಮನೆಯನ್ನೂ ಸಹ ಕಟ್ಟಿದ್ದರು.

ಕಾಝ್ಝಾನ್ ತಾತಾರಿಸ್ತಾನದ ರಶ್ಯನ್ ಅಹ್ಮದಿಯಾದ ಫರೀದ್ ಬ್ರಾಗೀಮೋಫ್ ಬರೆಯುತ್ತಾರೆ: ಶಹೀದ್ ಸಾಹಿಬರು ರಶ್ಯನ್ ಭಾಷೆಯನ್ನು ಬೇಗನೇ ಕಲಿತಿದ್ದರು. ಹಸನ್ಮುಖ ಮತ್ತು ಸುಸ್ವಭಾವ ಹೊಂದಿದ್ದವರಾಗಿದ್ದರು. ಅವರ ನಗುವಿನಿಂದ ಪ್ರಕಾಶ ಬೀರುತ್ತಿತ್ತು.

ದಿವಂಗತರು ತನ್ನ ತಂದೆಯಾದ ತಾರಿಖ್ ಮಹ್ಮೂದ್ ಸಾಹಿಬರನ್ನಲ್ಲದೆ, ತಾಯಿಯಾದ ಸನ್ಮಾನ್ಯ ಶಮೀಂ ಅಖ್‌ತರ್ ಸಾಹಿಬ ಮತ್ತು ಜರ್ಮನಿಯಲ್ಲಿರುವ ಸಹೋದರರಾದ ಖಾಸಿಂ ಮಹ್ಮೂದ್ ಸಾಹಿಬ್ ಮತ್ತು ಸಹೋದರಿಯಾದ ಫಾಇಝ ಮಹ್ಮೂದ್ ವೈಫ್ ಆಫ್ ನಸೀರ್ ಅಹ್ಮದ್‌ರನ್ನು ಅಗಲಿರುವರು. ಅಲ್ಲಾಹನು ಶಹೀದ್‌ರ ಪದವಿಗಳನ್ನು ಉನ್ನತಗೊಳಿಸಲಿ. ಜನ್ನತುಲ್ ಫಿರ್‌ದೌಸಿನಲ್ಲಿ ಶ್ರೇಷ್ಠ ಸ್ಥಾನವನ್ನು ನೀಡಲಿ. ಗಾಯಾಳುಗಳಿಗೆ ಆರೋಗ್ಯ ಮತ್ತು ಪರಿಪೂರ್ಣ ಮತ್ತು ತ್ವರಿತವಾದ ಶಮನವನ್ನು ನೀಡಲಿ. ಎಲ್ಲ ಗಾಯಾಳುಗಳನ್ನು ಎಲ್ಲ ರೀತಿಯ ತೊಡಕುಗಳಿಂದ ಸಂರಕ್ಷಿಸಲಿ. ಅವರ ಇತರ ಸಂಬಂಧಿಕರನ್ನು ಮತ್ತು ಆಪ್ತರನ್ನು ಅಲ್ಲಾಹನು ತನ್ನ ಅನುಗ್ರಹಗಳಿಂದ ಮತ್ತು ಕಾರುಣ್ಯಗಳಿಂದ ದಯಪಾಲಿಸಲಿ.

ಮುಂದಿನ ಜನಾಝ ಸಿರಾಲಿಯೋನಿನ ನ್ಯಾಶನಲ್ ಸೆಕ್ರಟರಿಯಾದ ಸನ್ಮಾನ್ಯ ಜಮಾಲುದ್ದೀನ್ ಮಹ್ಮೂದ್‌ರವದ್ದಾಗಿದೆ. ನವೆಂಬರ್ 3ರಂದು ಅಚಾನಕ್ಕಾದ ಹೃದಯಾಘಾತದಿಂದ ಮೃತಪಟ್ಟರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಕಳೆದ 16 ವರ್ಷಗಳಿಂದ ಜನರಲ್ ಸೆಕ್ರಟರಿಯೆಂಬ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಮಿಶನರಿ ಇಂಚಾರ್ಜ್ ಆದ ಸಈದುರ್ರಹ್ಮಾನ್ ಸಾಹಿಬರು ಬರೆಯುತ್ತಾರೆ: ಅವರ ಇತರ ಹಲವು ವೈಶಿಷ್ಟ್ಯಗಳಲ್ಲದೆ, ಒಂದು ಹಿರಿಯ ವೈಶಿಷ್ಟ್ಯವೇನೆಂದರೆ, ಅಹ್ಮದಿಯರನ್ನು ಸಮುದಾಯಿಕ ಹುಸಿ ಹೆಮ್ಮೆಯಿಂದ ರಕ್ಷಿಸಿ ಒಂದು ಕುಟುಂಬವನ್ನು ಮಾಡುವ ಕಾರ್ಯದಲ್ಲಿ ಕಾರ್ಯನಿರತರಾಗಿದ್ದರು. ಬಹಳ ಯುಕ್ತಿ ಮತ್ತು ನಿಷ್ಠೆಯಿಂದ ಕೆಲಸ ಮಾಡುತ್ತಿದ್ದರು. ಸುಮಾರು 2000 ಜನರು ಅವರ ಜನಾಝ ನಮಾಝ್ ಮತ್ತು ದಫನ್ ಕಾರ್ಯದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಇಬ್ಬರು ಸರ್ಕಾರಿ ಮಂತ್ರಿಗಳು, ಚೀಫ್ ಆಫ್ ಆರ್ಮಿ ಸ್ಟಾಫ್ ಮತ್ತು ಸೆರಲಿಯೋನಿನ ಹಲವಾರು ಸದಸ್ಯರು, ಪಾರ್ಲಿಮೆಂಟಿನ ಮೆಂಬರರು, ಪ್ಯಾರಮೌಂಟ್ ಚೀಫ್ ಸಮೇತ ಹಲವಾರು ಉನ್ನತ ಸರ್ಕಾರಿ ಅಧಿಕಾರಿಗಳು ಉಪಸ್ಥಿತರಿದ್ದರು. ನುಸ್ರತ್ ಜಹಾನನ ಸೆಕ್ರಟರಿಯಾದ ಮುಬಾರಕ್ ತಾಹಿರ್ ಸಾಹಿಬರು ಬರೆಯುತ್ತಾರೆ: ದಿವಂಗತರು ತುಂಬ ನಿಷ್ಠಾವಂತ, ತ್ಯಾಗಶೀಲ, ಮನಸ್ಸಾರೆ ಜಮಾಅತಿನ ಸೇವೆ ಮಾಡುವ ವ್ಯಕ್ತಿಯಾಗಿದ್ದರು. ದೀರ್ಘ ಕಾಲದಿಂದ ಜನರಲ್ ಸೆಕ್ರಟರಿಯಾಗಿ ಸೇವೆ ಸಲ್ಲಿಸುವ ಸೌಭಾಗ್ಯ ಪಡೆಯುತ್ತಿದ್ದರು. ಅವರು ಅಹ್ಮದಿಯಾ ಪ್ರಿಂಟಿಂಗ್ ಪ್ರೆಸ್ ಸೆರಲಿಯೋನಿನ ವೈಸ್ ಮ್ಯಾನೆಜರ್ ಆಗಿದ್ದರು. ದಿವಂಗತರು ಘಾನದವರಾಗಿದ್ದರು. ಅವರ ತಂದೆಯಾದ ಸನ್ಮಾನ್ಯ ಇಬ್ರಾಹೀಂ ಸಾಹಿಬರನ್ನು ಹಝ್ರತ್ ಮೌಲಾನ ನಝೀರ್ ಅಹ್ಮದ್ ಮುಬಶ್ಶಿರ್ ಸಾಹಿಬರು ಶಿಕ್ಷಣದ ಮೈದಾನದಲ್ಲಿ ಸೇವೆ ಸಲ್ಲಿಸಲು ಸೆರಲಿಯೋನಗೆ ಕಳುಹಿಸಿದ್ದರು. ಮುಬಾರಕ್ ಸಾಹಿಬರು ಬರೆಯುತ್ತಾರೆ: ಹದಿಮೂರು ವರ್ಷಗಳ ತನಕ ಜಮಾಲ್ ಸಾಹಿಬರು ನನ್ನೊಂದಿಗೆ ರೋಕೋಪೂರಿನಲ್ಲಿದ್ದು. ಅವರ ತಂದೆ ಅವರನ್ನು ಶಿಕ್ಷಣಕ್ಕಾಗಿ ಅವರ ಬಳಿ ಬಿಟ್ಟಿದ್ದರು. ದಿವಂಗತರು ಆರಂಭದಿಂದಲೇ ಧರ್ಮನಿಷ್ಠೆಯುಳ್ಳ, ಜಮಾಅತಾದ ನಮಾಝ್ ಮತ್ತು ಜಮಾಅತಿನ ಇತರ ಸೇವೆಗಳಲ್ಲಿ ಮುಂದಿದ್ದರು. ರೋಕೋಪೂರಿನ ಖುದ್ದಾಮ್‌ರೊಡನೆ ಸೇರಿಕೊಂಡು ತಬ್ಲೀಗ್ ಮತ್ತು ಧರ್ಮಪ್ರಚಾರದ ಕೆಲಸಗಳನ್ನು ಮಾಡುತ್ತಿದ್ದರು.

ಸೆರಲಿಯೋನಿನ ರಖೀಂ ಪ್ರೆಸ್ಸಿನ ಇಂಚಾರ್ಜ್ ಆದ ಉಸ್ಮಾನ್ ಸಾಹಿಬರು ಹೇಳುತ್ತಾರೆ: ಜಮಾಲುದ್ದೀನ್ ಮಹ್ಮೂದ್ ಸಾಹಿಬರು ನನಗಿಂತ ಮುಂಚಿನಂದ ದೀರ್ಘಕಾಲದಿಂದ ಇಲ್ಲಿ ಇಂಚಾರ್ಜ್ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ನಾನು ಅವರೊಂದಿಗೆ 12ವರ್ಷಗಳ ಕಾಲ ಇದ್ದೆ. ಈ ಕಾಲಾವಧಿಯಲ್ಲಿ ನಾನು ಅವರಿಗಿಂತ ಕಿರಿಯವನು ಮತ್ತು ಅನುಭವವಿಲ್ಲದವನು ಎಂಬ ರೀತಿಯಲ್ಲಿ ಅವರು ಎಂದಿಗೂ ನನ್ನನ್ನು ನೋಡಿರಲಿಲ್ಲ. ಯಾವಾಗಲೂ ಗೌರವಭಾವದಿಂದ ವರ್ತಿಸುತ್ತಿದ್ದರು. ನೀವು ಮುಬಲ್ಲಿಗ್ ಆಗಿದ್ದೀರಿ ಮತ್ತು ನಿಮ್ಮನ್ನು ಖಲೀಫತುಲ್ ಮಸೀಹ್‌ರು ನಿಶ್ಚಯಿಸಿರುವರು ಎಂದು ಅವರು ನನ್ನೊಡನೆ ಹೇಳುತ್ತಿದ್ದರು. ಅವರು ನನ್ನ ಮಾತನ್ನು ಎಂದಿಗೂ ಅನುಸರಿಸದೇ ಇರುತ್ತಿರಲಿಲ್ಲ. ವಿಧೇಯತ್ವ ಮತ್ತು ವಿನಯಭಾವ ಅವರಲ್ಲಿ ಎಷ್ಟಿತ್ತೆಂದರೆ, ಯಾವುದಾದರೂ ಕೆಲಸ ಅವರೊಡನೆ ಮಾಡಲು ಹೇಳಿದರೆ, ಬೇಗನೇ ಅದನ್ನು ಶುರುಮಾಡುತ್ತಿದ್ದರು ಮತ್ತು ಅದನ್ನು ಪೂರ್ತಿ ಮಾಡಲು ಎಲ್ಲ ರೀತಿಯಲ್ಲೂ ಪ್ರಯತ್ನಿಸುತ್ತಿದ್ದರು. ನಾನು ಅವರಿಂದ ಈ ಕಾಲಾವಧಿಯಲ್ಲಿ ಹಲವಾರು ಸಂಗತಿಗಳನ್ನು ಕಲಿತೆ. ದಿನಾಲೂ ಬಿಡದೇ ತಹಜ್ಜುದ್ ನಮಾಝ್ ಅನುಷ್ಠಿಸುತ್ತಿದ್ದರು. ಜಮಾಅತಾದ ನಮಾಝ್‌ಗಳನ್ನು ಬಹಳ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ನಮಾಝ್ ಸಹ ಬಹಳ ಮನೋಹರವಾದ ರೀತಿಯಲ್ಲಿ ಅನುಷ್ಠಿಸುತ್ತಿದ್ದರು. ಸದಾ ಅತ್ಯಂತ ನಮ್ರತೆ, ವಿಧೇಯತ್ವ ಮತ್ತು ಸಮಾಧಾನದಿಂದ ನಮಾಝ್ ನಿರ್ವಹಿಸುತ್ತಿದ್ದರು. ಅವರಿಗೆ ಖಿಲಾಫತಿನೊಂದಿಗೆ ತುಂಬ ಪ್ರೇಮವಿತ್ತು. ಪ್ರತಿಯೊಂದು ಖುತ್‌ಬವನ್ನು ಕುಳಿತುಕೊಂಡು ಅತ್ಯಂತ ಆದರದಿಂದ ಕೇಳುತ್ತಿದ್ದರು.

ಸೆರಲಿಯೋನಿನ ಸಂಸ್ಕೃತಿಯ ಪ್ರಕಾರ ಜಮಾಲ್ ಸಾಹಿಬರು ಹಲವಾರು ಮಕ್ಕಳನ್ನು ತಮ್ಮ ಮನೆಯಲ್ಲಿ ಇರಿಸಿದ್ದರು. ತನ್ನ ಖರ್ಚಿನಂದ ಶಿಕ್ಷಣವನ್ನು ಒದಗಿಸಿಕೊಟ್ಟಿದ್ದರು. ಅವರಲ್ಲಿ ಹಲವರು ಉತ್ತಮ ನೌಕರಿಗಳನ್ನು ಮಾಡುತ್ತಿದ್ದಾರೆ.ಅವರೆಲ್ಲರೂ ಜಮಾಲ್ ಸಾಹಿಬರನ್ನು ಗೌರವಭಾವ ಮತ್ತು ಪ್ರೀತಿಯಿಂದ ನೆನಪಿಸುತ್ತಾರೆ.

ಮುಬಲ್ಲಗ್‌ರಾದ ಖಮರ್ ಸಾಹಿಬ್ ಬರೆಯುತ್ತಾರೆ: ಜಮಾಅತಿನ ಯೋಜನೆಗಳಲ್ಲಿ ಉತ್ಸಾಹದಿಂದ ಭಾಗಿಯಾಗುತ್ತಿದ್ದರು. ತಮ್ಮ ತಂದೆ ತಾಯಿ ಮತ್ತು ಇತರ ಹಿರಿಯರ ಹೆಸರಲ್ಲಿ ತಹ್ರೀಕ್ ಜದೀದ್ ಮತ್ತು ವಖ್ಫೆ ಜದೀದ್ ಚಂದಗಳನ್ನು ಹೆಚ್ಚಿಗೆ ನೀಡುತ್ತಿದ್ದರು. ಯಾವಾಗಲಾದರೂ ತಮ್ಮ ಊರಾದ ರೋಕೋಪುರಿಗೆ ಬರುವಾಗ, ಕೆಲಸಗಳಲ್ಲಿ ನಿರತರಾಗಿದ್ದರೂ ಸಮಯಕ್ಕೆ ಸರಿಯಾಗಿ ಮಸೀದಿಗೆ ಬರುತ್ತಿದ್ದರು. ಸಾಮಾನ್ಯವಾಗಿ ಮಗ್‌ರಿಬ್ ಮತ್ತು ಇಶಾ ನಮಾಝಿನ ನಡುವೆ ಇರುವ ಸಮಯದಲ್ಲಿ ಜನರಿಗೆ ಜಮಾಅತಿನ ಅಧ್ಯಾಪನೆಗಳನ್ನು ಹೇಳಿಕೊಡುತ್ತಿದ್ದರು. ವಿಶೇಷವಾಗಿ ಖಿಲಾಫತ್ ಅಹ್ಮದಿಯಾದ ಪ್ರಾಮುಖ್ಯ, ಅನುಗ್ರಹಗಳು ಮತ್ತು ಅದರೊಂದಿಗೆ ಸಂಬಂಧವಿರಿಸುವ ವಿಷಯಗಳನ್ನು ಬಹಳ ಉತ್ತಮ ರೀತಿಯಲ್ಲಿ ಮನವರಿಕೆ ಮಾಡಿಸಿ ಕೊಡುತ್ತಿದ್ದರು. ಎಲ್ಲ ಜನರೊಡನೆ ಪ್ರೀತಿ ಮತ್ತು ಪ್ರೇಮದ ಸಂಬಂಧವನ್ನು ಹೊಂದಿದ್ದರು. ಅವರ ನಿಧನದ ವಾರ್ತೆಯನ್ನು ಕೇಳಿ ಅಹ್ಮದಿಯರು ಮತ್ತು ಅಹ್ಮದಿಯೇತರು ಸಹ ತುಂಬ ದುಃಖಿತರಾಗಿದ್ದರು. ಆದ ಕಾರಣದಿಂದಲೇ ಅವರ ಜನಾಝದಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರು ಬಂದು ಸೇರಿದ್ದರು. ಆಸುಪಾಸಿನಿಂದಲ್ಲದೇ, ದೀರ್ಘವಾದ ಯಾತ್ರೆಯನ್ನು ಮಾಡಿ ಸಹ ಜನರು ಬಂದಿದ್ದರು.

ದಿವಂಗತರಿಗೆ ಇಬ್ಬರು ಪತ್ನಿಯಂದಿಯರಿದ್ದರು. ಮೊದಲ ಪತ್ನಿ ಅವರಿಂದ ಬೇರ್ಪಟ್ಟಿದ್ದರು. ಆದರೆ ಅವರಿಂದಲೇ ಮಕ್ಕಳಾಗಿ ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರಿದ್ದರು. ಒಬ್ಬ ಪುತ್ರನ ವಿವಾಹವಾಗಿದೆ. ಒಬ್ಬಳು ಮಗಳು ಆಸ್ಟ್ರೇಲಿಯಾದಲ್ಲಿ ಇದ್ದಾಳೆ. ಇತರರು ಘಾನ ಮತ್ತು ಸೆರಲಿಯೋನಿನಲ್ಲಿ ಕಲಿಯುತ್ತಿದ್ದಾರೆ. ಎರಡನೇ ಪತ್ನಿಯಿಂದ ಅವರಿಗೆ ಮಕ್ಕಳಿಲ್ಲ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ ರಬ್ವದ ಕಾನೂನು ಸಲಹೆಗಾರರೂ ನಾಝಿರ್ ನಾಝಿಂ ಜಾಇದಾದ್ ಆಗಿದ್ದ ದಿವಂಗತ ಚೌಧರಿ ಸಲಾಹುದ್ದೀನ್ ಸಾಹಿಬ್‌ರ ಪತ್ನಿಯಾದ ಅಮತುಸ್ಸಲಾಮರದ್ದಾಗಿದೆ. ಅಕ್ಟೋಬರ್ 19ರಂದು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಪತಿಯಾದ ಚೌಧರಿ ಸಲಾಹುದ್ದೀನ್ ಸಾಹಿಬರು, ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯರಾದ ಚೌಧರಿ ಅಬ್ದುಲ್ಲಾಹ್ ಖಾನ್ ಸಾಹಿಬ್ ಮತ್ತು ಹಝ್ರತ್ ಹಮ್‌ನ ಬೀಬಿ ಸಾಹಿಬರ ಮೊಮ್ಮಗರಾಗಿದ್ದರು. ಇಬ್ಬರೂ ಸಹಾಬಿಯರಾಗಿದ್ದರು. ಅಮತುಸ್ಸಲಾಮ್‌ರ ಮಗನಾದ ನಈಮುದ್ದೀನ್ ಸಾಹಿಬರು ಬರೆಯುತ್ತಾರೆ: ನಮ್ಮ ಜೀವಿತದಲ್ಲಿ ಅಳಿಸಲು ಸಾಧ್ಯವಿಲ್ಲದ ತಾಯಿಯ ಬಗ್ಗೆಗಿನ ನೆನಪೇನೆಂದರೆ, ಅವರು ನಮ್ಮ ನಮಾಝಿನ ಬಗ್ಗೆ ಗಮನವಹಿಸುತ್ತಿದ್ದರು. ಇದು ಅವರು ಅತ್ಯಂತ ಕಟ್ಟುನಿಟ್ಟಾಗಿ ಶ್ರದ್ಧೆವಹಿಸುತ್ತಿದ್ದ ಸಂಗತಿಯಾಗಿತ್ತು. ನಮ್ಮ ಮನೆ ಒಂದು ಹಾಸ್ಟೆಲಿನ ಹಾಗೆಯಿತ್ತು. ಏಕೆಂದರೆ, ಹಲವಾರು ಆಪ್ತರು ಶಿಕ್ಷಣದ ಉದ್ದೇಶದಿಂದ ನಮ್ಮ ಮನೆಯಲ್ಲಿ ತಂಗಿದ್ದರು. ಅವರು ಹಲವಾರು ವರ್ಷಗಳು ಅಲ್ಲಿರುತ್ತಿದ್ದರು. ನಮ್ಮ ಈ ಆಪ್ತರೆಲ್ಲರೂ ನಮಾಝ್ ಸರಿಯಾಗಿ ಮತ್ತು ಕಟ್ಟುನಟ್ಟಾಗಿ ನಿರ್ವಹಿಸುವುದರ ಬಗ್ಗೆ ವಿಶೇಷವಾಗಿ ಗಮನವಹಿಸುತ್ತಿದ್ದರು. ಎಲ್ಲ ಮಕ್ಕಳಿಗೂ ಸ್ವತಃ ಪವಿತ್ರ ಖುರ್‌ಆನ್ ಕಲಿಸಿದ್ದರು. ಹಿರಿಯ ಮಕ್ಕಳಿಗಾಗಿ ಉಸ್ತಾದ್‌ರನ್ನು ಸಹ ನಿಶ್ಚಯಿಸಿದ್ದರು. ನನ್ನನ್ನು ಹೆಚ್ಚು ಪ್ರಭಾವಿತಗೊಳಿಸಿದ ಅವರ ಎರಡನೇ ಗುಣವೇನೆಂದರೆ, ಮನೆಯಲ್ಲಿ ತಂಗಿದ್ದ ಎಲ್ಲರಿಗೂ ಸಾಧ್ಯವಾದ ಎಲ್ಲ ರೀತಿಯಲ್ಲಿ ಆರಾಮ ಮತ್ತು ಸುಖವನ್ನು ಒದಗಿಸಿ ಕೊಡಲು ಶ್ರಮಿಸುತ್ತಿದ್ದರು. ಯಾವುದಾದರೂ ದಿನಸೇವಕಿ ರಜೆ ಮಾಡಿದರೆ, ತನ್ನ ಮತ್ತು ಇತರ ಎಲ್ಲ ಮಕ್ಕಳ ಬಟ್ಟೆಗಳನ್ನು ಸ್ವತಃ ಒಗೆಯುವುದರಿಂದ ಹಿಂಜರಿಕೆ ತೋರಿಸುತ್ತಿರಲಿಲ್ಲ. ನಮ್ಮ ತಾತರ ಮತ್ತು ಅಜ್ಜಿಯರ ಮನೆಯ ಸದಸ್ಯರು ಹೆಚ್ಚಾಗಿ ರಬ್ವಗೆ ಬಂದು ಹೋಗುತ್ತಿದ್ದರು. ಜಮಾಅತಿನ ಜವಾಬ್ದಾರಿಗಳ ಕಾರಣದಿಂದ ತಂದೆಯವರು ಹೆಚ್ಚಾಗಿ ಮನೆಯಲ್ಲಿರುತ್ತಿರಲಿಲ್ಲ. ಆದ್ದರಿಂದ ಹೀಗೆ ಬರುವ ಎಲ್ಲರ ಅತಿಥಿ ಸತ್ಕಾರವನ್ನು ಉತ್ತಮ ರೀತಿಯಲ್ಲಿ ಮಾಡುತ್ತಿದ್ದರು. ನಾನು ಹಿರಿಯ ಮಗನಾದ ಕಾರಣದಿಂದ ಸರಿಯಾಗಿ ಅತಿಥಿ ಸತ್ಕಾರ ಮಾಡಲು ಮತ್ತು

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.